ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 11 ಸೋಮವಾರ 2022

ಸಂಪುಟ: 43 | ಸಂಚಿಕೆ: 86 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com


₹4

ಮೈಸೂರಲ್ಲಿ ತ್ಯಾಗ, ಬಲಿದಾನದ ಸಂಕೇತ, ಭಕ್ತಿ ಭಾವದ ಬಕ್ರೀದ್ ಆಚರಣೆ

ಮೈಸೂರು, ಜು.10 (ಆರ್‌ಕೆಬಿ)– ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮೈಸೂರಿನಲ್ಲಿ ಭಾನುವಾರ ಮುಸ್ಲಿಂ ಸಮುದಾಯದ ಬಾಂಧವರು ಭಕ್ತಿ ಭಾವದಿಂದ ಆಚರಿಸಿದರು. ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನ ಹಾಗೂ ವಿವಿಧ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಪರಸ್ಪರ ಆಲಂಗಿಸಿ, ಶುಭಾಶಯ ವಿನಿಮಯ ಮಾಡಿಕೊಂಡರು.

ಕೋವಿಡ್ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ಎಲ್ಲಾ ರೀತಿಯ ಸಭೆಗಳನ್ನು ನಿಷೇಧಿಸಿದ್ದರಿಂದ ಮೂರು ವರ್ಷಗಳಿಂದ ಹಬ್ಬ ಆಚರಿಸಲಾಗಿರಲಿಲ್ಲ. ಮಳೆ ಮತ್ತು ಚಳಿಯ ವಾತಾವರಣ ಇದ್ದುದರಿಂದ ಭಾನುವಾರ ಬೆಳಗ್ಗೆ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆ ವೇಳೆ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಮುಸ್ಲಿಂ ಬಾಂಧವರು ಭಾಗವಹಿಸಿರಲಿಲ್ಲ. ಅಲ್ಲದೆ ಸಮುದಾಯದ ಸದಸ್ಯರು ವಿವಿಧ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಆದ್ಯತೆ ನೀಡಿದರು. ಬೆಳಗ್ಗೆ 6.30ಕ್ಕೆ ಆರಂಭವಾದ ಪ್ರಾರ್ಥನೆಗಳು ಬೆಳಗ್ಗೆ 11 ಗಂಟೆಯವರೆಗೆ ನಡೆಯಿತು. ಈದ್ಗಾ ಮೈದಾನದಲ್ಲಿ ಮೈಸೂರು ಹಜರತ್ ಮೌಲಾನ ಸರ್ಖಾಜಿ ಮೊಹಮ್ಮದ್ ಉಸ್ಮಾನ್ ಷರೀಫ್ ಅವರು ಪ್ರಾರ್ಥನೆ ಸಲ್ಲಿಸಿದರು.

ಸರ್ವಶಕ್ತ ಅಲ್ಲಾಹನ ಸಲಹೆಯ ಮೇರೆಗೆ ಪ್ರವಾದಿ ಇಬ್ರಾಹಿಂ ಖಲೀಲುಲ್ಲಾ ಅವರು ತಮ್ಮ ಪ್ರೀತಿಯ ಪುತ್ರ ಪ್ರವಾದಿ ಇಸ್ಮಾಯಿಲ್ ಜಬೀಉಲ್ಲಾನನ್ನು ದೇವರಿಗೆ ತ್ಯಾಗ ಮಾಡಲು ನಿರ್ಧರಿಸಿ, ತಮ್ಮ ತ್ಯಾಗ ಮತ್ತು ಬಲಿದಾನದ ಮೂಲಕ ದೇವರನ್ನು ಒಲಿಸಿಕೊಂಡ ದ್ಯೋತಕವಾಗಿ ಈ ಹಬ್ಬ ಆಚರಿಸಲಾಗುತ್ತದೆ ಎಂದು ಅವರ ತ್ಯಾಗವನ್ನು ಸರ್ಖಾಜಿ ಸ್ಮರಿಸಿದರು.





ಬಕ್ರೀದ್ ಹಬ್ಬದ ಅಂಗವಾಗಿ ಮುಸ್ಲಿಂ ಬಾಂಧವರು ಮೈಸೂರಿನ ತಿಲಕ್‌ನಗರದ ಹಳೇ ಈದ್ಗಾ ಮೈದಾನದಲ್ಲಿ ವಿಶೇಷ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ದೇಶದ ಕಲ್ಯಾಣಕ್ಕಾಗಿ ಮತ್ತು ಪ್ರತಿಯೊಬ್ಬರನ್ನು ಭಯಾನಕ ರೋಗಗಳಿಂದ ರಕ್ಷಿಸಲು ದೇವರಲ್ಲಿ ಪ್ರಾರ್ಥಿಸಿದರು. ಈ ಹಬ್ಬದ ಸಂದರ್ಭದಲ್ಲಿ ತಮ್ಮ ಆಹಾರವನ್ನು ಮೂರು ಭಾಗ ಮಾಡಿ, ಒಂದು ಭಾಗವನ್ನು ಸಂಬಂಧಿಗಳಿಗೆ, ಇನ್ನೊಂದು ಭಾಗ ಬಡವರಿಗೆ ಹಾಗೂ ಉಳಿದ ಮತ್ತೊಂದು ಭಾಗವನ್ನು ಸ್ವಂತಕ್ಕೆ ಬಳಸುವ ಮೂಲಕ ಭಕ್ತಿ ಪ್ರದರ್ಶಿಸಲಾಗುತ್ತದೆ. ಇದು ಸಮಾನತೆಯ ಸಂಕೇತವೂ ಹೌದು.

ಮೈಸೂರಿನ ರಾಜೀವ್‌ನಗರ, ಗೌಸಿಯಾನಗರದಲ್ಲಿರುವ ಈದ್ಗಾ ಮೈದಾನಗಳು ಮತ್ತು ನಗರದಾದ್ಯಂತ ಅಶೋಕ ರಸ್ತೆ, ಉದಯಗಿರಿ, ಭಾರತ್‌ನಗರ ಮತ್ತು ಇತರೆಡೆ ವಿವಿಧ ಮಸೀದಿಗಳಲ್ಲಿಯೂ ಪ್ರಾರ್ಥನೆ ಸಲ್ಲಿಸಲಾಯಿತು. ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ನಡೆದ ಪ್ರಾರ್ಥನೆಯಲ್ಲಿ ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ನಗರ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿಖಾನ್, ಮಹಮ್ಮದ್ ಮುಮ್ತಾಜ್ ಅಹಮದ್, ಜಮೀಲ್ ಅಹ್ಮದ್ ಅಶ್ರಫಿ, ಮೌಲಾನಾ ಅಬ್ದುಲ್ ಸಲಾಂ ರಜ್ವಿ, ವಕ್ಫ್ ಅಧಿಕಾರಿ ಮುಷ್ತಾಕ್ ಅಹ್ಮದ್, ಶಬ್ನಮ್ ಸಯೀದ್, ಎಂ.ರಸೂಲ್ ಇನ್ನಿತರರು ಭಾಗವಹಿಸಿದ್ದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಗರ ಪೊಲೀಸರು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಚಾಮುಂಡಿಬೆಟ್ಟದ ನಂದಿ ರಸ್ತೆಗೆ ಉರುಳಿ ಬಿದ್ದ ಬಂಡೆ
ಪುಟ–2

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಹಲವು ಪ್ರವಾದಿಗಳ ಆಶ್ರಯ ತಾಣ: ಎಸ್.ಎಂ.ಕೃಷ್ಣ ಬಣ್ಣನೆ
ಪುಟ–3

ಅಬ್ಬರಿಸುತ್ತಿರುವ ಮಳೆ ತತ್ತರಿಸಿದ ಕೊಡಗು



ಕೊಯನಾಡು ಮನೆಗಳಿಗೆ ನುಗ್ಗಿದ ನೀರು.



ಭಾಗಮಂಡಲ ತಣ್ಣೀಮಾನಿಯಲ್ಲಿ ಕೊಚ್ಚಿ ಹೋದ ಮೋರಿ.

ಮಡಿಕೇರಿ ತಾಲೂಕಿನ ಗಾಳಿಬೀಡು ವ್ಯಾಪ್ತಿಯಲ್ಲಿ ದಾಖಲೆಯ 225 ಮಿ.ಮೀ ಮಳೆಯಾಗಿದೆ. ಸೋಮವಾರಪೇಟೆಯ ಶಾಂತಳ್ಳಿಗೆ 183 ಮಿ.ಮೀ, ಭಾಗಮಂಡಲ 174.4, ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲಕ್ಕೆ 107.2 ಮಿ.ಮೀ, ಕಳಕೇರಿ ನಿಡುಗಣೆ ವ್ಯಾಪ್ತಿಯಲ್ಲಿ 126 ಮಿ.ಮೀ, ಬೇಂಗೂರು 124.5, ಕರಿಕೆ 132.5, ಚೆಂಬು 133, ಪೆರಾಜೆ 125, ಮಡಿಕೇರಿ ಹೋಬಳಿ 127.5 ಮಿ.ಮೀ. ಮಳೆಯಾಗಿದೆ

ಗುಡ್ಡ ಕುಸಿದು ಶಾಲೆ ಜಖಂ, ತೂಗು ಸೇತುವೆಗೆ ಭಾರೀ ಹಾನಿ, ಕೆಲವೆಡೆ ಭೂ ಕುಸಿತ, ಮನೆಗಳಿಗೆ ತೀವ್ರ ಹಾನಿ, ರಸ್ತೆ ಬಂದ್, ಪ್ರವಾಹ ಭೀತಿ, ಮುರಿದು ಬಿದ್ದ ವಿದ್ಯುತ್ ಕಂಬಗಳು, ಮರಗಳು

ಮಡಿಕೇರಿ,ಜು.10–ಕೊಡಗು ಜಿಲ್ಲಾದ್ಯಂತ ಶನಿವಾರದಿಂದ ಮಳೆ ಆರ್ಭಟಿಸುತ್ತಿದ್ದು, ಅಕ್ಷರಃ ಕೊಡಗು ನಲುಗಿ ಹೋಗಿದೆ. ಗಾಳಿ ಸಹಿತ ಮಳೆ ಅಬ್ಬರಿಸುತ್ತಿದ್ದು, ಗುಡ್ಡ ಕುಸಿತಗೊಂಡು ಶಾಲೆಯೊಂದು ಜಖಂಗೊಂಡಿದ್ದು, ಮತ್ತೊಂದು ಕಡೆ ತೂಗು ಸೇತುವೆಗೆ ಹಾನಿಯಾಗಿದೆ. ಇದರೊಂದಿಗೆ ಜಿಲ್ಲೆಯ ಎಲ್ಲಾ ನದಿ ತೊರೆಗಳು ಪ್ರವಾಹ ಮಟ್ಟ ಮೀರಿ ಹರಿಯುತ್ತಿದ್ದು, ವಿವಿಧೆಡೆ ಪ್ರವಾಹ ಉಂಟಾಗಿದೆ.

ಈ ನಡುವೆ ಸೋಮವಾರ ಬೆಳಗಿನ 8.30ರವರೆಗೆ ಜಿಲ್ಲೆಯಾದ್ಯಂತ "ಆರೆಂಜ್ ಅಲರ್ಟ್" ಘೋಷಣೆ ಮಾಡಲಾಗಿದೆ. ಮಳೆ–ಗಾಳಿಗೆ ಅನಾಹುತಗಳು ಘಟಿಸಿದ್ದು, ಆಸ್ತಿಪಾಸ್ತಿಗೆ ಹಾನಿಯಾದ ಬಗ್ಗೆ ವರದಿಯಾಗಿದೆ. ಭೂಕುಸಿತ, ಮನೆ ಹಾನಿ, ರಸ್ತೆ ಬಂದ್, ವಿದ್ಯುತ್ ಕಂಬಗಳಿಗೆ ಹಾನಿ ಸೇರಿದಂತೆ ಮರ ಮುರಿದು ಬಿದ್ದಿರುವ ಘಟನೆಗಳು ಮುಂದುವರೆದಿದೆ.

ಭೂ ಕುಸಿತ: ಮಡಿಕೇರಿ ನಗರದಲ್ಲಿ ಭಾರೀ ಮಳೆ ಸುರಿಯುತ್ತಿದ್ದು, ಸಂಪಿಗೆಕಟ್ಟೆ ಹೋಂಸ್ಟೇ ಒಂದಕ್ಕೆ ಕಟ್ಟಲಾಗಿದ್ದ ಬೃಹತ್ ಕಾಂಕ್ರೀಟ್ ತಡೆಗೋಡೆಯಲ್ಲಿ ಮತ್ತಷ್ಟು ಬಿರುಕು ಮೂಡಿದ್ದು, ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮತ್ತು ಕಂದಾಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಂಪಿಗೆಕಟ್ಟೆ ಜಂಕ್ಷನ್ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಪೊಲೀಸ್ ಸಿಬ್ಬಂದಿಗಳನ್ನು ▶ 8ನೇ ಪುಟಕ್ಕೆ

ಕೊಡಗು ಗಡಿಯಲ್ಲಿ ಭೂ ಕಂಪನ

20 ದಿನದಲ್ಲಿ 8ನೇ ಬಾರಿ ನಡುಗಿದ ಭೂಮಿ

ಮಡಿಕೇರಿ,ಜು.10– ಕೊಡಗಿನ ಗಡಿ ಭಾಗ ಚೆಂಬು ಹಾಗೂ ದಕ್ಷಿಣ ಕನ್ನಡದ ಅರಂತೋಡು ಗ್ರಾಮಗಳಲ್ಲಿ ಭಾನುವಾರ ಮುಂಜಾನೆ ಭಾರೀ ಶಬ್ದದೊಂದಿಗೆ ಮತ್ತೆ ಭೂ ಕಂಪನವಾಗಿದೆ. ರಿಕ್ಟರ್ ಮಾಪಕದಲ್ಲಿ 1.8 ತೀವ್ರತೆಯ ಕಂಪನ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಸ್ಪಷ್ಟಪಡಿಸಿದೆ.

ಕಳೆದ 20 ದಿನಗಳ ಅವಧಿಯಲ್ಲಿ ಕೊಡಗು ಗಡಿ ಗ್ರಾಮಗಳಲ್ಲಿ ಒಟ್ಟು 8 ಬಾರಿ ಭೂ ಕಂಪನವಾಗಿದ್ದು, ಸರಣಿ ಕಂಪನಗಳಿಗೆ ಗ್ರಾಮೀಣ ಭಾಗಗಳ ಜನರು ಬೆಚ್ಚಿ ಬಿದ್ದಿದ್ದಾರೆ. ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿಯುತ್ತಿರುವ ನಡುವೆಯೇ ಭೂ ಕಂಪನ ಘಟಿಸುತ್ತಿರುವುದು ಜನರನ್ನು ಪ್ರಕೃತಿ ವಿಕೋಪದ ಆತಂಕಕ್ಕೆ ತಳ್ಳಿದೆ. ಭಾನುವಾರ ಬೆಳಗ್ಗೆ 6 ಗಂಟೆ 22 ನಿಮಿಷ 20 ಸೆಕೆಂಡ್‌ನಲ್ಲಿ ಚೆಂಬು, ಅರಂತೋಡು ಮತ್ತು ಸುತ್ತಲ ಪ್ರದೇಶಗಳಲ್ಲಿ ಕೆಲ ಕ್ಷಣ ಭೂಮಿ ಕಂಪಿಸಿದೆ. ಭೂ ಕಂಪನದ ಕೇಂದ್ರ ದಕ್ಷಿಣ ಕನ್ನಡ ಜಿಲ್ಲೆಗೆ ಒಳಪಟ್ಟ ಕೊಡಗು ಗಡಿಯ ಅರಂತೋಡು ಗ್ರಾಮ ಪಂಚಾಯಿತಿಯ ಆಗ್ನೇಯ ದಿಕ್ಕಿಗೆ 1.1 ಕಿ.ಮೀ. ದೂರದಲ್ಲಿ, ಭೂಮಿಯ 10 ಕಿ.ಮೀ. ಆಳದಲ್ಲಿ ಇರುವುದಾಗಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಭೂ ಕಂಪನದ ಕೇಂದ್ರ ಸ್ಥಾನದಿಂದ 20ರಿಂದ 30 ಕಿ.ಮೀ.ವರೆಗೆ ಭೂಮಿ ಕಂಪಿಸುವ ಅನುಭವವಾಗುತ್ತದೆ. ಕಡಿಮೆ ತೀವ್ರತೆಯ ಈ ಕಂಪನದಿಂದ ಯಾವುದೇ ಅಪಾಯವಿಲ್ಲವೆಂದು ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ನಿರ್ದೇಶಕ ಡಾ. ಮನೋಜ್ ರಾಜನ್ ತಿಳಿಸಿದ್ದಾರೆ.

ರಾಷ್ಟ್ರಪತಿ ಚುನಾವಣೆ

ಬೆಂಗಳೂರಿಗೆ ಆಗಮಿಸಿದ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು



ಭಾನುವಾರ ದ್ರೌಪದಿ ಮುರ್ಮು ಅವರು ಹೆಚ್.ಡಿ. ದೇವೇಗೌಡರನ್ನು ಭೇಟಿ ಮಾಡಿ, ಅಭಿನಂದಿಸಿದರು.

ಬೆಂಗಳೂರು, ಜು.10– ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯಾಗಿ ಆಯ್ಕೆಯಾಗಿರುವ ದ್ರೌಪದಿ ಮುರ್ಮು ಅವರು ಭಾನುವಾರ ಬೆಂಗಳೂರಿಗೆ ಆಗಮಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದ್ರೌಪದಿ ಮುರ್ಮು ಅವರನ್ನು ಆತ್ಮೀಯವಾಗಿ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಮತ್ತು ನಗರಾಭಿವೃದ್ಧಿ ಸಚಿವ ಬಸವರಾಜ್ ಭೈರತಿ ▶ 8ನೇ ಪುಟಕ್ಕೆ

ಪದವಿ, ಸ್ನಾತಕೋತ್ತರ ಕೋರ್ಸ್

ರಾಜ್ಯಕ್ಕೆ ಏಕರೂಪದ ಶೈಕ್ಷಣಿಕ ವೇಳಾಪಟ್ಟಿ



ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಸಂಬಂಧಿಸಿದಂತೆ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಇಡೀ ರಾಜ್ಯಕ್ಕೆ ಅನ್ವಯಿಸುವ ಹಾಗೆ ಏಕರೂಪದ ವೇಳಾಪಟ್ಟಿಯನ್ನು ಇದೇ ಮೊದಲ ಬಾರಿಗೆ ಸಿದ್ಧಪಡಿಸಲಾಗಿದೆ. ರಾಜ್ಯದ ಎಲ್ಲಾ ವಿ.ವಿ.ಗಳು ಮತ್ತು ಕಾಲೇಜುಗಳು ಇದನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ. ಈ ಏಕರೂಪದ ಕಾರ್ಯಕ್ರಮ ಪಟ್ಟಿಯಂತೆ, ರಾಜ್ಯದ ▶ 8ನೇ ಪುಟಕ್ಕೆ

ಕೆಆರ್‌ಎಸ್, ಕಬಿನಿ ಅಣೆಕಟ್ಟು ಭರ್ತಿಗೆ ಒಂದೇ ಅಡಿ ಬಾಕಿ

- ಕೊಡಗು, ಕೇರಳದ ವೈನಾಡು ಭಾಗದಲ್ಲಿ ಮುಂದುವರೆದ ಮಳೆ
- ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚು
- ಜಲಾಶಯಗಳ ಭದ್ರತೆಗಾಗಿ ನದಿಗೆ ಭಾರೀ ಪ್ರಮಾಣದ ನೀರು



ಕೆಆರ್‌ಎಸ್ ಭರ್ತಿಗೆ ಕೇವಲ ಒಂದು ಅಡಿ ಬಾಕಿ ಇರುವುದರಿಂದ ಭಾನುವಾರ ಅಣೆಕಟ್ಟೆಯಿಂದ 27 ಸಾವಿರ ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಿದಾಗ ಕಂಡುಬಂದ ವಿಹಂಗಮ ನೋಟ. ಚಿತ್ರ: ಎಂ.ಎನ್.ಲಕ್ಷ್ಮಿನಾರಾಯಣ ಯಾದವ್



ಹೆಚ್.ಡಿ.ಕೋಟೆ ತಾಲೂಕಿನ ಕಬಿನಿ ಜಲಾಶಯದಿಂದ 4 ಕ್ರಸ್ಟ್ ಗೇಟ್‌ಗಳ ಮೂಲಕ 25 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಟ್ಟಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಜು.10(ಎಂಟಿವೈ)–ಕಾವೇರಿ ಕಣಿವೆ ಹಾಗೂ ಕೇರಳದ ವೈನಾಡು ಪ್ರದೇಶದಲ್ಲಿ ವ್ಯಾಪಕ ಮಳೆ ಮುಂದುವರೆದಿದ್ದು, ಒಳಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಅಣೆಕಟ್ಟೆ ಭರ್ತಿಗೆ ಕೇವಲ ಒಂದೇ ಅಡಿ ಬಾಕಿ ಇದ್ದು, ಎರಡೂ ಜಲಾಶಯಗಳ ಹಿತದೃಷ್ಟಿಯಿಂದ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಬಿಡುತ್ತಿರುವುದರಿಂದ ನದಿ ಪಾತ್ರದ ಜನರು ಸುರಕ್ಷಿತವಾಗಿರುವಂತೆ ಜಿಲ್ಲಾಡಳಿತ ಎಚ್ಚರಿಕೆಯ ಸಂದೇಶ ನೀಡಿದೆ.

ಭಾನುವಾರ ಸಂಜೆ ವೇಳೆಗೆ ಕೆಆರ್‌ಎಸ್ ಅಣೆಕಟ್ಟೆಯಿಂದ 27 ಸಾವಿರ ಕ್ಯೂಸೆಕ್ ನೀರನ್ನು ಹಾಗೂ ಕಬಿನಿ ಜಲಾಶಯದಿಂದ 30 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಬಿಡುತ್ತಿರುವುದರಿಂದ ಎರಡೂ ನದಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ತಗ್ಗು ಪ್ರದೇಶಕ್ಕೆ ನೀರು ನುಗ್ಗುವ ಆತಂಕ ಹೆಚ್ಚಾಗಿದೆ. ಅಲ್ಲದೇ ನದಿಗೆ ಹೊಂದಿಕೊಂಡಂತೆ ಇರುವ ಗ್ರಾಮಗಳ ಜನರಿಗೂ ಎಚ್ಚರಿಕೆಯ ಸಂದೇಶ ನೀಡಲಾಗಿದ್ದು, ನದಿಯಲ್ಲಿ ನೀರಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮನವರಿಕೆ ಮಾಡಿಕೊಡಲಾಗಿದೆ.

ಜೀವನದಿ ಕಾವೇರಿ ಉಗಮ ಸ್ಥಳ ಭಾಗಮಂಡಲ ಸೇರಿದಂತೆ ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆ ಭಾನುವಾರವೂ ಮುಂದುವರೆದಿದೆ. ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದಾಗಿ ದಿನದಿಂದ ದಿನಕ್ಕೆ ಕೆಆರ್‌ಎಸ್ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚುತ್ತಲೇ ಇದೆ. ಇದೇ ಮೊದಲ ಬಾರಿಗೆ ಜುಲೈ ತಿಂಗಳಲ್ಲೇ ಕೆಆರ್‌ಎಸ್ ಅಣೆಕಟ್ಟು ಭರ್ತಿಯಾಗುತ್ತಿದ್ದು, ಕೇವಲ ಒಂದು ಅಡಿ ಮಾತ್ರ ಬಾಕಿ ಉಳಿದಿದೆ. ಭಾನುವಾರ ಸಂಜೆ ವೇಳೆಗೆ ಒಳ ಹರಿವಿನ ಪ್ರಮಾಣ 42,633 ಕ್ಯೂಸೆಕ್‌ನಷ್ಟು ದಾಖಲಾಗಿದ್ದರೆ, ಅಣೆಕಟ್ಟೆಯ ಭದ್ರತೆಯ ನಿಟ್ಟಿನಲ್ಲಿ 15 ಗೇಟ್‌ಗಳಿಂದ ನದಿಗೆ 26,143 ಕ್ಯೂಸೆಕ್, ಕಾಲುವೆಗಳಿಗೆ 1,560 ಕ್ಯೂಸೆಕ್ ನೀರನ್ನು ಬಿಡಲಾಗುತ್ತಿದೆ. ಒಟ್ಟು 27,753 ಕ್ಯೂಸೆಕ್ ನೀರು ಅಣೆಕಟ್ಟೆಯಿಂದ ಹೊರಗೆ ಬಿಡಲಾಗುತ್ತಿರುವುದರಿಂದ ಒಳ ಮತ್ತು ಹೊರ ಹರಿವಿನ ಸಮತೋಲನ ಕಾಪಾಡಿಕೊಳ್ಳಲಾಗಿದೆ. ಕೆಆರ್‌ಎಸ್ ಅಣೆಕಟ್ಟೆಯಿಂದ ಭಾರೀ ▶ 6ನೇ ಪುಟಕ್ಕೆ

ಕೆಆರ್‌ಎಸ್‌ನಿಂದ 75 ಸಾವಿರ ಕ್ಯೂಸೆಕ್ ನೀರು ಬಿಡುವ ಸಾಧ್ಯತೆ

ಕೆಆರ್‌ಎಸ್ ಡ್ಯಾಂಗೆ ಒಳಹರಿವಿನ ಪ್ರಮಾಣ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹೊರ ಹರಿವಿನ ಪ್ರಮಾಣವೂ ಹೆಚ್ಚುವ ಸಂಭವವಿದೆ. ಮುಂದಿನ ಯಾವುದೇ ಕ್ಷಣದಲ್ಲಾದರೂ ಅಣೆಕಟ್ಟೆಯಿಂದ 30ರಿಂದ 75 ಸಾವಿರ ಕ್ಯೂಸೆಕ್ ನೀರನ್ನು ಕಾವೇರಿ ನದಿಗೆ ಬಿಡಬಹುದಾಗಿದ್ದು, ತಗ್ಗು ಪ್ರದೇಶದ ಜನರು, 2 ದಂಡೆಯ ಕಾಲುವೆಗಳ ಪಾತ್ರದ ಜನರು ತಮ್ಮ ಆಸ್ತಿ, ಜಾನುವಾರುಗಳ ರಕ್ಷಣೆಗೆ ಮುಂದಾಗಬೇಕೆಂದು ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ಆದೇಶಿಸಿದ್ದಾರೆ.

ಮೈಸೂರು ಗ್ರೀನ್ ಅಲರ್ಟ್

ಮೈಸೂರು ಜಿಲ್ಲೆಯಲ್ಲಿ ಜು.9ರಿಂದ 13ರವರೆಗೆ ಗ್ರೀನ್ ಅಲರ್ಟ್ ಇದೆ. ಪ್ರಸ್ತುತ ಬೀಳುತ್ತಿರುವ ಮಳೆಯ ಪ್ರಮಾಣದಲ್ಲೇ ಮುಂದಿನ ಮೂರು ದಿನಗಳು ಮಳೆ ಬೀಳಲಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು, ಮಕ್ಕಳು ಹಾಗೂ ಜಾನುವಾರುಗಳ ಬಗ್ಗೆ ಸುರಕ್ಷತೆ ಕ್ರಮ ಕೈಗೊಳ್ಳಬೇಕು.

–ಡಾ.ಬಗಾದಿ ಗೌತಮ್, ಜಿಲ್ಲಾಧಿಕಾರಿ, ಮೈಸೂರು.

ಕಬಿನಿ ಜಲಾಶಯ ಭರ್ತಿಯಾಗಿರುವುದು ರಾಜ್ಯದ ಜನತೆ ಹಾಗೂ ರೈತರು, ನಮ್ಮೆಲ್ಲರಿಗೂ ಸಂತೋಷ ತಂದಿದೆ. ಜಲಾಶಯಕ್ಕೆ ಬಾಗಿನ ಅರ್ಪಿಸುವ ವಿಚಾರವಾಗಿ ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಸಿಎಂ ಬೊಮ್ಮಾಯಿ, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ನೀರಾವರಿ ಸಚಿವರನ್ನು ಭೇಟಿ ಮಾಡಿ ಆಹ್ವಾನಿಸಲಾಗುವುದು.

–ಶಾಸಕ ಅನಿಲ್ ಚಿಕ್ಕಮಾದು

ಕೆ.ಆರ್.ಎಸ್ –	124.80 ಅಡಿ
ಇಂದಿನ ಮಟ್ಟ–	123.10 ಅಡಿ
ಒಳಹರಿವು–	42,366 ಕ್ಯೂಸೆಕ್
ಹೊರಹರಿವು–	26,753 ಕ್ಯೂಸೆಕ್

ಕಬಿನಿ –	2284 ಅಡಿ
ಇಂದಿನ ಮಟ್ಟ–	2282.71 ಅಡಿ
ಒಳಹರಿವು–	27000 ಕ್ಯೂಸೆಕ್
ಹೊರಹರಿವು–	30000 ಕ್ಯೂಸೆಕ್

ವೆಬ್‌ಸೈಟ್ ಡಿಸೈನ್ ಮಾಡಿ 1.70 ಲಕ್ಷ ರೂ. ವಂಚನೆ

ಮೈಸೂರು, ಜು.10–ವೆಬ್‌ಸೈಟ್ ಡೆವಲಪ್ ಮಾಡಿಕೊಟ್ಟು ಕ್ರೆಡಿಟ್ ಕಾರ್ಡ್‌ನಿಂದ 1.70 ಲಕ್ಷ ರೂ. ದೋಚಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಸಿದ್ಧಾರ್ಥನಗರದ ಉದ್ಯಮಿ ಅಮರ್‌ಕುಮಾರ್(44) ಎಂಬುವರಿಗೆ ಧರ್ಮೇಂದ್ರ ಎಂಬ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ ತನ್ನನ್ನು ಸಾಫ್ಟ್‌ವೇರ್ ಡಿಸೈನರ್ ಎಂದು ಪರಿಚಯಿಸಿಕೊಂಡು ಅವರಿಗೆ ವೆಬ್‌ಸೈಟ್ ಡೆವಲಪ್ ಮಾಡಿಕೊಟ್ಟಿದ್ದಾನೆ. ನಂತರ ಆನ್‌ಲೈನ್ ಮೊಬೈಲ್ ನಡೆಸಲು ಅಮರ್‌ಕುಮಾರ್ ಅವರ ಕ್ರೆಡಿಟ್ ಕಾರ್ಡ್ ಮಾಹಿತಿ ಪಡೆದು 1.70 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ.



ಚಿಕಿತ್ಸೆ ನೆಪದಲ್ಲಿ ವಂಚನೆ: ಆಯುರ್ವೇದ ವೈದ್ಯರೊಬ್ಬರಿಂದ ಚಿಕಿತ್ಸೆ ಪಡೆಯುವ ನೆಪದಲ್ಲಿ 85 ಸಾವಿರ ರೂ. ವಂಚಿಸಿರುವ ಬಗ್ಗೆ ವರದಿಯಾಗಿದ್ದು, ಕೆ.ಆರ್.ಮೊಹಲ್ಲಾ, ರಾಮಯ್ಯ ರಸ್ತೆ ನಿವಾಸಿ ಆಯುರ್ವೇದಿಕ್ ವೈದ್ಯ ಡಾ. ಮಹಮ್ಮದ್ ಜಾಂಡ್(48) ಅವರಿಗೆ ಶ್ರೀಕಾಂತ್ ಶರ್ಮಾ ಎಂಬ ಹೆಸರಿನಲ್ಲಿ ಕರೆ ಮಾಡಿದ ವಂಚಕ ತನ್ನ ತಂದೆಗೆ ಪಿಸ್ತೂಲ್ ಕಾಯಿಲೆ ಇರುವುದಾಗಿ ತಿಳಿಸಿ, ಅದನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದು, ತನಗೆ ಮೆಡಿಕಲ್ ರೀಫಂಡ್ ಆಗುತ್ತದೆ. ಅದರ ಪ್ರೊಸೀಜರ್‌ಗಾಗಿ ಫೋನ್ ಪೇ ಓಪನ್ ಮಾಡಲು ತಿಳಿಸಿದ್ದಾನೆ. ವೈದ್ಯರು ತಮ್ಮ ಮಗಳ ಫೋನ್ ಪೇ ಖಾತೆ ಓಪನ್ ಮಾಡಿ ಆತ ಹೇಳಿದಂತೆ ಮಾಡಿದಾಗ ಖಾತೆಯಿಂದ 85 ಸಾವಿರ ವರ್ಗಾವಣೆಯಾಗಿದೆ. ಇವೆರಡೂ ಪ್ರಕರಣಗಳು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.


ಹಾಲು ಉತ್ಪಾದಕರ ಸಂಘದ ಕಂಪ್ಯೂಟರ್ ಕಳವು

ಮೈಸೂರು, ಜು.10–ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಬೀಗ ಮುರಿದು ಕಂಪ್ಯೂಟರ್ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಜೀರಿಹುಂಡಿ ಹಾಲು ಉತ್ಪಾದಕರ ಮಹಿಳಾ ಸಂಘದ ಬಿಎಂಸಿ ಕೇಂದ್ರದ ಬೀಗವನ್ನು ಜು.6ರಂದು ಮುರಿದು ಕಚೇರಿಯಲ್ಲಿದ್ದ ಕಂಪ್ಯೂಟರ್ ಅನ್ನು ಕಳವು ಮಾಡಲಾಗಿದ್ದು, ಸಂಘದ ಕಾರ್ಯದರ್ಶಿ ಬಿ.ಮಂಜುಳಾ ಅವರು ಜು.9ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಗೃಹಿಣಿಯ ಸರ ಅಪಹರಣ

ನಂಜನಗೂಡು,ಜು.10–ಪತಿಯೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ಗೃಹಿಣಿಯ ಸರ ಕಸಿದ ಘಟನೆ ನಂಜನಗೂಡಿನ ಬಸವನಪುರ ಅಂಡರ್‌ಬ್ರಿಡ್ಜ್ ಬಳಿ ನಡೆದಿದೆ. ನಂಜನಗೂಡು ತಾಲೂಕು ಹದಿನಾರು ಗ್ರಾಮದ ಗೃಹಿಣಿ ಪ್ರೇಮಾ(35) ಅವರು, ತಮ್ಮ ಪತಿ ಉಮಾ ಮಹೇಶ್ ಜೊತೆ ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಬೈಕ್ (ಕೆಎ 09 ಇಜೆ 7773)ನಲ್ಲಿ ಹದಿನಾರು ಗ್ರಾಮದಿಂದ ಸೂರಳ್ಳಿಗೆ ತೆರಳುತ್ತಿದ್ದಾಗ ಬಸವನಪುರ ಅಂಡರ್‌ಬ್ರಿಡ್ಜ್ ಬಳಿ ಹಿಂಬದಿಯಿಂದ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಮಾಂಗಲ್ಯ ಸರ ಕಿತ್ತಿದ್ದಾರೆ. ಪ್ರೇಮಾ ಅವರು ಸರವನ್ನು ಗಟ್ಟಿಯಾಗಿ ಹಿಡಿದು ಕೊಂಡಿದ್ದರಿಂದ ಅದು ತುಂಡಾಗಿ 20 ಗ್ರಾಂನಷ್ಟು ಸರ ಖದೀಮರ ಪಾಲಾಗಿದೆ. ಈ ಸಂಬಂಧ ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಶ್ರೀ ಚಂದ್ರಮೌಳೇಶ್ವರ ದೇವಾಲಯದಲ್ಲಿ ಇಂದು ಪ್ರವಚನ



ಮೈಸೂರು, ಜು.10(ಆರ್‌ಕೆಬಿ)– ಮೈಸೂರಿನ ಒಂಟಿಕೊಪ್ಪಲಿನ ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದ 80ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಮೇ 25ರಂದು ಪ್ರತಿಷ್ಠಾಪಿಸಲಾಗಿದ್ದ ಅಭಯ ಆಂಜನೇಯ ಸ್ವಾಮಿಯ 48 ದಿನಗಳ ಮಂಡಲ ಪೂಜಾ ಕಾರ್ಯಕ್ರಮ ನಾಳೆ (ಜು.11) ಮುಕ್ತಾಯವಾಗಲಿದೆ.

ಈ ಸಂದರ್ಭದಲ್ಲಿ ಮೈಸೂರಿನ ರಾಮಕೃಷ್ಣ ಆಶ್ರಮದ ಸ್ವಾಮಿ ಜ್ಞಾನಯೋಗಾನಂದ ಅವರು ದೇವಸ್ಥಾನದ ಆವರಣದಲ್ಲಿರುವ ಶ್ರೀ ಶಂಕರ ಪ್ರಾರ್ಥನಾ ಮಂದಿರದಲ್ಲಿ ಸೋಮವಾರ ಸಂಜೆ 6 ಗಂಟೆಗೆ 'ಆದರ್ಶ ಭಕ್ತ ಆಂಜನೇಯ' ವಿಷಯ ಕುರಿತು ಪ್ರವಚನ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಭಕ್ತರು ಭಾಗವಹಿಸುವಂತೆ ಗೌರವ ಕೋಶಾಧಿಕಾರಿ ಎ.ಕೆ.ರಂಗನಾಥನ್ ತಿಳಿಸಿದ್ದಾರೆ.

ಜು.13, 'ಜಗ ನಡೆಯಲಿ ಬುದ್ಧನ ಕಡೆ' ಗಾಯನ ಕಾರ್ಯಕ್ರಮ

ಮೈಸೂರು,ಜು.10(ಆರ್‌ಕೆಬಿ)–ಧಮ್ಮಚಕ್ರ ಪವನತ್ತನ ದಿನದ ಅಂಗವಾಗಿ ಜು.13ರಂದು ಸಂಜೆ 5.30ಕ್ಕೆ ಮೈಸೂರಿನ ಅಶೋಕ ವೃತ್ತದ ಬಳಿಯ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಮೈಸೂರಿನ ತನುಮನ ಸಂಸ್ಥೆಯಿಂದ 'ಜಗ ನಡೆಯಲಿ ಬುದ್ಧನ ಕಡೆ' ಎಂಬ ಸಂಗೀತ ಕಾರ್ಯಕ್ರಮ ಮತ್ತು ವಿವಿಧ ಕ್ಷೇತ್ರದ ಸಾಧಕರಿಗೆ 'ಬುದ್ಧನಾಡ ಭೂಷಣ' ಪ್ರಶಸ್ತಿ ಪ್ರದಾನ ಸಮಾರಂಭ ಏರ್ಪಡಿಸಲಾಗಿದೆ. ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಿದ್ದಾರೆ. ಮಾಜಿ ಮೇಯರ್ ಪುರುಷೋತ್ತಮ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಹೆಚ್.ಎಲ್. ಯಮುನಾ, ಎಂ.ನರಸಿಂಹಮೂರ್ತಿ, ಮಾವಿನಹಳ್ಳಿ ಸಿದ್ದೇಗೌಡ, ಹಿನಕಲ್ ಸೋಮಣ್ಣ ಭಾಗವಹಿಸುವರು. ಇದೇ ಸಂದರ್ಭದಲ್ಲಿ ಡಾ.ಮೈಸೂರು ಗುರುರಾಜು, ಡಾ.ಕೆ.ಪಿ.ಮಹದೇವಯ್ಯ, ಬೀರಿಹುಂಡಿ ಬಸವಣ್ಣ, ಗಣೇಶ್‌ಭಟ್, ಮಲ್ಲುಂಡಿ ಮಹದೇವಸ್ವಾಮಿ, ತುಂಬಲ ರಾಮಣ್ಣ, ವಕೀಲ ವಿಷ್ಣುವರ್ಧನ, ಕೃಷಿ ವಿಜ್ಞಾನಿ ಹೆಚ್.ಎಂ.ಪಲ್ಲವಿ, ರಾಜಶೇಖರ್ ಯಡಹಳ್ಳಿ ಅವರನ್ನು 'ಬುದ್ಧನಾಡ ಭೂಷಣ' ಪ್ರಶಸ್ತಿ ನೀಡಿ ಗೌರವಿಸಲಾಗುವುದು. ನಂತರ ಗಾಯಕ ಲಕ್ಷ್ಮೀರಾಮ್ ನೇತೃತ್ವದಲ್ಲಿ ಬುದ್ಧ ಗೀತೆಗಳ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ತನುಮನ ಸಂಸ್ಥೆಯ ವಿ.ಸೋಮಣ್ಣ ತಿಳಿಸಿದ್ದಾರೆ.



ಮೈಸೂರಿನ ಮಹಾಜನ ವಿದ್ಯಾಸಂಸ್ಥೆಯಲ್ಲಿ ನೌಕರರಾಗಿ 50 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಡಿ.ಆರ್.ನಾಗರಾಜ್ ಅವರನ್ನು ಸಂಸ್ಥೆಯ ಪರವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಮುರಳೀಧರ್ ಭಾಗವತ್, ಪ್ರಾಂಶುಪಾಲರಾದ ಜಯಕುಮಾರಿ, ಉಪನ್ಯಾಸಕ ತಿಮ್ಮೇಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಜಾನಪದ ಕಲಾವಿದರಿಗೆ ಸನ್ಮಾನ

ಮೈಸೂರು,ಜು.10(ಆರ್‌ಕೆಬಿ)–ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಿಂದ ಪ್ರೊ.ಎಂ.ನಂಜಯ್ಯ ಹೊಂಗನೂರು ಇವರ ಮಾರ್ಗದರ್ಶನದಲ್ಲಿ ಸಿ.ಸುಂದರೇಶ್ ಮತ್ತು ತಂಡದವರ ನಿರ್ದೇಶನದಲ್ಲಿ ಜನಪದ ಕಲಾ ಪ್ರಕಾರಗಳ ಸಮಾರೋಪ ಸಮಾರಂಭ ಹಾಗೂ ಶಿಬಿರಾರ್ಥಿಗಳಿಂದ ನೃತ್ಯ ಪ್ರದರ್ಶನ ಕಾರ್ಯಕ್ರಮ ಜು.11ರ ಸಂಜೆ 5 ಗಂಟೆಗೆ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಹಲವು ಜಾನಪದ ಕಲಾವಿದರನ್ನು ಸನ್ಮಾನಿಸಲಾಗುವುದು. ಅಂತಾರಾಷ್ಟ್ರೀಯ ಜನಪದ ಕಲಾವಿದರಾದ ಡಾ.ಮಳವಳ್ಳಿ ಮಹದೇವಸ್ವಾಮಿ, ಸಿ.ಎಂ.ನರಸಿಂಹಮೂರ್ತಿ, ಕೆ.ಎಂ.ಕೃಷ್ಣೇಗೌಡ, ಹೊನ್ನಮ್ಮ ಚಾ.ನಗರ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಡಾ.ಬಿ.ಆರ್.ರಮೇಶ್‌ಬಾಬು, ಜನಪದ ಗಾಯಕರಾದ ಅನಿಲ್‌ರಾಜ್ ಸಿ.ಮಹದೇವಪುರ, ಮಹಾಲಿಂಗ ಎಂ.ಮೈಸೂರು, ದೇವಾನಂದ ವರಪ್ರಸಾದ್, ವಸಂತಮ್ಮ ಕರಡಕೆರೆ, ರಂಗಾಯಣ ಸಂಗೀತ ಸಂಯೋಜಕ ಸುಬ್ರಮಣ್ಯ, ಸೋಮಶೇಖರ್ ಪಿ.ಮಲಾರ ಕಾಲೋನಿ, ನೃತ್ಯಗಾರ್ತಿ ಆರ್.ನಂದಿನಿ, ಅಂತಾರಾಷ್ಟ್ರೀಯ ಪೂಜಾ ಕುಣಿತ ಕಲಾವಿದ ಸಿದ್ದೇಗೌಡ ಕೆ.ಶೆಟ್ಟಹಳ್ಳಿ, ಚಿಕ್ಕಬೋರಯ್ಯ ಚಿಕ್ಕಅರಸಿನಕೆರೆ, ಕುಮಾರ್, ವೀರಭದ್ರ ಕುಣಿತದ ಚಂದ್ರ ಮೌಳೇಶ್ವರ, ತಮಟೆ ಕಲಾವಿದರಾದ ಹನುಮಯ್ಯ ಕರಡಕೆರೆ, ಹೆಚ್.ಕೆ.ಮೋಹನ್‌ಕುಮಾರ್, ಡಿ.ಆರ್.ರಾಜೇಶ್ ಇನ್ನಿತರರನ್ನು ಸನ್ಮಾನಿಸಲಾಗುತ್ತದೆ.

ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್ ಉದ್ಘಾಟನೆ

ಉತ್ತಮ ಛಾಯಾಗ್ರಾಹಕರಾಗಲು ಮೂರು 'ಪಿ' ಅಗತ್ಯ': ಡಾ.ವಿ.ಕರಿಕಾಳನ್

ಮೈಸೂರು, ಜು.10(ಎಂಟಿವೈ)– ಒಂದೊಂದು ಛಾಯಾಚಿತ್ರವೂ ಐತಿಹಾಸಿಕ ದಾಖಲೆಯಾಗುವುದರಿಂದ ಪ್ರತಿಯೊಬ್ಬ ಛಾಯಾಗ್ರಾಹಕರು ಸ್ಪಷ್ಟತೆ ಮತ್ತು ಬದ್ಧತೆಯಿಂದ ಛಾಯಾಚಿತ್ರ ಸೆರೆ ಹಿಡಿಯಲು ಮುಂದಾಗಬೇಕು ಎಂದು ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ. ವಿ.ಕರಿಕಾಳನ್ ಸಲಹೆ ನೀಡಿದ್ದಾರೆ.



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ 'ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್' ಅನ್ನು ಡಿಸಿಎಫ್ ಡಾ.ವಿ.ಕರಿಕಾಳನ್ ಉದ್ಘಾಟಿಸಿದರು.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ 'ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್' ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ಛಾಯಾಗ್ರಾಹಕರಿಗೂ ಮೂರು 'ಪಿ' ಇರಬೇಕು ಎಂಬ ಸೂತ್ರವಿದೆ. ಪೇಷನ್ಸ್, ಪರ್ಫೆಕ್ಷನ್, ಫ್ಯಾಶನ್ ಇದ್ದರೆ ಮಾತ್ರ ಉತ್ತಮ ಛಾಯಾಗ್ರಾಹಕರಾಗಿ ಹೊರ ಹೊಮ್ಮಬಹುದಾಗಿದೆ. ಅದರಲ್ಲೂ ವನ್ಯಜೀವಿ ಛಾಯಾಗ್ರಾಹಕರಾಗಬೇಕಾದರೆ ಬದ್ಧತೆ, ಏಕಾಗ್ರತೆ ಹಾಗೂ ಖಚಿತತೆಯೊಂದಿಗೆ ತಾಳ್ಮೆ ಇರಬೇಕಾಗುತ್ತದೆ. ಈ ಗುಣಗಳು ಛಾಯಾಗ್ರಾಹಕರಲ್ಲಿದ್ದರೆ ಸಾಧನೆ ಸಾಧ್ಯ ಎಂದರು.

ಛಾಯಾಚಿತ್ರ ಐತಿಹಾಸಿಕ ದಾಖಲೆಯಾಗಿ ಶಾಶ್ವತವಾಗಿ ಉಳಿಯಲಿದೆ. ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ತೆಗೆದಾಗ ಅವುಗಳ ವಯಸ್ಸು ತಿಳಿದಿರುವುದಿಲ್ಲ. ಆದರೆ 100 ವರ್ಷವಾದರೂ ಆ ಫೋಟೋಗಳು ಹಾಗೇ ಇರುತ್ತವೆ. ಫೋಟೋಗಳನ್ನು ಬದಲಿಸುವುದಕ್ಕೆ ಸಾಧ್ಯವಿಲ್ಲ. ಅವುಗಳು ನಮ್ಮ ನೆನಪುಗಳನ್ನು ಅಚ್ಚಳಿಯದೇ ಉಳಿಯುವಂತೆ ಮಾಡುತ್ತವೆ ಎಂದು ಅಭಿಪ್ರಾಯಪಟ್ಟರು.

ಸಾಂಸ್ಕೃತಿಕ ನಗರಿ ಮೈಸೂರಲ್ಲಿ 3ನೇ ಬಾರಿಗೆ ಕರ್ತವ್ಯ ನಿರ್ವಹಿಸಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ನನ್ನ ಎರಡು ಮಕ್ಕಳೂ ಮೈಸೂರಲ್ಲೇ ಜನಿಸಿದ್ದರಿಂದ ನಾನು ಮೈಸೂರಿಗನೇ ಆಗಿದ್ದೇನೆ. ಈ ಒಡನಾಟ ನಾನೊಬ್ಬ ಕನ್ನಡಿಗ ಎಂದು ಹೇಳಿಕೊಳ್ಳುವಷ್ಟು ಅಭಿಮಾನವನ್ನು ಹುಟ್ಟು ಹಾಕಿದೆ ಎಂದು ತಿಳಿಸಿದರು.

> ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ಕ್ಯಾಮರಾ ಮಾರುಕಟ್ಟೆಗೆ ಬರುತ್ತಿವೆ. ಅಲ್ಲದೆ, ಛಾಯಾಗ್ರಹಣ ಕ್ಷೇತ್ರಕ್ಕೆ ಹೊಸ ಛಾಯಾಗ್ರಾಹಕರು ಸೇರ್ಪಡೆಯಾಗುತ್ತಿದ್ದಾರೆ. ಹೊಸದಾಗಿ ಬರುವ ಛಾಯಾಗ್ರಾಹಕರಿಗೆ ಫೋಟೋಗ್ರಫಿಯ ಎಥಿಕ್ಸ್ ಕಲಿಸಬೇಕು. ಛಾಯಾಗ್ರಹಣ ಕ್ಷೇತ್ರದಲ್ಲಿ ಎಥಿಕ್ಸ್ ಬಹಳ ಮುಖ್ಯ. ಉದಯೋನ್ಮುಖ ಛಾಯಾಗ್ರಾಹಕರಿಗೆ ಹಿರಿಯ ಛಾಯಾಗ್ರಾಹಕರು ತಾಳ್ಮೆ, ಬದ್ಧತೆ, ಖಚಿತತೆ ಗುಣಗಳನ್ನು ಕಲಿಸಬೇಕು. ಆಗ ಮಾತ್ರ ಸೃಜನಶೀಲ ಛಾಯಾಗ್ರಾಹಕರಾಗಿ ಹೊರ ಹೊಮ್ಮುತ್ತಾರೆ. ಉದಯೋನ್ಮುಖ ಛಾಯಾಗ್ರಾಹಕರು ಹೆಚ್ಚಾಗಿ ಈ ಕ್ಷೇತ್ರಕ್ಕೆ ಬರಬೇಕು.
>
> –ಡಾ. ವಿ. ಕರಿಕಾಳನ್, ಡಿಸಿಎಫ್

ಇದೇ ಸಂದರ್ಭದಲ್ಲಿ ಟ್ರಸ್ಟ್‌ನ ಲಾಂಛನ ಬಿಡುಗಡೆಗೊಳಿಸಿದ ಬೆಂಗಳೂರಿನ ಫೋಟೋಗ್ರಫಿಕ್ ಅಸೋಸಿಯೇಷನ್ ಅಧ್ಯಕ್ಷ ಟಿ.ಕೆಂಪಣ್ಣ ಮಾತನಾಡಿ, ಛಾಯಾಚಿತ್ರಗಳು ಭಾವನೆಗಳನ್ನು ಹುಟ್ಟು ಹಾಕುವಂತೆ ಇರಬೇಕು. ಫೋಟೋಗಳು ವಾಸ್ತವತೆಯನ್ನು ಬಹಿರಂಗಪಡಿಸುತ್ತದೆ. ಯಾವುದೇ ಕ್ಯಾಮರಾ ಕೊಂಡುಕೊಳ್ಳುವ ಮೊದಲು, ಆ ಕ್ಯಾಮರಾ ಬಗ್ಗೆ ಮೊದಲು ತಿಳಿದುಕೊಳ್ಳಬೇಕು. ಲಕ್ಷ ಲಕ್ಷ ರೂ. ಕ್ಯಾಮರಾ ಖರೀದಿಸಿದರೆ ಮಾತ್ರ ಉತ್ತಮ ಫೋಟೊ ತೆಗೆಯಬಹುದು ಎಂದು ತಿಳಿದುಕೊಳ್ಳುವುದು ಸರಿಯಲ್ಲ. ಕ್ಯಾಮೆರಾಗಳಲ್ಲಿ ಸೆಟ್ಟಿಂಗ್ಸ್ ಸರಿಯಾಗಿರಬೇಕು. ಆಗ ಉತ್ತಮ ಫೋಟೋ ತೆಗೆಯಬಹುದು. ಸೃಜನಶೀಲತೆ ಇರುವ ವ್ಯಕ್ತಿಯಿಂದ ಮಾತ್ರವೇ ಉತ್ತಮ ಚಿತ್ರ ತೆಗೆಯಲು ಸಾಧ್ಯವಾಗುತ್ತದೆ. ಇದಲ್ಲದೆ ಎಚ್‌ಡಿಆರ್ ಫೋಟೋಗ್ರಫಿಯನ್ನು ಅಭ್ಯಾಸ ಮಾಡುವಂತೆ ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಗಾಯಕಿ ಶ್ವೇತಾ ಮಡಪ್ಪಾಡಿ, ಟ್ರಸ್ಟ್‌ನ ಅಧ್ಯಕ್ಷ ಶಾಂತಪ್ಪ, ಮುರುಳೀಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಚಾ.ಬೆಟ್ಟ ನಂದಿ ರಸ್ತೆಗೆ ಉರುಳಿ ಬಿದ್ದ ಬಂಡೆ

ಅಧಿಕ ಮಳೆ ಪರಿಣಾಮ ತೇವಾಂಶ ಹೆಚ್ಚಾಗಿ ಮತ್ತಷ್ಟು ಬಂಡೆ ಉರುಳುವ ಆತಂಕ

ಮೈಸೂರು, ಜು.10(ಎಂಟಿವೈ)– ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯ ಪರಿಣಾಮ ಚಾಮುಂಡಿಬೆಟ್ಟದಲ್ಲಿ ತೇವಾಂಶ ಹೆಚ್ಚಾಗುತ್ತಿದ್ದು, ಕಲ್ಲುಗಳು ರಸ್ತೆಗುರುಳುವ ಆತಂಕ ಎದುರಾಗಿದೆ. ಆರು ತಿಂಗಳ ಹಿಂದಷ್ಟೇ ಭೂ ಕುಸಿತ ಉಂಟಾಗಿದ್ದ ಬೆಟ್ಟದ ನಂದಿ ರಸ್ತೆಯಲ್ಲಿ ದೊಡ್ಡ ಬಂಡೆಯೊಂದು ರಸ್ತೆಗೆ ಉರುಳಿ ಬಿದ್ದಿರುವುದು ವಾಹನ ಸವಾರರಲ್ಲಿ ಭಯ ಮೂಡಿಸುತ್ತಿದೆ.



ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಚಾಮುಂಡಿ ಬೆಟ್ಟದಲ್ಲಿ ತೇವಾಂಶ ಹೆಚ್ಚಾಗಿದ್ದು, ಹಲವೆಡೆ ನೀರು ಜಿನುಗಲಾರಂಭಿಸಿದೆ. ಈ ನಡುವೆ ಬೆಟ್ಟದ ಇಳಿಜಾರು ಪ್ರದೇಶದ ಹಲವೆಡೆ ಇರುವ ಬಂಡೆಗಳ ಉರುಳುವ ಆತಂಕ ವ್ಯಕ್ತವಾಗುತ್ತಿದೆ.

ಮಣ್ಣಲ್ಲಿ ತೇವಾಂಶ ಹೆಚ್ಚಾಗುತ್ತಿರುವುದರಿಂದ ಮೇಲ್ಮಟ್ಟದಲ್ಲೇ ಭೂಮಿಯಲ್ಲಿ ಹುದುಗಿದ್ದ ಬಂಡೆಗಳು ಸಡಿಲಗೊಳ್ಳುತ್ತಿವೆಯಾ ಎಂಬ ಅನುಮಾನ ಮೂಡುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಕಳೆದ ರಾತ್ರಿ ನಂದಿ ರಸ್ತೆ ಮೇಲೊಂದು ದೊಡ್ಡ ಬಂಡೆ ಉರುಳಿ ಬಿದ್ದಿದೆ. ಪ್ರಸ್ತುತ ನಂದಿ ರಸ್ತೆಯಲ್ಲಿ ಭೂ ಕುಸಿತ ಉಂಟಾದ ಪರಿಣಾಮ ಆ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಇದರಿಂದ ವಾಹನ ಸಂಚಾರವಿಲ್ಲದ ರಸ್ತೆಯಲ್ಲಿ ಬಂಡು ಉರುಳಿ ಬಿದ್ದ ಬಗ್ಗೆ ಮಾಹಿತಿ ಗೊತ್ತಾಗಿರಲಿಲ್ಲ.

ಇಂದು ವಾಯುವಿಹಾರಕ್ಕೆ ಹೋಗಿದ್ದವರಿಗೆ ಬಂಡೆ ರಸ್ತೆಗೆ ಉರುಳಿ ಬಿದ್ದಿರುವುದು ಕಂಡು ಬಂದಿದೆ. ಮೇಲಿಂದ ಉರುಳಿ ಬಿದ್ದಿರುವ ಬಂಡೆ ಡಾಂಬರ್ ರಸ್ತೆಯ ತಡೆಗೋಡೆಗೆ ತಾಗಿ ನಿಂತಿದೆ. ಇದು ಸ್ಥಳೀಯರು ಹಾಗೂ ಬೆಟ್ಟದ ತಪ್ಪಲಿನ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ. ನಾಲ್ಕು ದಿನ ಹಿಂದಷ್ಟೇ ಸಚಿವ ಎಸ್.ಟಿ. ಸೋಮಶೇಖರ್ ಅವರು ಭೂ ಕುಸಿತ ಉಂಟಾಗಿದ್ದ ರಸ್ತೆಯನ್ನು ದುರಸ್ತಿ ಮಾಡಲು ಗುದ್ದಲಿ ಪೂಜೆ ನೆರವೇರಿಸಿದ್ದರು. ಆದರೆ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ದುರಸ್ತಿ ಕಾಮಗಾರಿ ಆರಂಭಿಸಿಲ್ಲ. ಆರು ತಿಂಗಳಿಂದ ಬಂದ್ ಆಗಿದ್ದ ರಸ್ತೆ ದುರಸ್ತಿ ಕಾರ್ಯ ಆರಂಭಿಸಲು ನಿರ್ಧರಿಸಿದ್ದ ಬೆನ್ನಲ್ಲೇ ಇದೀಗ ಮಳೆ ಪುನರಾರಂಭವಾಗಿದ್ದು, ಕಾಮಗಾರಿ ಮತ್ತೊಮ್ಮೆ ಸ್ಥಗಿತಗೊಂಡಿದೆ. ಈಗ ರಸ್ತೆಗೆ ಬಂಡೆ ಉರುಳಿ ಬಿದ್ದಿರುವುದು ಜಿಲ್ಲಾಡಳಿತದ ನಿದ್ದೆಗೆಡಿಸುವಂತೆ ಮಾಡಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.10– ಮೈಸೂರಿನ ಪದವೀಧರರ ವಿಚಾರ ವೇದಿಕೆ ಆಶ್ರಯದಲ್ಲಿ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳಿಸಿದ ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಪರಿಶಿಷ್ಟ ಜಾತಿಯ ಆದಿಕರ್ನಾಟಕ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಇದೇ ಸಮುದಾಯಕ್ಕೆ ಸೇರಿದ ಸಿಬಿಎಸ್‌ಸಿಯ 12ನೇ ತರಗತಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದವರೂ ಸಹ ಅರ್ಜಿ ಸಲ್ಲಿಸಬಹುದು. ಅರ್ಹ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸ್ವವಿವರ, ದೃಢೀಕರಿಸಿದ ಅಂಕಪಟ್ಟಿ, ಬಿಪಿಎಲ್ ಕಾರ್ಡ್, ಒಂದು ಭಾವಚಿತ್ರ, ಜಾತಿ ಪ್ರಮಾಣಪತ್ರದೊಂದಿಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಮೊ–7829904782 ಅಥವಾ 9482020414 ಸಂಪರ್ಕಿಸಬಹುದು ಎಂದು ವೇದಿಕೆ ಅಧ್ಯಕ್ಷ ಡಿ.ಈಶ್ವರ ಚಕ್ಕಡಿ ತಿಳಿಸಿದ್ದಾರೆ.

ದ್ವಿತೀಯ ಪಿಯು ಉತ್ತರಪತ್ರಿಕೆಯ ಸ್ಕ್ಯಾನ್ ಪ್ರತಿ ಪಡೆಯಲು ಜು.15ರವರೆಗೆ ಕಾಲಾವಕಾಶ

ಮೈಸೂರು, ಜು.10(ಎಸ್‌ಪಿಎನ್)–2021–22ನೇ ಸಾಲಿನಲ್ಲಿ ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶ ಪ್ರಕಟಿಸಿದ್ದು, ಈ ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕವನ್ನು ಜು.15ರವರೆಗೆ ಹಾಗೂ ಮರು ಎಣಿಕೆ, ಮರು ಮೌಲ್ಯಮಾಪನ ದಿನಾಂಕವನ್ನು ಜು.18ರವರೆಗೆ ವಿಸ್ತರಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಆದೇಶಿಸಿದ್ದಾರೆ. ಈ ಹಿಂದೆ ವಿದ್ಯಾಥಿಗಳು ತಮ್ಮ ಉತ್ತರ ಪತ್ರಿಕೆ ಸ್ಕ್ಯಾನ್ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಜು.10ಕ್ಕೆ ಹಾಗೆಯೇ ಮರು ಎಣಿಕೆ ಹಾಗೂ ಮರು ಮೌಲ್ಯಮಾಪನ ದಿನಾಂಕವನ್ನು ಜು.13ರವರೆಗೆ ನಿಗದಿಪಡಿಸಲಾಗಿತ್ತು. ಈ ದಿನಾಂಕವನ್ನು ವಿಸ್ತರಿಸುವಂತೆ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳಿಂದ ಮನವಿ ಬಂದ ಹಿನ್ನೆಲೆಯಲ್ಲಿ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ ಎಂದು ಪತ್ರಿಕಾ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಟೆನ್ನಿಸ್ ಕೋರ್ಟ್‌ನಲ್ಲಿ ತರಬೇತಿ ನೀಡಲು ಅರ್ಜಿ ಆಹ್ವಾನ



ಮೈಸೂರು,ಜು.10–ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ (ಟೆನ್ನಿಸ್ ಮೂರು ಅಂಕಣಗಳುಳ್ಳ ಟರ್ಫ್ ಕೋರ್ಟ್) ಅಂಕಣಗಳನ್ನು ಒಳಗೊಂಡಿದ್ದು, ಅಂಕಣದಲ್ಲಿ ತರಬೇತಿಯನ್ನು ನೀಡಲಿಚ್ಛಿಸುವ ಟೆನ್ನಿಸ್ ತರಬೇತಿದಾರರು ಮಾಸಿಕ ಬಾಡಿಗೆ ಆಧಾರದ ಮೇಲೆ ಅಂಕಣಗಳನ್ನು ಪಡೆಯಬಹುದು. ಆಸಕ್ತ ತರಬೇತಿದಾರರು ಖುದ್ದಾಗಿ ಅರ್ಜಿಗಳನ್ನು ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಜರ್‌ಬಾದ್–570010 ಇಲ್ಲಿಗೆ ಸಲ್ಲಿಸಬಹುದಾಗಿದೆ ಎಂದು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ನಿಗಮಗಳಿಂದ ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.10(ಎಸ್‌ಬಿಡಿ)–ವಿವಿಧ ನಿಗಮಗಳ ವತಿಯಿಂದ ಸಬ್ಸಿಡಿ ಸಹಿತ ಸಾಲ ಇನ್ನಿತರ ಸೌಲಭ್ಯ ಕಲ್ಪಿಸಿದ್ದು, ಅರ್ಹರಿಂದ ಪ್ರತ್ಯೇಕ ಅರ್ಜಿ ಆಹ್ವಾನಿಸಲಾಗಿದೆ.



■ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮದ ಮೂಲಕ ಸಾಂಪ್ರದಾಯಿಕ/ಕುಶಲಕರ್ಮಿ ವೃತ್ತಿದಾರರ ಸಾಲ ಯೋಜನೆ, ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಗೆ ಆ.3 ಕಡೇ ದಿನವಾಗಿದೆ. ಮಾಹಿತಿಗೆ http://kssd.karnataka.gov.in ಹಾಗೂ ಸಹಾಯವಾಣಿ (080–22374832/ 9660606 6389) ಸಂಪರ್ಕಿಸಬಹುದು.

ಚಾಮರಾಜ ಕ್ಷೇತ್ರದವರಿಗೆ ಮಾಹಿತಿ

ವಿವಿಧ ನಿಗಮಗಳಿಂದ ಸಾಲ ಸೌಲಭ್ಯ ಯೋಜನೆಗೆ ಅರ್ಜಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡುವಂತೆ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಬಿಜೆಪಿ ನಗರ ಯುವಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್ ಗೌಡ, ಕ್ಷೇತ್ರದ ಬಿಪಿಎಲ್ ಪಡಿತರದಾರರು ಆಯಾ ಸಮುದಾಯಕ್ಕೆ ಅನ್ವಯವಾಗುವ ನಿಗಮಗಳ ಮೂಲಕ ಅರ್ಜಿ ಸಲ್ಲಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

■ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಸ್ವಸಹಾಯ ಸಂಘಗಳಿಗೆ ಉತ್ತೇಜನ ನೀಡಲು 'ಕಾಯಕ ಕಿರಣ' ಯೋಜನೆಗೆ ಅರ್ಜಿ ಆಹ್ವಾನಿಸಿದ್ದು, ನಿಗಮದ www.kvldcl.karnataka.gov.in ಮೂಲಕ ಅರ್ಜಿ ಡೌನ್ಲೋಡ್ ಮಾಡಿಕೊಂಡು ಅದನ್ನು ಭರ್ತಿ ಮಾಡಿ, ಅಗತ್ಯ ದಾಖಲೆ ಸಹಿತ ಡಿ.ದೇವರಾಜ ಅರಸು ನಿಗಮಕ್ಕೆ ಸಲ್ಲಿಸಬೇಕು. ಜು.28ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ.080–22865522ಗೆ ಕರೆ ಮಾಡಬಹುದು.

■ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಸ್ವಯಂ ಉದ್ಯೋಗ ನೇರಸಾಲ ಮತ್ತು ಸಹಾಯಧನ ಯೋಜನೆ ಮತ್ತು 2022–23ನೇ ಸಾಲಿನ 'ಅರಿವು' ಶೈಕ್ಷಣಿಕ ಸಾಲಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಜು.14ರ ಸಂಜೆ 5ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿದೆ. http://ambigaradevelopment. karnataka.gpv. in ಹಾಗೂ ನಿಗಮದ ಸಹಾಯವಾಣಿ 080–22864099, 0821–2341194 ಸಂಪರ್ಕಿಸಬಹುದು.

■ ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದ ಮೂಲಕ ಸ್ವಯಂ ಉದ್ಯೋಗ ನೇರ ಸಾಲ, 2022–23ನೇ ಸಾಲಿನ ಅರಿವು ಶೈಕ್ಷಣಿಕ ಸಾಲ ಪಡೆಯಲು ಆ.12ರೊಳಗೆ ಅರ್ಜಿ ಸಲ್ಲಿಸಬಹುದು. ವೆಬ್‌ಸೈಟ್ http://upparadevelopment.karnataka.gov.in, ನಿಗಮದ ಹಾಯವಾಣಿ 702628888 ಹಾಗೂ ಕಚೇರಿ ದೂ.ಸಂ. 0821– 2341194 ಸಂಪರ್ಕಿಸಿ ಮಾಹಿತಿ ಪಡೆಯಬಹುದು.

■ ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ವತಿಯಿಂದ ಸ್ವಯಂ ಉದ್ಯೋಗ ಸಾಲ ಮತ್ತು ಸಹಾಯಧನ ಯೋಜನೆ, ಸಾಂಪ್ರದಾಯಿಕ/ಕುಶಲ ಕರ್ಮಿ ವೃತ್ತಿದಾರರ ಸಾಲ ಯೋಜನೆಗೆ ಅರ್ಹರಿಂದ ಅರ್ಜಿ ಆಹ್ವಾನಿಸಿದ್ದು, ಆ.3ರ ಒಳಗಾಗಿ ಅರ್ಜಿ ಸಲ್ಲಿಸಬೇಕಿದೆ. htpp://kmmd.karnataka.gov.in ಹಾಗೂ ನಿಗಮದ ಕಚೇರಿ ದೂ.ಸಂ. 080–22374832ಕ್ಕೆ ಕರೆ ಮಾಡಿ ಮಾಹಿತಿ ಪಡೆಯಬಹುದು.

ಅರ್ಜಿ ಸಲ್ಲಿಸಿ ಜಾಲ: ಈ ಎಲ್ಲಾ ನಿಗಮಗಳ ಯೋಜನೆಗೆ http://suvidha.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಯೋಜನೆಯ ಫಲಾನುಭವಿಯಾಗಲು ಅಗತ್ಯ ಮಾನದಂಡ, ಅರ್ಜಿ ಸಲ್ಲಿಸುವ ವಿಧಾನ, ಬೇಕಾದ ದಾಖಲೆಗಳು, ಸಾಲ ಸೌಲಭ್ಯದಲ್ಲಿರುವ ಸಬ್ಸಿಡಿ ಇನ್ನಿತರ ಸಮಗ್ರ ಮಾಹಿತಿಗೆ ಆಯಾಯ ನಿಗಮದ ವೆಬ್‌ಸೈಟ್ ಸಂಪರ್ಕಿಸಬೇಕು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.07.2022 ಸೋಮವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ಏಕಾದಶಿ, ನಕ್ಷತ್ರ : ವಿಶಾಖ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು (ಅರ್ಥಶಾಸ್ತ್ರ ವಿಭಾಗ):** ವಿಶ್ವ ಜನಸಂಖ್ಯಾ ದಿನಾಚರಣೆ, ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ವಿಷಯ: ಆರ್ಥಿಕ ಅಭಿವೃದ್ಧಿಯಲ್ಲಿ ಮಾನವ ಸಂಪನ್ಮೂಲದ ಪಾತ್ರ, ಉದ್ಘಾಟನೆ: ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿಗಳು ಹಾಗೂ ಮ್ಯಾನೇಜಿಂಗ್ ಟ್ರಸ್ಟಿ ಕುಬೇರ್ ಪಿ. ಗೌಡ, ಸಂಪನ್ಮೂಲ ವ್ಯಕ್ತಿ: ಜೆಎಸ್‌ಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ವೀರಯ್ಯ, ಅಧ್ಯಕ್ಷತೆ: ಬಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪಾಲಿಟೆಕ್ನಿಕ್ :** ಪ್ರಥಮ ವರ್ಷದ ಡಿಪ್ಲೊಮಾ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರವೇಶ ಕಾರ್ಯಕ್ರಮ, ಮುಖ್ಯ ಅತಿಥಿ: ಉದ್ಯಮಿ ಹೆಚ್.ಆರ್ ಕೃಷ್ಣ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಗುಂಡಪ್ಪಗೌಡ, ಸ್ಥಳ: ವಿದ್ಯಾವರ್ಧಕ ಕಾಲೇಜಿನ ಆವರಣದಲ್ಲಿರುವ ಸಾಹುಕಾರ್ ಚೆನ್ನಯ್ಯ ಆಡಿಟೋರಿಯಂ, ಮಧ್ಯಾಹ್ನ 12 ಗಂಟೆಗೆ.

■ **ಲಕ್ಷ್ಮೀಪುರಂ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು:** ಡಾ.ಹೆಚ್.ಶ್ರೀಧರ ಅವರ 'ಪ್ರಾಚೀನ ಭಾರತದ ಇತಿಹಾಸ' ಹಾಗೂ 'ಆಧುನಿಕ ಭಾರತದ ಇತಿಹಾಸ' ಪಠ್ಯ ಪುಸ್ತಕಗಳ ಬಿಡುಗಡೆ– ಪ್ರಾಧ್ಯಾಪಕ ಡಾ.ಕೆ.ಸದಾಶಿವ, ಅಧ್ಯಕ್ಷತೆ–ಡಾ.ಟಿ.ವಿಜಯಲಕ್ಷ್ಮಿ, ಅತಿಥಿ–ಡಾ.ಮುರಳೀಧರ ಭಾಗವತ್, ಉಪಸ್ಥಿತಿ–ಡಾ.ಬಿ.ಆರ್.ಜಯಕುಮಾರಿ, ಡಾ.ಎಸ್.ಆರ್.ರಮೇಶ್, ಎವಿಸಿ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಖೇಡಾ ವೇದವ್ಯಾಸ ಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5ರಿಂದ.

ಮೈಸೂರು ಆಕಾಶವಾಣಿ



6.05 ಚಿಂತನ: ಜಿ.ಶರಣಪ್ಪ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ, ನೆನಪುಗಳು: ಲೇಖನ ಪ್ರಸ್ತುತಿ–ಡಿ.ಎನ್. ಶ್ರೀಪಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಅಂಬಯ್ಯನುಲಿ, ಟಿ.ಎಸ್.ಸ್ನೇಹಾ, ವ್ಯಾಖ್ಯಾನ–ಡಾ.ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಯಕ್ಷ ಸಂಪದ: ಯಕ್ಷಗಾನ ಬಡಗುತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ, ನಿರ್ಮಾಣ–ದಿವಾಕರ ಹೆಗಡೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ– ಹೆಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ– ಎಸ್. ಸುಬ್ರಹ್ಮಣ್ಯ, ಭಾಗವಹಿಸುವವರು–ಎಂ. ದ್ವಾರಕಾನಾಥ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.05 ವನಿತಾ ವಿಹಾರ: ಕೈತೋಟವನ್ನು ಹವ್ಯಾಸವಾಗಿಸಿಕೊಂಡ, ಜಯಶ್ರೀ ಗದಗಕರ್ ಅವರೊಂದಿಗೆ ಮಾತುಕತೆ, 12.30 ಭಕ್ತಿಗೀತೆಗಳು– ವೈ.ಎನ್. ಮದ್ವೇಶ್, 12.45 ನಮ್ಮ ಆರೋಗ್ಯ: ವಿಶ್ವ ಜನಸಂಖ್ಯಾ ದಿನದ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೈಸೂರು ವಿಭಾಗದ ಉಪ ನಿರ್ದೇಶಕರಾದ ಡಾ. ರವಿ ಎಂ.ಸಿ., ಡಾ.ಅರವಿಂದ್ ಪಿ.ಎಸ್. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ಪ್ರಚೇತ್ ಕುಲಕರ್ಣಿ, 3.00 ಸಿ.ಎಂ. ಮಧುರನಾಥ್–ವೇಣುವಾದನ, 4.00 ಮಹಿಳಾರಂಗ– 'ಡಾಕ್ಟರ್ ಸಮಯ' ಭಾಗವಹಿಸುವವರು ಡಾ. ಸುಗಂಧೀ ಉಡುಪ, ವಿಷಯ–ಹಲ್ಲಿನ ಸಮಸ್ಯೆಗಳು, ಪ್ರಸ್ತುತಿ–ಎಂ.ಎಸ್. ಭಾರತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ವಿವಿಧ ಬೆಳೆಗಳಲ್ಲಿ ಕೃಷಿ ತ್ಯಾಜ್ಯಗಳ ನಿರ್ವಹಣೆ ಕುರಿತು ಡಾ.ಜಿ.ಹೆಚ್. ಯೋಗೀಶ್ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

■ **ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** ಜನಪದ ಕಲಾ ಪ್ರಕಾರಗಳ ತರಬೇತಿ ಶಿಬಿರದ ಸಮಾರೋಪ, ಶಿಬಿರಾರ್ಥಿಗಳಿಂದ ನೃತ್ಯ ಪ್ರದರ್ಶನ. ಉದ್ಘಾಟನೆ– ಎಂಎಲ್‌ಸಿ ಮಧು ಜಿ.ಮಾದೇಗೌಡ, ಅಧ್ಯಕ್ಷತೆ– ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ಅತಿಥಿ– ಆರ್.ಶಿವಪ್ಪ, ಡಾ.ಚೈತ್ರಾ ನಾರಾಯಣ್, ಪ್ರೊ.ವಿಜಯಕುಮಾರಿ ಎಸ್.ಕರಿಕಲ್, ಮಲ್ಲಿಕಾರ್ಜುನಸ್ವಾಮಿ, ಎಂ.ಡಿ.ಸುದರ್ಶನ್, ಸನ್ಮಾನ– ಡಾ.ಮಳವಳ್ಳಿ ಮಹದೇವಸ್ವಾಮಿ, ಸಿ.ಎಂ.ನರಸಿಂಹಮೂರ್ತಿ, ಕೆ.ಎಂ.ಕೃಷ್ಣೇಗೌಡ, ಹೊನ್ನಮ್ಮ, ಡಾ.ಬಿ.ಆರ್.ರಮೇಶ್ ಬಾಬು, ಸ್ಥಳ– ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ.

■ **ಚಿನ್ಮಯ ಮಿಷನ್ ಮೈಸೂರು :** ಗೀತಾ ಜ್ಞಾನ ಯಜ್ಞ, ಪುರುಷೋತ್ತಮ ಯೋಗ (ಭಗವದ್ಗೀತೆಯ 15 ಚಾಪ್ಟರ್) ಕುರಿತು ಇಂಗ್ಲಿಷ್‌ನಲ್ಲಿ ಉಪನ್ಯಾಸ, ಸ್ವಾಮಿ ಅಪರಾಜಿತನಂದ ಅವರಿಂದ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ.

■ **ನಾದರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ರಂಗ ಸಂಭ್ರಮ–2022, ಪೌರಾಣಿಕ, ಸಾಮಾಜಿಕ, ನಾಟಕೋತ್ಸವ, ಉದ್ಘಾಟನೆ: ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಅಧ್ಯಕ್ಷತೆ: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ವೈ.ಎಂ.ಪುಟ್ಟಣ್ಣಯ್ಯ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.45ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಗೀತಾ ಕಲ್ಯಾಣ ಮಹೋತ್ಸವ, ಗುರುಕಾಲ ಹೊರೆಯಲ್ಲಿ ಶಮನೋತ್ಸವ, ಸ್ಥಳ: ಅರಮನೆ ಆವರಣದಲ್ಲಿ ಕೋಟೆ ತ್ರಿಣೇಶ್ವರ ದೇವಾಲಯ, ರಾತ್ರಿ 8 ಗಂಟೆಗೆ.

ಕೋವಿಡ್ ವೇಳೆ ವಿಜ್ಞಾನ–ತಂತ್ರಜ್ಞಾನ ಮಹತ್ವದ ಪಾತ್ರ ವಹಿಸಿತ್ತು

● ಎಂಎಸ್‌ಎಫ್ ದಶಮಾನೋತ್ಸವ ಸಂಭ್ರಮದ ಸಮಾರೋಪ ● ದೇಶ ಮುಂದುವರೆಯಲು ಅತ್ಯುತ್ತಮ ವಿಜ್ಞಾನಿಗಳು ಅಗತ್ಯ ● ಇಸ್ರೋ ಹಿರಿಯ ಬಾಹ್ಯಾಕಾಶ ವಿಜ್ಞಾನಿ ಡಾ.ಟಿ.ಎನ್.ಸುರೇಶ್‌ಕುಮಾರ್ ಅಭಿಮತ

ಮೈಸೂರು,ಜು.10(ಪಿಎಂ)– 'ವಿಜ್ಞಾನ–ತಂತ್ರಜ್ಞಾನ' ನಮ್ಮ ಜೀವನಮಟ್ಟ ಸುಧಾರಣೆಯಾಗಲು ನೆರವಾಗಲಿದೆ. ಈ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿಯಿಂದ ನಮ್ಮ ಕಾರ್ಯಚಟುವಟಿಕೆ ಮತ್ತು ವಹಿವಾಟು ವೇಗ ಪಡೆಯಲು ಸಾಧ್ಯವಾಗಿದ್ದು, ಕೋವಿಡ್ ಸಂದರ್ಭದಲ್ಲಿ ವಿಜ್ಞಾನ–ತಂತ್ರಜ್ಞಾನ ಮಹತ್ವದ ಪಾತ್ರ ವಹಿಸಿತ್ತು. ದೇಶ ಮುಂದುವರೆಯಲು ಅತ್ಯುತ್ತಮ ವಿಜ್ಞಾನಿಗಳು ಅಗತ್ಯ ಎಂದು ಇಸ್ರೋದ ಹಿರಿಯ ಬಾಹ್ಯಾಕಾಶ ವಿಜ್ಞಾನಿ ಡಾ.ಟಿ.ಎನ್. ಸುರೇಶ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಭಾನುವಾರ ನಡೆದ ಮೈಸೂರು ಸೈನ್ಸ್ ಫೌಂಡೇಷನ್‌ನ (ಎಂಎಸ್‌ಎಫ್) ದಶಮಾನೋತ್ಸವ ಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿಜ್ಞಾನ–ತಂತ್ರಜ್ಞಾನ ಕ್ಷೇತ್ರದಲ್ಲಿನ ಪ್ರಗತಿ ಕಾರಣಕ್ಕೆ ಸಾರಿಗೆ, ಬ್ಯಾಂಕಿಂಗ್ ಸೇರಿ ನಾನಾ ಕ್ಷೇತ್ರದಲ್ಲಿ ಮಹತ್ತರ ಸುಧಾರಣೆ ಸಾಧ್ಯವಾಗಿದೆ. ರೈಲ್ವೆ, ಬಸ್ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡುವ ವ್ಯವಸ್ಥೆ ಇದ್ದು, ಇದನ್ನು ಸಾಧ್ಯಮಾಡಿದ ಶಕ್ತಿಯೇ ವಿಜ್ಞಾನ. ಉಪಗ್ರಹಗಳ ಕಾರಣಕ್ಕೆ ಟೆಲಿ ಎಜುಕೇಷನ್, ಟೆಲಿ ಕಾನ್ಫರೆನ್ಸ್ ಸಾಧ್ಯವಾಗಿದೆ. ಕೋವಿಡ್ ಸಂದರ್ಭದಲ್ಲಿ ಇದನ್ನು ಹೆಚ್ಚು ಬಳಕೆ ಮಾಡಲಾಯಿತು ಎಂದು ಹೇಳಿದರು.



ಮೈಸೂರಿನ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಭಾನುವಾರ ನಡೆದ ಎಂಎಸ್‌ಎಫ್ ದಶಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಬಾಹ್ಯಾಕಾಶ ವಿಜ್ಞಾನಿ ಡಾ.ಟಿ.ಎನ್.ಸುರೇಶ್‌ಕುಮಾರ್ ಮಾತನಾಡಿದರು.

ಯಾವುದೇ ದೇಶ ಮುಂದುವರೆಯಲು ಶ್ರೇಷ್ಠ ವ್ಯಕ್ತಿತ್ವದ ನಾಯಕರು, ಉತ್ತಮ ಪ್ರಜೆಗಳು ಅಗತ್ಯ. ಉತ್ತಮ ಶಿಕ್ಷಕರು, ವೈದ್ಯರು, ಇಂಜಿನಿಯರ್‌ಗಳು, ಅಧಿಕಾರಿಗಳು, ಆಡಳಿತಗಾರರೇ ಉತ್ತಮ ಪ್ರಜೆಗಳಾಗಿದ್ದು, ಇವರಿಗೂ ಮಿಗಿಲಾಗಿ ಅತ್ಯುತ್ತಮ ವಿಜ್ಞಾನಿಗಳು ಬೇಕು. ಮಾಧ್ಯಮಗಳು ವಿಜ್ಞಾನದ ಮೇಲೆ ಹೆಚ್ಚು ಬೆಳಕು ಚೆಲ್ಲುವ ಮೂಲಕ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ನಾವು ಸೈಕಲ್‌ನಲ್ಲಿ ರಾಕೆಟ್ ಹೊತ್ತೊಯ್ಯುತ್ತಿದ್ದವು. ಇದನ್ನು ನೋಡಿ ನಗುವವರಿದ್ದರು. ಆದರೆ ಇಂದು ಮಹತ್ತರ ಸುಧಾರಣೆಯೊಂದಿಗೆ ದೇಶ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ನಮ್ಮ ಯುವಜನತೆ ಮತ್ತು ವಿದ್ಯಾರ್ಥಿಗಳು ಸಾಧನೆ ಮೂಲಕ ದೇಶಕ್ಕೆ ಕೊಡುಗೆ ನೀಡುವ ಸಂಕಲ್ಪ ಮಾಡಬೇಕು. ವಿದೇಶಗಳಲ್ಲಿ ಹೋಗಿ ಜ್ಞಾನ ಸಂಪಾದಿಸಿ, ಹಿಂತಿರುಗಬೇಕೇ ಹೊರತು ಅಲ್ಲೇ ನೆಲಸಬಾರದು. ಅನ್ನ ಕೊಟ್ಟ ದೇಶ ಮರೆಯಬಾರದು. ಈ ನೈತಿಕ ಹೊಣೆ ನಮ್ಮಲ್ಲಿ ಸದಾ ಜಾಗೃತವಾಗಿರಬೇಕು ಎಂದು ಸಲಹೆ ನೀಡಿದರು.

ಸಿಂಗಾಪುರ್ ಮುಂದುವರೆದ ದೇಶ. ಇತ್ತೀಚೆಗಷ್ಟೇ ಈ ದೇಶದ 3 ಉಪಗ್ರಹಗಳನ್ನು ಇಸ್ರೋ ಯಶಸ್ವಿಯಾಗಿ ಉಡಾವಣೆ ಮಾಡಿದೆ. ಅಂದರೆ ನಮ್ಮ ದೇಶದ ವಿಜ್ಞಾನ ಮುಂಚೂಣಿಯಲ್ಲಿದೆ. ಮೆಟಿರಿಯಲ್ ಸೈನ್ಸ್‌ನಲ್ಲೂ ತುಂಬ ಕೆಲಸಗಳು ನಡೆಯುತ್ತಿವೆ. ಮಾನವರು ಬಾಹ್ಯಾಕಾಶಕ್ಕೆ ಹೋಗಲು ಅಲ್ಲಿರುವ ತಾಪಮಾನಕ್ಕೆ ಪೂರಕವಾದ ಲೋಹದಲ್ಲಿ ನೌಕೆ ತಯಾರಿಕೆಗೆ ಸಂಬಂಧ ದೇಶದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿವೆ ಎಂದರು.

ವಿದ್ಯಾರ್ಥಿಗಳು ಸರಿಯಾದ ಸ್ಫೂರ್ತಿ ಹೊಂದಬೇಕು. ಶಿಕ್ಷಕರನ್ನು ಪ್ರಶ್ನೆ ಮಾಡುವ ಹವ್ಯಾಸ ಬೆಳೆಸಿಕೊಳ್ಳಬೇಕು. ಇದರಿಂದ ಶಿಕ್ಷಕರು ಅಧ್ಯಯನಶೀಲರಾಗುತ್ತಾರೆ. ಆ ಮೂಲಕ ಪರಸ್ಪರರಲ್ಲಿ ಜ್ಞಾನ ವೃದ್ಧಿಯಾಗಲಿದೆ ಎಂದರಲ್ಲದೆ, ಮೈಸೂರು ಸೈನ್ಸ್ ಫೌಂಡೇಷನ್‌ಗೆ 10 ಸಾವಿರ ರೂ. ದೇಣಿಗೆ ನೀಡುವುದಾಗಿ ಪ್ರಕಟಿಸಿದರು.

ಇದೇ ವೇಳೆ ಪ್ರಾರಂಭದಿಂದ ಎಂಎಸ್‌ಎಫ್ ಕಾರ್ಯ ಚಟುವಟಿಕೆಯಲ್ಲಿ ಭಾಗಿಯಾದ 150 ಮಂದಿ ಸಂಪನ್ಮೂಲ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು. ಫೌಂಡೇಷನ್‌ನ ಮಹಾ ಪೋಷಕ ಡಾ.ಟಿ.ತಿಪ್ಪೇಸ್ವಾಮಿ, ಗೌರವಾಧ್ಯಕ್ಷ ಪ್ರೊ.ಎಂ.ಆರ್.ನಂದನ್, ಅಧ್ಯಕ್ಷ ಸಿ.ಕೃಷ್ಣೇಗೌಡ, ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಂತೋಷ್‌ಕುಮಾರ್, ಯುವರಾಜ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಎನ್.ಯಶೋದಾ, ಆಹಾರ ವಿಜ್ಞಾನ ಮತ್ತು ಪೌಷ್ಟಿಕ ವಿಭಾಗದ ಮುಖ್ಯಸ್ಥ ಡಾ.ಆರ್.ಶೇಖರ್ ನಾಯಕ್ ಮತ್ತಿತರರು ಹಾಜರಿದ್ದರು.

10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಂದ ವೀಕ್ಷಣೆ

ಮೈಸೂರ್ ಸೈನ್ಸ್ ಫೌಂಡೇಷನ್‌ನ ದಶಮಾನೋತ್ಸವದ ಅಂಗವಾಗಿ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪಿಯು ಕಾಲೇಜು ಆವರಣದಲ್ಲಿ ಶನಿವಾರ (ಜು.9) ಹಮ್ಮಿಕೊಂಡಿದ್ದ ಸೈನ್ಸ್ ಎಕ್ಸ್‌ಪೋ ಅನ್ನು 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ವೀಕ್ಷಣೆ ಮಾಡಿದ್ದಾರೆ. ಇಸ್ರೋ ಸಂಸ್ಥೆ (ಸ್ಪೇಸ್ ಆನ್ ವ್ಹೀಲ್ಸ್ ಪ್ರದರ್ಶನ) ಸೇರಿದಂತೆ 35ಕ್ಕೂ ಹೆಚ್ಚು ಸಂಶೋಧನಾ ಸಂಸ್ಥೆಗಳು ಎಕ್ಸ್‌ಪೋದಲ್ಲಿ ಪ್ರದರ್ಶನ ನೀಡಿವೆ.

-ಜಿ.ಬಿ.ಸಂತೋಷ್ ಕುಮಾರ್, ಪ್ರಧಾನ ಕಾರ್ಯದರ್ಶಿ, ಎಂಎಸ್‌ಎಫ್

ಉಪಗ್ರಹಗಳಿಂದ ಮಹತ್ತರ ಮಾಹಿತಿ ಸಂಗ್ರಹಿಸಿ, ಮುನ್ನೆಚ್ಚರಿಕೆ ಕ್ರಮ

ಮೈಸೂರು,ಜು.10(ಪಿಎಂ)– ಉಪಗ್ರಹಗಳ ಮೂಲಕ ಕಲೆ ಹಾಕಿದ ಮಹತ್ತರ ಮಾಹಿತಿಗಳಿಂದ ಚೀನಾದಲ್ಲಿ ಕೋವಿಡ್ ಸ್ಫೋಟಗೊಳ್ಳುತ್ತಿದ್ದಂತೆ ತತ್‌ಕ್ಷಣಕ್ಕೆ ದೇಶದಲ್ಲಿ ಮುನ್ನೆಚ್ಚರಿಕೆ ಕ್ರಮ ವಹಿಸಲು ಸಾಧ್ಯವಾಯಿತು ಎಂದು ಇಸ್ರೋದ ಹಿರಿಯ ಬಾಹ್ಯಾಕಾಶ ವಿಜ್ಞಾನಿ ಡಾ.ಟಿ.ಎನ್.ಸುರೇಶ್‌ಕುಮಾರ್ ತಿಳಿಸಿದರು.

ಮೈಸೂರು ಸೈನ್ಸ್ ಫೌಂಡೇಷನ್‌ನ ದಶಮಾನೋತ್ಸವ ಸಂಭ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕೋವಿಡ್ ವೇಳೆ ನಮ್ಮ ದೇಶದಲ್ಲಿ ಸೋಂಕು ವ್ಯಾಪಿಸದಂತೆ ಕ್ರಮ ವಹಿಸಲು ಉಪಗ್ರಹಗಳು ನೆರವಾದವು. ಕೋವಿಡ್ ಸ್ಫೋಟಗೊಂಡ ಬಳಿಕ ದೇಶದಲ್ಲಿ ಮುನ್ನೆಚ್ಚರಿಕೆ ವಹಿಸಲು ಉಪಗ್ರಹಗಳ ಸಹಾಯ ಪಡೆಯಲಾಯಿತು ಎಂದರು. ಚೀನಾ ಮತ್ತು ಇಟಲಿಯಲ್ಲಿ ಇದ್ದಕ್ಕಿದ್ದಂತೆ ನೈಟ್ರೋಜನ್ ಡೈಆಕ್ಸೈಡ್ ಕಡಿಮೆಯಾಗಿರುವ ಇಮೇಜ್‌ಗಳು ಉಪಗ್ರಹಗಳ ಮಾನಿಟರಿಂಗ್ ವೇಳೆ ಕಂಡುಬಂದವು. ಭೌಗೋಳಿಕ ವಿಮರ್ಶೆ ವೇಳೆ ದೊಡ್ಡ ದೊಡ್ಡ ಪವರ್ ಜನರೇಟಿಂಗ್ ಸಿಸ್ಟಮ್ ಎಲ್ಲವೂ ಕಾರ್ಯಸ್ಥಗಿತ ಮಾಡಿದ್ದು ಗೊತ್ತಾಯಿತು. ಜಿಪಿಎಸ್ ಮೂಲಕ ಚಿತ್ರಗಳನ್ನು ತೆಗೆದು ನೋಡಿದಾಗ, ಅಲ್ಲಿನ ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಜಮಾವಣೆಗೊಂಡಿದ್ದಿದ್ದು ಗೋಚರಿಸಿತು. ಜೊತೆಗೆ ಮೃತ ದೇಹಗಳ ದಹನ ಹೆಚ್ಚಾಗಿದ್ದ ಕಾರಣಕ್ಕೆ ಅಲ್ಲಿ ಸಲ್ಫರ್ ಡೈಆಕ್ಸೈಡ್ ಹೊರಸೂಸುವಿಕೆಯೂ ಹೆಚ್ಚಳಗೊಂಡಿದ್ದು ನಮಗೆ ಗೊತ್ತಾಯಿತು. ಆಗ ಅಲ್ಲಿ ಸೋಂಕು ವ್ಯಾಪಿಸಿರುವುದು ಆ ದೇಶಗಳಿಂದ ಯಾವುದೇ ಸಂಹವನ ಇರದಾಗ್ಯೂ ಗೊತ್ತಾಗಿ ಇಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಯಿತು ಎಂದು ವಿವರಿಸಿದರು.

ಎನ್‌ಆರ್ ಗ್ರೂಪ್‌ಗೆ 'ಉನ್ನತ ರಫ್ತುದಾರ ಪ್ರಶಸ್ತಿ'



ಮೈಸೂರು, ಜು.10(ಎಂಕೆ)– ಮೈಸೂರಿನ ಪ್ರತಿಷ್ಠಿತ ಎನ್‌ಆರ್ ಗ್ರೂಪ್ (ಸೈಕಲ್ ಪ್ಯೂರ್ ಅಗರಬತ್ತಿಸ್) 'ಉನ್ನತ ರಫ್ತುದಾರ'ರೆಂಬ ಪ್ರಶಸ್ತಿ ತನ್ನದಾಗಿಸಿಕೊಂಡಿದೆ.

ಇತ್ತೀಚೆಗೆ ನವದೆಹಲಿಯಲ್ಲಿ ಎಕ್ಸ್‌ಪೋರ್ಟ್ ಪ್ರೊಮೋಷನ್ ಕೌನ್ಸಿಲ್ ಫಾರ್ ಹ್ಯಾಂಡಿಕ್ರಾಫ್ಟ್ (ಇಪಿಸಿಎಚ್) ಆಯೋಜಿಸಿದ್ದ 23ನೇ ರಾಷ್ಟ್ರೀಯ ಕರಕುಶಲ ವಸ್ತುಗಳ ರಫ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೇಂದ್ರ ಸಚಿವ ಪಿಯೂಶ್ ಗೋಯೆಲ್, ಜವಳಿ ಮತ್ತು ರೈಲ್ವೆ ಇಲಾಖೆಯ ರಾಜ್ಯ ಸಚಿವರಾದ ದರ್ಶನ ವಿಕ್ರಮ್ ಜರ್ದೋಷ್, ಎನ್‌ಆರ್ ಗ್ರೂಪ್ ರಫ್ತು ವಿಭಾಗದ ಉಪಾಧ್ಯಕ್ಷ ಸೆಲ್ವಕುಮಾರ್ ಅವರಿಗೆ ಪ್ರಶಸ್ತಿ ನೀಡಿ, ಅಭಿನಂದಿಸಿದರು. ಈ ವೇಳೆ ಕೇಂದ್ರ ಸರ್ಕಾರದ ಜವಳಿ ಇಲಾಖೆ ಕಾರ್ಯದರ್ಶಿ ಉಪೇಂದ್ರ ಪ್ರಸಾದ್ ಸಿಂಗ್ ಉಪಸ್ಥಿತರಿದ್ದರು.

ಈ ಕುರಿತು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ ಪ್ರತಿಕ್ರಿಯಿಸಿ, ಉನ್ನತ ರಫ್ತುದಾರ ಪ್ರಶಸ್ತಿ ಮೂಲಕ ಎನ್‌ಆರ್ ಗ್ರೂಪ್‌ಗೆ ಇನ್ನಷ್ಟು ಗೌರವ ಲಭಿಸಿದೆ. ಉತ್ಪನ್ನಗಳ ತಯಾರಿಯಲ್ಲಿನ ಕಠಿಣ ಪರಿಶ್ರಮದಿಂದ ಈ ಪ್ರಶಸ್ತಿ ಲಭಿಸಲು ಸಾಧ್ಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರಲ್ಲದೆ, ಇನ್ನೂ ಹೆಚ್ಚಿನ ಪರಿಶ್ರಮದೊಂದಿಗೆ ಎನ್‌ಆರ್ ಗ್ರೂಪ್ ಭರವಸೆಯ ಕ್ಷೇತ್ರವಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಂದಿನಿಂದ ನಾಟಕ ತರಬೇತಿ

ಮೈಸೂರು, ಜು.10– ಮೈಸೂರಿನ ಸಂಸ್ಕಾರ ಭಾರತೀ ಸಂಸ್ಥೆ ವತಿಯಿಂದ ವಿರಾಟ ನಾಟಕೋತ್ಸವ ಅಭಿಯಾನದಡಿ ನಾಳೆ(ಜು.11)ಯಿಂದ ನಾಟಕ ತಂಡ ರಚನೆ ಹಾಗೂ ತರಬೇತಿ ನಡೆಯಲಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ರಂಗ ಕಥನ 'ನೆನೆ ನೆನೆ ಆ ದಿನವ' ನಾಟಕ ಪ್ರಸ್ತುತಿಗೆ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್, ಡಿವಿಸಿ ಬಡಾವಣೆ, ವಿಶ್ವಮಾನವ ಜೋಡಿ ರಸ್ತೆಯ ಚಂಪಕ ಅಕಾಡೆಮಿಯಲ್ಲಿ ನಾಳೆ (ಜು.11)ಯಿಂದ ಜು.14ರವರೆಗೆ ಸಂಜೆ 6 ರಿಂದ ರಾತ್ರಿ 8.30ರವರೆಗೆ ರಂಗ ನಿರ್ದೇಶಕ ನಾ.ಶ್ರೀನಿವಾಸ್(ಪಾಪು) ನೇತೃತ್ವದಲ್ಲಿ ತರಬೇತಿ ನಡೆಯಲಿದೆ. ಅಭಿಯಾನದ ಯಶಸ್ಸಿಗೆ ಸಹಕರಿಸುವಂತೆ ಸಂಸ್ಕಾರ ಭಾರತೀ ಅಧ್ಯಕ್ಷ ಗಂಜೀಫ ರಘುಪತಿ ಭಟ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಪರಭಾಷಿಗರ ಹಾವಳಿ ತಪ್ಪಿಸಲು ಒತ್ತಾಯಿಸಿ ಪ್ರತಿಭಟನೆ

ಮೈಸೂರು, ಜು.10(ಪಿಎಂ)– ರಾಜ್ಯದಲ್ಲಿ ಪರಭಾಷಿಗರ ಹಾವಳಿ ಅತಿಯಾಗಿದ್ದು, ಎಲ್ಲಾ ಕ್ಷೇತ್ರಗಳ ಉದ್ಯೋಗಗಳು ಹಾಗೂ ವಹಿವಾಟು ಪರಭಾಷಿಗರ ಪಾಲಾಗುತ್ತಿವೆ. ಕರ್ನಾಟಕದಲ್ಲಿ ಕನ್ನಡಿಗರೇ ಸಂಕಷ್ಟ ಪರಿಸ್ಥಿತಿಯಲ್ಲಿ ಬದುಕುವಂತಾಗಿದ್ದರೂ ಸರ್ಕಾರ ಕಣ್ಣು ಮುಚ್ಚಿ ಕುಳಿದಿದೆ ಎಂದು ಆರೋಪಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಪ್ರತಿಭಟನೆ ನಡೆಸಿದರು.



ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ತಮಿಳು, ಮಲೆಯಾಳಿ, ಗುಜರಾತಿ, ಮರಾಠಿ ಸೇರಿದಂತೆ ಅನ್ಯ ಭಾಷಿಗರ ದಬ್ಬಾಳಿಕೆ ರಾಜ್ಯದಲ್ಲಿ ಹೆಚ್ಚಾಗಿದೆ. ಕನ್ನಡಿಗರೇ ಕರ್ನಾಟಕದಲ್ಲಿ ಅಲ್ಪಸಂಖ್ಯಾತರಾಗುವ ಆತಂಕ ಎದುರಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದ ಬಹುಪಾಲು ಉದ್ಯೋಗಗಳು ಪರಭಾಷಿಗರ ಪಾಲಾಗಿವೆ. ನಗರ, ಪಟ್ಟಣ ಮಾತ್ರವಲ್ಲದೆ, ಗ್ರಾಮೀಣದಲ್ಲೂ ಅನ್ಯ ಭಾಷಿಗರ ಹಾವಳಿ ಹೆಚ್ಚಾಗಿದೆ. ರಾಜ್ಯದಲ್ಲಿ ಮನೆ ಕಟ್ಟುವ ಕಾರ್ಮಿಕರು ಬಿಹಾರಿಗಳು, ಚಿನ್ನದ ಕೆಲಸ ಮಾಡುವವರು ಬಂಗಾಳಿಗಳು, ಎಲ್ಲಿ ನೋಡಿದರೂ ಕನ್ನಡಿಗರಿಗೆ ಕೆಲಸವೇ ಇಲ್ಲ. ಇಡೀ ರಾಜ್ಯದಲ್ಲಿ ಸುಮಾರು 2 ಕೋಟಿ ಪರಭಾಷಿಗರಿದ್ದಾರೆ ಎಂದರು.

ಕರ್ನಾಟಕದಲ್ಲಿ ಕನ್ನಡಿಗರಿಗೇ ಆದ್ಯತೆ ದೊರೆಯಬೇಕು. ಒಂದೆಡೆ ಕನ್ನಡ ಭಾಷೆ ಮೇಲೆ ಪರಭಾಷೆಗಳ ಹಾವಳಿ ಹೆಚ್ಚಾಗುತ್ತಿದ್ದರೆ, ಮತ್ತೊಂದೆಡೆ ರೈಲ್ವೆ, ಅಂಚೆ ಇಲಾಖೆ, ಬ್ಯಾಂಕ್‌ಗಳಲ್ಲಿ ಹಿಂದಿ ಭಾಷೆ ಹೇರಿಕೆ ಅಧಿಕವಾಗುತ್ತಿದೆ. ಹಾಗಾಗಿ ಹಿಂದಿ ವಿರುದ್ಧ ಹೋರಾಟ ಅನಿವಾರ್ಯವಾಗಿದೆ. ಸೆಪ್ಟಂಬರ್‌ನಲ್ಲಿ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕನ್ನಡಿಗರ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ. ಸರ್ಕಾರ ಕೂಡಲೇ ಪರಭಾಷಿಗರ ಹಾವಳಿ ತಪ್ಪಿಸಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಸಂಸದರು, ಶಾಸಕರು, ಮಂತ್ರಿಗಳು ಹಾಗೂ ರಾಜ್ಯದ ಮಠಾಧೀಪತಿಗಳಿಗೆ ಕನ್ನಡ ಬೇಕಿಲ್ಲ. ಪರಿಷತ್ತು ಸತ್ತು ಹೋಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಪಕ್ಕಾ ಆರ್‌ಎಸ್‌ಎಸ್ ಆಗಿ ಹೋಗಿದೆ. ಇಂತಹ ದುಸ್ಥಿತಿ ನಿರ್ಮಾಣವಾಗಿದೆ. ಪರಭಾಷಿಗರ ವಲಸೆ ತಡೆಯಬೇಕು ಎಂದು ಆಗ್ರಹಿಸಿದರು. ಬೆಂಬಲಿಗರಾದ ತಾಯೂರು ವಿಠ್ಠಲಮೂರ್ತಿ, ಪಾರ್ಥಸಾರಥಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ವೈದ್ಯರಿಗೆ ಅಭಿನಂದನೆ...



ಮೈಸೂರಿನ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಡೆದ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ಮೈಸೂರು ಮತ್ತು ಕೊಡಗು ವಲಯದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ವೈದ್ಯರಾದ ಡಾ.ಲಕ್ಷ್ಮಿದೇವಿ, ಡಾ.ಪ್ರಹ್ಲಾದ್ ರಾವ್, ಡಾ.ಅಮ್ರಿತ್ ನಾಣಯ್ಯ, ಡಾ.ಬಸವನಗೌಡಪ್ಪ, ಡಾ.ಹರಿದಾಸ್ ಉಪಾಧ್ಯ ಹಾಗೂ ಡಾ.ವಿಜಯ್ ಕುಮಾರ್ ಅವರನ್ನು ಅಭಿನಂದಿಸಲಾಯಿತು. ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ, ವ್ಯವಸ್ಥಾಪಕ ನಿರ್ದೇಶಕ ಪವನ್ ಕುಮಾರ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡ ಆರೀಫ್ ಪಾಷ ಹುಟ್ಟುಹಬ್ಬ ಆಚರಣೆ





ಮೈಸೂರು, ಜು.10– ಮೈಸೂರು ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಆರೀಫ್‌ಪಾಷ ಅವರ ಜನ್ಮದಿನವನ್ನು ಪೌರಕಾರ್ಮಿಕರಿಗೆ ಫುಡ್‌ಕಿಟ್ ನೀಡುವ ಮೂಲಕ ಸರಳವಾಗಿ ಆಚರಿಸಲಾಯಿತು.

ಕೂರ್ಗಳ್ಳಿಯಲ್ಲಿ ನಡೆದ ಸಮಾರಂಭದಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಆರೀಫ್ ಪಾಷ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿದ್ದು ಅವರಿಗೆ ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷರನ್ನಾಗಿ ಮಾಡಲಾಗುತ್ತದೆ. ಅವರಿಗೆ ಚಾಮುಂಡೇಶ್ವರಿ ತಾಯಿ ಒಳ್ಳೆಯದನ್ನು ಮಾಡಲಿ ಎಂದರು. ಈ ಸಂದರ್ಭದಲ್ಲಿ ಮುಖಂಡ ನಜರ್‌ಬಾದ್ ನಟರಾಜ್, ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ಜಿ.ಪಂ. ಮಾಜಿ ಅಧ್ಯಕ್ಷ ಮಹದೇವು, ಪ್ರಕಾಶ್, ಬ್ಲಾಕ್‌ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜೆ.ಸತೀಶ್ ಕುಮಾರ್, ಕೆ.ಆರ್.ಕ್ಷೇತ್ರದ ಉಪಾಧ್ಯಕ್ಷ ಬಸಪ್ಪ, ಗಂಧನಹಳ್ಳಿ ಜಿ.ಎಸ್ ವೆಂಕಟೇಶ್, ಜಟ್ಟಿಹುಂಡಿ ಯೋಗೇಶ್, ಇಲವಾಲ ಸುರೇಶ್, ಕನಕಚಂದ್ರು ಮತ್ತಿತರರು ಹಾಜರಿದ್ದರು.

ಯೋಗದಿಂದ ಜೀವನಕ್ಕೆ ಹೊಸ ಚೈತನ್ಯ

ಶಾಸಕ ಜಿ.ಟಿ. ದೇವೇಗೌಡರ ಅಭಿಮತ



ಮೈಸೂರು, ಜು.10(ಜಿಎ)– ಯೋಗದಿಂದ ಜೀವನಕ್ಕೆ ಹೊಸದೊಂದು ಚೈತನ್ಯ ದೊರೆಯುವುದರ ಜೊತೆಗೆ ಹೊಸ ಬದುಕಿಗೆ ಮುನ್ನುಡಿ ಬರೆಯುತ್ತದೆ. ನೂರಾರು ಅನುಕೂಲ ಇರುವ ಯೋಗವನ್ನು ಒಂದೆರಡು ದಿನ ಮಾಡಿ ಬಿಡದೆ ಅದನ್ನು ಬದುಕಿನ ಪೂರ್ತಿ ಅಭ್ಯಾಸ ಮಾಡಿದರೆ ಉತ್ತಮ ಎಂದು ಶಾಸಕ ಜಿ.ಟಿ. ದೇವೇಗೌಡ ತಿಳಿಸಿದರು.

ನಗರದ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಪ.ಪೂ.ಶ್ರೀ.ಮಾತಾಜಿ ನಿರ್ಮಲಾದೇವಿ ಅವರ 100ನೇ ಜನ್ಮದಿನ ಆಚರಣೆ ಅಂಗವಾಗಿ ಆಯೋಜಿಸಿದ್ದ ಸಾರ್ವಜನಿಕ ಸಹಜ ಯೋಗ, ಧ್ಯಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇಹ ಮತ್ತು ಮನಸ್ಸಿನ ಆರೋಗ್ಯಕ್ಕೆ ಯೋಗ ಸಹಕಾರಿ. ಆದರೆ, ಯೋಗವನ್ನು ಒಂದು ದಿನಕ್ಕೆ ಸೀಮಿತಗೊಳಿಸದೆ ಬದುಕಿನ ಭಾಗವಾಗಿ ರೂಪಿಸಿಕೊಳ್ಳಬೇಕಿದೆ. ಎಷ್ಟೋ ಬಾರಿ ಮನಸ್ಸು ಹೇಳಿದರೂ ದೇಹ ಅದಕ್ಕೆ ಸ್ಪಂದಿಸುವುದಿಲ್ಲ. ಒಂದೆರಡು ದಿನ ಯೋಗ ಮಾಡಿ ಬಿಟ್ಟವರ ಸಂಖ್ಯೆಯೇ ಹೆಚ್ಚು. ಆದರೆ, ಎಲ್ಲರ ಮನಸ್ಸು ನಿರ್ಮಲವಾಗಿರಲು ಸಾಧ್ಯವಿಲ್ಲ. ಪ್ರತಿಯೊಬ್ಬರಿಗೂ ಬೇರೆ ಬೇರೆ ಆಲೋಚನೆಗಳಿವೆ. ಮನಸ್ಸನ್ನು ಒಂದೆಡೆ ಕೇಂದ್ರೀಕರಿಸಿ ಸನ್ಮಾರ್ಗದೆಡೆ ಹೋಗಲು ಸಹಜ ಯೋಗ ಧ್ಯಾನ ಸಹಕಾರಿಯಾಗಿದೆ ಎಂದರು.

ಶಾಂತಿ, ನೆಮ್ಮದಿ ಶರೀರಕ್ಕೆ ಮಾತ್ರ ಇದ್ದರೆ ಸಾಲದು ಅದು ಆತ್ಮಕ್ಕೂ ಸಿಗಬೇಕು. ಪ್ರೀತಿ ಕೊಟ್ಟರೆ ಜಗತ್ತೇ ಶಾಂತಿಯಿಂದ ಇರುತ್ತದೆ. ಸದ್ಯ ನಾವೆಲ್ಲ ದಾರಿ ಗೊತ್ತಿಲ್ಲದೆ ಕತ್ತಲಿನಲ್ಲಿ ಇದ್ದೇವೆ. ಅಜ್ಞಾನ ನಮ್ಮನ್ನು ಆವರಿಸಿಕೊಂಡಿದೆ. ಇದೀಗ ಬೆಳಕಿನೆಡೆಗೆ ಸಾಗಬೇಕಾದರೆ ಆತ್ಮದ ಸಾಕ್ಷಾತ್ಕಾರ ಆಗಬೇಕು ಎಂದರು.

ಇದೇ ವೇಳೆ ಸಹಜ ಯೋಗ ಧ್ಯಾನದ ಮೈಸೂರಿನ ಸಂಯೋಜನಾಧಿಕಾರಿ ವಿನುತಾ ಮಾತನಾಡಿ, ಎಲ್ಲಾ ಧರ್ಮದಲ್ಲೂ ಎರಡು ಜನ್ಮದ ಬಗ್ಗೆ ಉಲ್ಲೇಖವಿದೆ. ತಾಯಿಯಿಂದ ಸಿಗುವ ಜನ್ಮ ಒಂದಾದರೆ, ಆತ್ಮದ ಸಾಕ್ಷಾತ್ಕಾರದಿಂದ ಸಿಗುವ ಜನ್ಮ ಮತ್ತೊಂದು. ಸಹಜ ಯೋಗದಿಂದ ಅತ್ಯಂತ ಸರಳ ಹಾಗೂ ಸುಲಭವಾಗಿ ಇದು ಸಿಗುತ್ತದೆ. ಐಶ್ವರ್ಯ, ಸಂಪತ್ತು, ವಿದ್ಯೆ ಇದ್ದರೆ ಸಾಕು ಸುಖವಾಗಿ ಇರುತ್ತೇವೆ ಎಂದು ನಾವೆಲ್ಲರೂ ಭಾವಿಸಿಕೊಂಡಿದ್ದೇವೆ. ಎಂದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್, ಜಯದೇವ, ಮನೋಜ್ ಕುಮಾರ್ ಮತ್ತಿತರರು ಹಾಜರಿದ್ದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಹಲವು ಪ್ರವಾದಿಗಳ ಆಶ್ರಯ ತಾಣ


ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಮತ

ಮೈಸೂರು, ಜು.10(ಎಂಕೆ)– ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮ ಹಲವಾರು ಪ್ರವಾದಿಗಳಿಗೆ ಆಶ್ರಯ ತಾಣವಾಗಿದೆ. ಅಂತಹ ಪ್ರವಾದಿಗಳಲ್ಲಿ ರಾಷ್ಟ್ರಕವಿ ಕುವೆಂಪು ಅವರು ಒಬ್ಬರಾಗಿದ್ದು, 'ಶ್ರೀ ರಾಮಾಯಣ ದರ್ಶನಂ' ರಚಿಸಿದ್ದಾರೆಂದರೆ ಅದಕ್ಕೆ ಶ್ರೀ ರಾಮಕೃಷ್ಣ ಪರಮಹಂಸರ, ತಾಯಿ ಶಾರದಾದೇವಿಯವರ ಹಾಗೂ ಸ್ವಾಮಿ ವಿವೇಕಾನಂದರ ಪ್ರಖರವಾದ ಆಶೀರ್ವಾದವೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅಭಿಪ್ರಾಯ ವ್ಯಕ್ತಪಡಿಸಿದರು.

ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಭಾನುವಾರ ಆಯೋಜಿಸಿದ್ದ ಸ್ವಾಮಿ ಶಾಂಭವಾನಂದಜಿ ಸ್ಮರಣಾರ್ಥ ಉಪನ್ಯಾಸ ಹಾಗೂ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಮಕೃಷ್ಣ ಆಶ್ರಮ ಹಲವಾರು ಮೈಲುಗಲ್ಲುಗಳನ್ನು ಕಂಡ ಆಶ್ರಮವಾಗಿದ್ದು, ಯುವಕ–ಯುವತಿಯರಿಗೆ ಆಶ್ರಯ ನೀಡಿ, ಶಿಕ್ಷಣದ ಮೂಲಕ ಉತ್ತಮ ಪ್ರಜೆಗಳಾಗಲು ಅವಕಾಶ ಮಾಡಿಕೊಡುತ್ತಿದೆ ಎಂದರು.

ಒಂದೊಂದು ಯುಗದಲ್ಲಿ ಒಬ್ಬೊಬ್ಬರು ಮಹಾನ್ ಕೈಂಕರ್ಯಕ್ಕೆ ಕಾರಣರಾಗುವಂತೆ ರಾಮಕೃಷ್ಣ ಆಶ್ರಮದ ಖ್ಯಾತಿಗೆ ಸ್ವಾಮಿ ಶಾಂಭವಾನಂದಜಿ ಕಾರಣರಾಗಿದ್ದಾರೆ. ಸ್ವಾಮಿ ವಿವೇಕಾನಂದರು ಹೇಳಿದಂತೆ ಅವರು, ಪುರುಷ ಸಿಂಹರನ್ನಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಹೊತ್ತಿನಲ್ಲಿ ಹತ್ತು–ಹಲವು ಕನಸುಗಳು ನಮ್ಮನ್ನು ಮುತ್ತುತ್ತಿದ್ದವು. ಆ ವೇಳೆ ಸ್ವಾಮಿ ಶಾಂಭವಾನಂದಜಿ ಅವರು ದೇಶ ಕಟ್ಟುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ಶ್ರೀ ರಾಮಕೃಷ್ಣ ಆಶ್ರಮದಲ್ಲಿ ನನ್ನೊಂದಿಗೆ 24 ಮಂದಿ ಓದುತ್ತಿದ್ದರು. ಅವರನ್ನು ಇಂದಿಗೂ ಗುರುತಿಸುತ್ತೇನೆ ಎಂದ ಅವರು, ರಾಮಕೃಷ್ಣ ಆಶ್ರಮದ ಶಾಲೆಯಲ್ಲಿ ದೊರೆತ ಅವಕಾಶವೇ ಒಂದು ಅವಿಸ್ಮರಣೀಯ. ಆಶ್ರಮದ ಕೃಪಾಕಟಾಕ್ಷದಲ್ಲಿ ಬೆಳೆದಿದ್ದೇವೆ. ಆಶ್ರಮದಲ್ಲಿ ವಿದ್ಯಾಭ್ಯಾಸ ಕೇವಲ ಪುಸ್ತಕಗಳಿಗೆ ಸೀಮಿತವಾಗಿರಲಿಲ್ಲ. ಅದಕ್ಕೂ ಮೀರಿದ ಮೌಲ್ಯಯುತ ಶಿಕ್ಷಣದ ಮೂಲಕ ವೇದಿಕೆ ನೀಡಿದೆ ಎಂದು ಸ್ಮರಿಸಿದರು.


ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದಲ್ಲಿ 'ಸ್ವಾಮಿ ಶಾಂಭವಾನಂದಜಿ– ಎ ಮಾಂಕ್ ವಿತ್ ಎ ವಿಷನ್ ಅಂಡ್ ಮಿಷನ್' ಹಾಗೂ 'ವಿವೇಕ ಮಾರ್ಗದರ್ಶಿ' ಕೃತಿಗಳನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಲೋಕಾರ್ಪಣೆಗೊಳಿಸಿದರು. ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ, ವಿಶ್ರಾಂತ ಪ್ರಾಂಶುಪಾಲ ಕೀರ್ತಿಕುಮಾರ್, ಪ್ರಕಾಶಕ ಪಾರ್ಥಸಾರಥಿ ಉಪಸ್ಥಿತರಿದ್ದರು.

ಸ್ವಾಮಿ ಶಾಂಭವಾನಂದಜಿ ಅವರು ಆಯಸ್ಕಾಂತದಂತೆ ನಮ್ಮನ್ನು ಸೆಳೆಯುತ್ತಿದ್ದರು. ಅವರನ್ನು ನೋಡುವುದೇ ಒಂದು ಖುಷಿ. ಆಶ್ರಮದ ವಿದ್ಯಾರ್ಥಿಗಳಿಗೆ ಅವರು ಮೊದಲ ರೋಲ್ ಮಾಡೆಲ್ ಆಗುತ್ತಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ವಿಶ್ವ ಯೋಗ ದಿನ ಆಚರಣೆ ಮಾಡುವ ಮೂಲಕ ನಾಯಕತ್ವ ವಹಿಸಿಕೊಂಡಿದ್ದರೆ, ಸ್ವಾಮಿ ಶಾಂಭವಾನಂದಜಿ ಅವರ ನಾಯಕತ್ವದಲ್ಲಿ ನಮಗೆ ಅಂದೇ ಯೋಗಭ್ಯಾಸ ಹೇಳಿಕೊಡಲಾಗುತ್ತಿತ್ತು ಎಂದು ನೆನೆದರು.

ಭಗವದ್ಗೀತೆ ಪಠಣ: ಆಶ್ರಮದಲ್ಲಿ ಶಿಕ್ಷಣ ಪಡೆಯುತ್ತಿದ್ದ ವೇಳೆ ಭಗವದ್ಗೀತೆಯ 18 ಅಧ್ಯಾಯಗಳನ್ನು ಬಾಯಿಪಾಠ ಮಾಡಿಕೊಂಡಿದ್ದೆ. ಆದರೆ ಅದರ ಅರ್ಥವನ್ನು ತಿಳಿಸಿಕೊಟ್ಟಿದ್ದರೆ ಇನ್ನೂ ಅನುಕೂಲವಾಗುತ್ತಿತ್ತೇನೋ ಅನ್ನಿಸುತ್ತದೆ. ಶಾಂಭವಾ ನಂದಜಿ ಅವರು ಇಂತಹದ್ದನ್ನು ಮಾಡಬೇಕು ಎಂದುಕೊಂಡರೇ ಪೂರ್ಣಗೊಳಿಸಿಯೇ ತೀರುತ್ತಿದ್ದ ಛಲಗಾರರಾಗಿದ್ದರು. ಆದ್ದರಿಂದಲೇ ಅವರು ಇಂತಹ ವೇದಾಂತ ಕೇಂದ್ರವನ್ನು ಸ್ಥಾಪಿಸಲು ಸಾಧ್ಯವಾಯಿತು. ಅವರಲ್ಲಿ ಸ್ಪಷ್ಟ ಗುರಿ ಹಾಗೂ ದೂರದೃಷ್ಟಿ ಇತ್ತು. ಅದರ ಪ್ರತಿಫಲವೇ ರಾಮಕೃಷ್ಣ ಆಶ್ರಮ ಎಂದು ಗುಣಗಾನ ಮಾಡಿದರು.

ಮೈಸೂರು ಮಹಾರಾಜರ ಕೊಡುಗೆ: ಸ್ವಾಮಿ ವಿವೇಕಾನಂದರು ಅಮೆರಿಕಾದ ಚಿಕಾಗೋ ಭಾಷಣ ಮುಗಿಸಿ ಹಡಗಿನಲ್ಲಿ ವಾಪಸ್ ಆಗುತ್ತಿದ್ದ ವೇಳೆ ಅವರೊಂದಿಗೆ ಅಂದಿನ ಮೈಸೂರು ಮಹಾರಾಜರು ಇದ್ದರು. ಸಂಶೋಧನಾ ಫೌಂಡೇಶನ್ ಸ್ಥಾಪಿಸಿ, ಸ್ವದೇಶಿ ತಂತ್ರಜ್ಞಾನದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಬೆಂಗಳೂರಿನಲ್ಲಿ ಟಾಟಾ ಸಂಸ್ಥೆಗೆ ಭೂಮಿ ನೀಡಿದರ ಫಲವಾಗಿ ಇಂದು ಟಾಟಾ ಸಂಸ್ಥೆ ಬಹುದೊಡ್ಡ ಸಂಸ್ಥೆಯಾಗಿ ಬೆಳೆದಿದೆ ಎಂದು ಮೈಸೂರು ಮಹಾರಾಜರ ಕೊಡುಗೆಯನ್ನು ಸ್ಮರಿಸಿದರು.

ನನಗೆ ತುಂಬಾ ತ್ರಾಸ್‌ಕೊಟ್ಟ ಕನ್ನಂಬಾಡಿ ಕಟ್ಟೆ: ಮುಖ್ಯಮಂತ್ರಿಯಾಗಿದ್ದ ವೇಳೆ ನನಗೆ ತುಂಬಾ ತ್ರಾಸ್ ಕೊಟ್ಟಿದ್ದು ಕನ್ನಂಬಾಡಿ ಕಟ್ಟೆ, ಅಂದಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರ ಹೋರಾಟ, ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ತಾಳ್ಮೆಯ ನಿರ್ಧಾರಗಳಿಂದ ಫಲ ನೀಡಲಿಲ್ಲ. ಆದ್ದರಿಂದಲೇ ಅಟಲ್ ಬಿಹಾರಿ ವಾಜಪೇಯಿಯವರು ಸರ್ವ ಸಮ್ಮತ ಪ್ರಧಾನಿಗಳಾಗಿದ್ದರು ಅನ್ನಿಸುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜಿ, ನಿವೃತ್ತ ಪ್ರಾಂಶುಪಾಲ ಕೀರ್ತಿ ಕುಮಾರ್, ಪ್ರಕಾಶಕ ಪಾರ್ಥಸಾರಥಿ ಉಪಸ್ಥಿತರಿದ್ದರು.

ಗ್ರಂಥಗಳ ಲೋಕಾರ್ಪಣೆ....

ನಿವೃತ್ತ ಪ್ರಾಂಶುಪಾಲ ಕೀರ್ತಿ ಕುಮಾರ್ ರಚಿತ 'ಸ್ವಾಮಿ ಶಾಂಭವಾನಂದಜಿ– ಎ ಮಾಂಕ್ ವಿತ್ ಎ ವಿಷನ್ ಅಂಡ್ ಮಿಷನ್ ಹಾಗೂ ಸ್ವಾಮಿ ಮುಕ್ತಿದಾನಂದಜೀ ರಚಿತ 'ವಿವೇಕ ಮಾರ್ಗದರ್ಶಿ' ಕೃತಿಗಳನ್ನು ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಲೋಕಾರ್ಪಣೆಗೊಳಿಸಿದರು. ಅಲ್ಲದೆ ಶ್ರೀ ರಾಮಕೃಷ್ಣ ಆಶ್ರಮಕ್ಕೆ 2 ಲಕ್ಷ ರೂ.ದೇಣಿಗೆ ನೀಡಿದರು. ಬಳಿಕ ಸ್ವಾಮಿ ಶಾಂಭವಾನಂದಜಿ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ದೇಶಕ್ಕೆ ಕೊಡಗು ಇಬ್ಬರು ಮಹಾನ್ ಸೈನಿಕರನ್ನು ನೀಡಿದೆ...!

ನಮ್ಮ ದೇಶಕ್ಕೆ ಕೊಡಗು ಜಿಲ್ಲೆ ಇಬ್ಬರು ಮಹಾನ್ ಸೈನಿಕರನ್ನು ನೀಡಿದೆ. ಅವರಲ್ಲಿ ಮೊದಲನೇಯವರು ಫೀಲ್ಡ್ ಮಾರ್ಷಲ್ ಜನರಲ್ ಕಾರ್ಯಪ್ಪ ನಂತರ ಜನರಲ್ ತಿಮ್ಮಯ್ಯ ಅವರು. ಮೂರನೆಯವರೇ ಸ್ವಾಮಿ ಶಾಂಭವಾನಂದಜಿ. ಕೊಡಗಿನಿಂದ ಬಂದು ಮೈಸೂರಿನಲ್ಲಿ ಅತ್ಯಂತ ಪ್ರಖರವಾಗಿ ಬೆಳೆದವರಾಗಿದ್ದಾರೆ.

- ಎಸ್.ಎಂ.ಕೃಷ್ಣ, ಮಾಜಿ ಮುಖ್ಯಮಂತ್ರಿ

ನಕ್ಕರೆ ಅದೇ ಸ್ವರ್ಗ

ನಾಣಿ : ಏನಯ್ಯ ಗುಂಡ, ಸಿಗರೇಟು ಸೇದಿದರೆ ಕ್ಯಾನ್ಸರ್ ಬರುತ್ತದಂತೆ ಹೌದಾ?
ಗುಂಡ : ಅದೇನೋ ನನಗೆ ಗೊತ್ತಿಲ್ಲಪ್ಪ, ನಾನು ಸಿಗರೇಟು ಸೇದುವಾಗಲೆಲ್ಲಾ ಬರೀ ಹೊಗೆಯಷ್ಟೇ ಬರುತ್ತದೆ!

ಮೈಸೂರು ಮಿತ್ರ
ಸೋಮವಾರ, 11 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

"ಯಾರ ಸಹಾಯಕ್ಕೂ ಕಾದು ಕುಳಿತುಕೊಳ್ಳಬೇಡಿ, ಮಾನವ ಸಹಾಯಕ್ಕಿಂತಲೂ ಭಗವಂತನ ಅನಂತ ಪಾಲು ಮಿಗಿಲಲ್ಲವೆ"

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಸತ್ಯ ಹೇಳಿದವ ಸತ್ತೇ ಹೋದ!, ಅನ್ಯಾಯ ಮಾಡಿದವ ಅನ್ನ ತಿಂದ!!

ನಿಮ್ಮ ಪತ್ರಗಳು

ಕೆಸರು ಗದ್ದೆಯಾಗಿರುವ ವಿಜಯನಗರ ರಸ್ತೆಗಳು

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತದಲ್ಲಿ ಯುಜಿಡಿ ಪೈಪ್‌ಲೈನ್‌ಗಾಗಿ ರಸ್ತೆಗಳನ್ನು ಅಗೆದು ಕೆಸರು ಗದ್ದೆ ಮಾಡಲಾಗಿದೆ. ಇದರಿಂದ ಜನರು ಮನೆಯಿಂದ ಹೊರಗೆ ಬರಲು ಸಾಧ್ಯವಾಗುತ್ತಿಲ್ಲ. ಈ ಜಿಟಿ-ಜಿಟಿ ಮಳೆಯಲ್ಲೇ ಈ ಕೆಲಸ ಮಾಡಬೇಕೇ, ಮಳೆ ಇಲ್ಲದೆ ಇದ್ದಾಗ ನಿದ್ರಾವಸ್ಥೆಯಲ್ಲಿರುವ ಪ್ರಾಧಿಕಾರ ಮಳೆಗಾಗಿ ಕಾಯುವಂತಿದೆ. ಮಳೆ ಬಂದಾಗ ರಸ್ತೆ ಅಗೆಯುವುದು, ಮಳೆ ಬಂದಾಗ ಡಾಂಬರ್ ಹಾಕುವುದು ಬಿಟ್ಟು ಇದೇ ಕೆಲಸವನ್ನು ಮಳೆ ಇಲ್ಲದೆ ಇರುವ ಸಮಯದಲ್ಲಿ ಮಾಡಬಹುದಲ್ಲ.



ಮಳೆಗಾಲದಲ್ಲಿ ರಸ್ತೆ ತುಂಬೆಲ್ಲಾ ಮಣ್ಣನ್ನು ಹಾಕಿದರೆ ನಿವಾಸಿಗಳು ಮನೆಯಿಂದ ಹೊರಗೆ ಬರುವುದಾದರೂ ಹೇಗೆ. ನಾವು ಆಯ್ಕೆ ಮಾಡಿ ಕಳುಹಿಸಿರುವ ಜನಪ್ರತಿನಿಧಿಗಳು ಈ ರಸ್ತೆಗಳನ್ನು ಬಂದು ನೋಡಲಿ. ಈ ಬಗ್ಗೆ ಹಿರಿಯ ನಾಗರಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ವಲಯ ಇಂಜಿನಿಯರ್‌ಗೆ ಹೇಳಿದರೂ ಕೆಲಸ ಮುಂದುವರೆಸಿದ್ದಾರೆ. ಬಡಾವಣೆ ಅಭಿವೃದ್ಧಿಯನ್ನು ಪ್ರಶಂಸಿಸುತ್ತೇವೆ. ಆದರೆ ಇದೇ ಕೆಲಸವನ್ನು ಮಳೆ ನಿಂತ ಮೇಲೆ ಮಾಡಲಿ ಎಂಬುದೇ ಇಲ್ಲಿನ ನಿವಾಸಿಗಳ ಹಾಗೂ ಕ್ಷೇಮಾಭಿವೃದ್ಧಿ ಸಂಘದ ಕಳಕಳಿಯ ಮನವಿ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ತಾವೇ ಪರಿಶೀಲಿಸಿ ಮಳೆ ನಿಂತ ಮೇಲೆ ಈ ಕಾಮಗಾರಿಗೆ ಆದೇಶಿಸಬೇಕೆಂದು ಮನವಿ ಮಾಡುತ್ತೇವೆ.

– ಬಿ.ಜಿ. ರಂಗೇಗೌಡ, ವಿಜಯನಗರ 3ನೇ ಹಂತ, ಮೈಸೂರು.

ಕಿರುಗುಂದ ಬಸ್ಸಿನ ಪ್ರಯಾಣ ನರಕಯಾತನೆ!



ಮಾನ್ಯರೆ,

ನಂಜನಗೂಡಿನಿಂದ ಕಿರುಗುಂದ, ಬಿಳಿಗೆರೆ, ಸುತ್ತೂರು, ಹೊಸಕೋಟೆ ಮಾರ್ಗವಾಗಿ ಮೈಸೂರಿಗೆ ಹೊರಡುವ ಬಸ್ಸಿನ ಪ್ರಯಾಣ ನರಕಯಾನೆ. ಬಿಳಿಗೆರೆ ಗ್ರಾಮದಿಂದ ಪ್ರಯಾಣಿಕರ ಒತ್ತಡ ಹೆಚ್ಚಾಗುತ್ತಾ ಹೋದಂತೆ ಸುತ್ತೂರು, ಹೊಸಕೋಟೆ, ದಂಡಿಕೆರೆ ಹಾಗೂ ವರುಣಾದಲ್ಲಂತೂ ಜನಭರಿತವಾಗಿ ನಗರ ಬಸ್ ನಿಲ್ದಾಣ ತಲುಪುವವರೆಗೂ ತುಂಬಿ ತುಳುಕುವ ಈ ಬಸ್ಸಿನಲ್ಲಿ ನಿಲ್ಲಲೂ ಸಹ ಸ್ಥಳವಿಲ್ಲದೆ ಶುದ್ಧ ಗಾಳಿಯೂ ಇಲ್ಲದೆ ಕಷ್ಟಪಡುತ್ತಾ ಪ್ರಯಾಣಿಸುವಂತಾಗಿದೆ.

ಇನ್ನು ಬಸ್ ತುಂಬಿ ತುಳುಕುತ್ತಿದ್ದರೂ ಆಯಾ ಗ್ರಾಮಗಳ ಬಸ್ ನಿಲ್ದಾಣಗಳಲ್ಲಿ ಬಸ್‌ನ್ನು ನಿಲ್ಲಿಸಲೇಬೇಕು. ಇಲ್ಲವಾದಲ್ಲಿ ಬಸ್ಸಿನ ಚಾಲಕ ಹಾಗೂ ನಿರ್ವಾಹಕರು ಗ್ರಾಮಸ್ಥರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ.

ಎರಡು ಬಸ್ಸಿನ ಜನರು ಒಂದೇ ಬಸ್ಸಿನಲ್ಲಿ ತುಂಬುವುದು ಸರ್ವೇಸಾಮಾನ್ಯವಾಗಿದ್ದು, ಇದು ನಿತ್ಯದ ಗೋಳಾಗಿದೆ. ಪ್ರಯಾಣಿಕರು ಹತ್ತಲು, ಇಳಿಯಲು ಪ್ರಯಾಸ ಪಡುವಂತಾಗಿದೆ. ವಯಸ್ಕರು, ಮಕ್ಕಳು, ಕಾಲೇಜು ಹೆಣ್ಣು ಮಕ್ಕಳಿಗಂತೂ ಬಹಳ ಹಿಂಸೆಯಾಗಿದೆ. ಇಷ್ಟರ ನಡುವೆಯೂ ಯಾವುದೇ ಆವೇಶ, ಒತ್ತಡಕ್ಕೆ ಒಳಗಾಗದೇ ಪ್ರಯಾಣಿಕರನ್ನು ಸಂಯಮದಿಂದ ನಿಭಾಯಿಸುವ ನಿರ್ವಾಹಕರ ಕಾರ್ಯವೈಖರಿ ಮತ್ತು ತುಂಬಿರುವ ಬಸ್ಸನ್ನು ಹಲವು ಅಪಾಯದ ತಿರುವುಗಳಿಂದ ಹುಷಾರಾಗಿ ಕ್ರಮಿಸಿ, ಕಿಷ್ಕಿಂದೆಯ ರಸ್ತೆಗಳಲ್ಲಿ ನೈಪುಣ್ಯತೆಯಿಂದ ಬಸ್ ಚಾಲನೆ ಮಾಡಿ ದಡ ಸೇರಿಸುವ ಚಾಲಕರ ಕಾರ್ಯಕ್ಷಮತೆ ನಿಜಕ್ಕೂ ಶ್ಲಾಘನೀಯ.

ಇನ್ನು ಇದೇ ಬಸ್ಸು ನಗರ ಬಸ್ ನಿಲ್ದಾಣದಿಂದ ಸಂಜೆ 5.30ಕ್ಕೆ ಹೊರಡುವಾಗಲೂ ಪ್ರಯಾಣಿಕರಿಗೆ ನರಕಯಾತನೆ ದುಪ್ಪಟ್ಟಾಗಿ ಪರಿಣಮಿಸುತ್ತದೆ. ಇದಕ್ಕೆಲ್ಲಾ ಮುಖ್ಯ ಕಾರಣ ಈ ಮಾರ್ಗವಾಗಿ ಕೇವಲ ಒಂದು ಬಸ್ಸನ್ನು ಮಾತ್ರ ಓಡಾಡಲು ಬಿಟ್ಟಿರುವುದು. ಇನ್ನಾದರೂ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸದಾ ಭರ್ತಿಯಾಗುವ ಈ ಏಕೈಕ ಬಸ್ಸಿನಿಂದ ಯಾವುದೇ ಅವಘಡ ಸಂಭವಿಸುವ ಮುನ್ನ ಹೆಚ್ಚುವರಿ ಬಸ್ಸುಗಳನ್ನು ಓಡಿಸುವ ಮೂಲಕ ಸಾರ್ವಜನಿಕರ ಅಮೂಲ್ಯ ಜೀವಗಳ ಬಗ್ಗೆ ಕಾಳಜಿ ವಹಿಸಿ.

– ವಿ. ದೇವರಾಜು, ಅಳಗಂಚಿ ಗ್ರಾಮ, ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಿ...

ಮಾನ್ಯರೆ,

ಮೈಸೂರು ಸಿಟಿ ಬಸ್ ನಿಲ್ದಾಣದಿಂದ ನಜರ್‌ಬಾದ್, ಟೆರೆಷಿಯನ್ ಕಾಲೇಜು, ರಾಜ್‌ಕುಮಾರ್ ರಸ್ತೆ, ದೇವೇಗೌಡ ಸರ್ಕಲ್, ಮಾನಸೀನಗರ, ವಿಟಿಯು ಕಾಲೇಜು, ಸಾತಗಳ್ಳಿ ನಿಲ್ದಾಣ, ನಾರಾಯಣ ಹೃದಯಾಲಯ, ಆರ್.ಎಸ್. ನಾಯ್ಡುನಗರ ಬಸ್ ನಿಲ್ದಾಣ, ಕೊಲಂಬಿಯಾ ಏಷಿಯಾ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಕಾಲೇಜು, ಶ್ರೀನಿವಾಸ ಥಿಯೇಟರ್, ಹನುಮಂತನಗರ, ಆರ್‌ಎಂಸಿಗಳಿಗೆ ಕೆ.ಆರ್.ಆಸ್ಪತ್ರೆ ಮತ್ತು ದೊಡ್ಡ ಗಡಿಯಾರ ಮಾರ್ಗವಾಗಿ ಹೆಚ್ಚುವರಿ ಬಸ್ಸುಗಳ ಸೌಲಭ್ಯವನ್ನು ಕಲ್ಪಿಸಿ. ಈ ಮಾರ್ಗವಾಗಿ ಯಾವುದೇ ಬಸ್‌ಗಳ ಸಂಚಾರಗಳು ಸರಿಯಾಗಿ ಇಲ್ಲ. ಆದ್ದರಿಂದ ಸಂಬಂಧಪಟ್ಟವರು ಗಮನಹರಿಸಬೇಕು. ಇದರಿಂದ ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ನೌಕರರಿಗೆ ಅನುಕೂಲವಾಗಲಿದೆ.

– ಎನ್.ಆರ್. ವಿಜಯಕುಮಾರ್, ಮಾನಸೀನಗರ, ಮೈಸೂರು.

ಗುರುಗಳಿಗೊಂದು ಭಕ್ತಿಭಾವದ ನಮನ

ಗುರು ಪೂರ್ಣಿಮಾ

ಗುರುವೇ ನಮಃ.... ಗುರು ಪೌರ್ಣಿಮೆ...



ವಿಶ್ವದಲ್ಲೇ ಭಾರತ ತನ್ನ ವಿಶಿಷ್ಟ ಸಂಸ್ಕೃತಿ, ಸಂಪ್ರದಾಯಗಳಿಗೆ ಹೆಸರಾದ ದೇಶವಾಗಿದೆ.ಇಲ್ಲಿ ಆಚರಿಸಲಾಗುವ ಹಬ್ಬಗಳು ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿದ್ದು ತಮ್ಮದೇ ಆದ ರೀತಿಯಲ್ಲಿ ಮಹತ್ವ ಹೊಂದಿವೆ. ಅವುಗಳಲ್ಲಿ ಗುರು ಪೂರ್ಣಿಮೆಯೂ ಒಂದು. ಆಷಾಢ ಮಾಸದ ಶುಕ್ಲ ಪಕ್ಷದ ಹುಣ್ಣಿಮೆಯಂದು ಇದನ್ನು ಆಚರಿಸಲಾಗುತ್ತದೆ. ಈ ವರ್ಷ ಜುಲೈ ತಿಂಗಳ 13ರಂದು ಗುರು ಪೂರ್ಣಿಮೆ ದಿನವಾಗಿದೆ.

ಗುರು ಪೂರ್ಣಿಮೆಯನ್ನು ಭಾರತದಲ್ಲಿ ಮಹರ್ಷಿ ವೇದವ್ಯಾಸರ ಸ್ಮರಣೆಯಲ್ಲಿ ಮಾಡಲಾಗುತ್ತದೆ. ಈ ಪುಣ್ಯದಿನದಂದೇ ಅವರು ಜನಿಸಿದರೆಂದು ಪ್ರತೀತಿ. ಅಲ್ಲದೆ ಈ ದಿನದಂದೇ ಅವರು ವೇದಗಳ ರಚನೆಗೈದರೆಂದು ಮತ್ತು ಬ್ರಹ್ಮಸೂತ್ರ ಬರವಣಿಗೆ ಸಂಪೂರ್ಣಗೊಳಿಸಿದರೆಂದು ನಂಬಲಾಗಿದೆ. ಈ ಕಾರಣದಿಂದ ಈ ಹಬ್ಬವನ್ನು ವ್ಯಾಸ ಪೂರ್ಣಿಮೆ ಎಂದೂ ಕರೆಯಲಾಗುತ್ತದೆ. ಯೋಗ ಪರಂಪರೆಯ ಪ್ರಕಾರ ಭಗವಾನ್ ಶಿವ ಈ ದಿನದಂದು ಸಪ್ತ ಋಷಿಗಳಿಗೆ ಯೋಗಜ್ಞಾನ ನೀಡಿ ಆದಿಗುರು ಎನಿಸಿಕೊಂಡರು.

ಈ ಹಬ್ಬವನ್ನು ಹಿಂದೂಗಳು ಮಾತ್ರವಲ್ಲದೆ ಬೌದ್ಧ ಮತ್ತು ಜೈನ ಧರ್ಮಿಯರೂ ಆಚರಿಸುತ್ತಾರೆ.ಈ ದಿನದಂದು, ಗೌತಮ ಬುದ್ಧ ತನಗೆ ಜ್ಞಾನೋದಯವಾದ ಬಳಿಕ ಸಾರನಾಥಕ್ಕೆ ತೆರಳಿ ಅಲ್ಲಿ ತನ್ನ ಐವರು ಪ್ರಿಯ ಶಿಷ್ಯರಿಗೆ ತನ್ನ ಮೊದಲ ಉಪದೇಶ ನೀಡಿದನು. ಇದರಿಂದ ಅವರಿಗೂ ಜ್ಞಾನೋದಯವಾಯಿತು. ಇವರಿಂದ ಸಂಘ ಎಂಬ ಜ್ಞಾನೋದಯವಾದವರ ಪಂಗಡ ಶುರುವಾಯಿತು. ಬುದ್ಧ ನೀಡಿದ ಮೊದಲ ಬೋಧನೆಗೆ 'ಧರ್ಮ ಚಕ್ರ ಪ್ರವರ್ತನ ಸೂತ್ರ' ಎಂದು ಕರೆಯಲಾಗುತ್ತದೆ. ಹೀಗಾಗಿ ಈ ದಿನದಂದು ಬೌದ್ಧ ಧರ್ಮಿಯರು ಹಬ್ಬ ಆಚರಿಸಿ ಧ್ಯಾನ ಮಾಡುತ್ತಾರೆ. ಮತ್ತು ಬುದ್ಧನ ಬೋಧನೆಗಳನ್ನು ಓದುತ್ತಾರೆ. ಜೈನ ಧರ್ಮಿಯರಿಗೂ ಈ ದಿನ ಪವಿತ್ರವಾಗಿದೆ.

ಜೈನ ಧರ್ಮದ ಇಪ್ಪತ್ತನಾಲ್ಕನೇ ತೀರ್ಥಂಕರ ಮಹಾವೀರ ತನ್ನ ಮೊದಲ ಅನುಯಾಯಿ ಗೌತಮ ಸ್ವಾಮಿಯನ್ನು ಈ ದಿನದಂದು ಪಡೆದನೆಂದು ಜೈನಧರ್ಮದ ಅನುಯಾಯಿಗಳು ನಂಬುತ್ತಾರೆ. ಈ ದಿನ ಅವರು 'ತ್ರಿನೋಕ್ ಗುಹಾ' ಆದರು ಎಂಬ ನಂಬಿಕೆಯನ್ನು ಹೊಂದಿದ್ದಾರೆ. ಆದ್ದರಿಂದ ಮಹಾವೀರನನ್ನು ಗೌರವಿಸಲು ಗುರು ಹುಣ್ಣಿಮೆಯನ್ನು 'ತ್ರಿನೋಕ್ ಗುಹಾ ಪೂರ್ಣಿಮಾ' ಎಂದು ಆಚರಿಸುತ್ತಾರೆ.

ಗುರು ಪೂರ್ಣಿಮೆಯ ಮಹತ್ವ: ಭಾರತೀಯ ಸಂಸ್ಕೃತಿಯ ಪ್ರಕಾರ ಗುರು ಎನ್ನುವವರು ನಮಗೊಬ್ಬರು ಮಾರ್ಗದರ್ಶಕರು. ಅವರು ನಮ್ಮಲ್ಲಿ ಇರುವ ಭೀತಿ ಹಾಗೂ ಅಜ್ಞಾನವನ್ನು ತೊಡೆದು ನಮ್ಮ ಸರ್ವಾಂಗೀಣ ಪ್ರಗತಿಗೆ ಕಾರಣರಾಗುವವರು. 'ಗು' ಪದದ ಅರ್ಥ ಅಂಧಕಾರ ಹಾಗೂ 'ರ' ಪದದ ಅರ್ಥ ಪ್ರಕಾಶ. ಅಂದರೆ ಗುರು ನಮ್ಮನ್ನು ಅಜ್ಞಾನದ ಅಂಧಕಾರದಿಂದ ಜ್ಞಾನವೆಂಬ ಪ್ರಕಾಶದ ಕಡೆಗೆ ಕರೆದೊಯ್ಯುವವರು. ರಾಮಕೃಷ್ಣ ಪರಮಹಂಸರ ಮಾತಿನಲ್ಲಿ ಹೇಳುವುದಾದರೆ **"ನಿಜವಾದ ಜ್ಞಾನದ ಬೆಳಕಿನಿಂದ ಪ್ರಕಾಶಿತನಾದವನೇ ನಿಜವಾದ ಶಿಕ್ಷಕ"**.

ಆಧ್ಯಾತ್ಮಿಕ ಚಿಂತಕರು ಹೇಳುವಂತೆ ಮನುಷ್ಯನ ಶರೀರದಲ್ಲಿ ಗಂಟಲಿನ ಬಳಿಯಲ್ಲಿ ಇರುವಂತಹ ವಿಶುದ್ಧ ಚಕ್ರದಲ್ಲಿ ಗುರು ನೆಲೆಸಿರುತ್ತಾನೆ. ಮತ್ತು ನಾವು ಉನ್ನತ ಮಟ್ಟವನ್ನು ತಲುಪಿದಾಗ ಅದು ಜಾಗೃತವಾಗುತ್ತದೆ ಎಂದು ಹೇಳಲಾಗುತ್ತದೆ. ಗುರು ಪೂರ್ಣಿಮೆಯ ಮುಖ್ಯ ಉದ್ದೇಶ ಗುರುಗಳು ನಮಗೆ ನೀಡಿದ ಜ್ಞಾನಕ್ಕೆ ಬದ್ಧರಾಗಿ ಅವರಿಗೆ ನಮ್ಮ ಗೌರವ ಸಲ್ಲಿಸುವುದಾಗಿದೆ. ನಮ್ಮ ಜೀವನವನ್ನು ಮೌಲ್ಯಯುತ ಮತ್ತು ಸಂಸ್ಕಾರಯುತಗೊಳಿಸಿದ, ಸುಂದರ ಜೀವನ ರೂಪಿಸಿ ಕೊಳ್ಳಲು ನೆರವಾದ ಗುರುಗಳಿಗೆ ಗೌರವ ಅರ್ಪಿಸುವುದಾಗಿದೆ. ಈ ದಿನ ಜ್ಞಾನ ಮತ್ತು ಬೋಧನೆಯ ದಿನವಾಗಿರುವ ಕಾರಣ ಇದನ್ನು ಜ್ಞಾನ ಹುಣ್ಣಿಮೆ ಎನ್ನಲಾಗುತ್ತದೆ. ಮಳೆಗಾಲದ ನಾಲ್ಕು ತಿಂಗಳು ಗಳಾದ ಚಾತುರ್ಮಾಸದಲ್ಲಿ ಬರುವ ಈ ಗುರು ಹುಣ್ಣಿಮೆಯಂದು ಸನ್ಯಾಸಿಗಳು ತಮ್ಮ ಗುರುಗಳಿಗೆ ಪೂಜೆ ಸಲ್ಲಿಸುತ್ತಾರೆ. ಗುರು ಪೂರ್ಣಿಮೆಯ ದಿನ ಗುರು ಸೂತ್ರದ ಪ್ರಭಾವ ಬೇರೆ ದಿನಗಳಿಗಿಂತ ಸಾವಿರ ಪಟ್ಟು ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ ಎಂದು ನಂಬಲಾಗಿದೆ.

ಭಾರತೀಯ ಗುರು ಶಿಷ್ಯ ಪರಂಪರೆ ಜಗತ್ತಿನಲ್ಲೇ ಹೆಸರುವಾಸಿಯಾಗಿದೆ. ವಸಿಷ್ಠ ರಾಮರ, ಕೃಷ್ಣ–ಸಾಂದೀಪನಿ, ದ್ರೋಣ–ಅರ್ಜುನ, ದ್ರೋಣ –ಏಕಲವ್ಯ, ರಾಮಕೃಷ್ಣ ಪರಮಹಂಸ–ಸ್ವಾಮಿ ವಿವೇಕಾನಂದರು, ಛತ್ರಪತಿ ಶಿವಾಜಿ– ರಾಮದಾಸರು ಹೀಗೆ ಈ ತರದ ಜನಪ್ರಿಯ ಮಹಾನ್ ಗುರು ಶಿಷ್ಯರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಪ್ರಾಚೀನ ಗುರುಕುಲದಿಂದ ಇಂದಿನ ಆಧುನಿಕ ಶಾಲೆಗಳಲ್ಲಿನ ಶಿಕ್ಷಕರವರೆಗೆ ಗುರುವಿಗೆ ತಮ್ಮದೇ ಆದ ಪೂಜನೀಯ ಸ್ಥಾನವಿದೆ. ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಒಬ್ಬ ಅತ್ಯುತ್ತಮ ಗುರುವಿನ ಮಾರ್ಗದರ್ಶನ ವಿರುತ್ತದೆ ಎಂಬುದು ಸರ್ವವಿದಿತ. ಗುರು ತನ್ನ ಶಿಷ್ಯನಿಗೆ ತಂದೆ ಯಾಗಿ, ಸಹೋದರನಾಗಿ, ಮಿತ್ರನಾಗಿ ಉದ್ಧಾರದ ಮಾರ್ಗಕ್ಕೆ ಕರೆದೊಯ್ಯುತ್ತಾನೆ. ತನ್ನ ಶಿಷ್ಯನನ್ನು ಅತ್ಯುಚ್ಚ ಸ್ಥಾನದಲ್ಲಿ ನೋಡುವುದು ಪ್ರತಿಯೊಬ್ಬ ಗುರುವಿನ ಕನಸಾಗಿರುತ್ತದೆ. ಶಿಷ್ಯ ತನ್ನ ಗುರಿ ಸಾಧನೆಯಲ್ಲಿ ಸೋತಾಗ, ಮತ್ತೆ ಅವನಲ್ಲಿ ಆತ್ಮವಿಶ್ವಾಸ ತುಂಬಿ ಸಾಧನೆಗೆ ಹುರಿದುಂಬಿಸುತ್ತಾನೆ.

"ಭಾರತೀಯ ಗುರು ಶಿಷ್ಯ ಪರಂಪರೆ ಜಗತ್ತಿನಲ್ಲೇ ಹೆಸರುವಾಸಿಯಾಗಿದೆ. ವಸಿಷ್ಠ ರಾಮರ, ಕೃಷ್ಣ–ಸಾಂದೀಪನಿ, ದ್ರೋಣ–ಅರ್ಜುನ, ದ್ರೋಣ–ಏಕಲವ್ಯ, ರಾಮಕೃಷ್ಣ ಪರಮಹಂಸ–ಸ್ವಾಮಿ ವಿವೇಕಾನಂದರು, ಛತ್ರಪತಿ ಶಿವಾಜಿ–ರಾಮದಾಸರು ಹೀಗೆ ಈ ತರದ ಜನಪ್ರಿಯ ಮಹಾನ್ ಗುರು ಶಿಷ್ಯರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಪ್ರಾಚೀನ ಗುರುಕುಲದಿಂದ ಇಂದಿನ ಆಧುನಿಕ ಶಾಲೆಗಳಲ್ಲಿನ ಶಿಕ್ಷಕರವರೆಗೆ ಗುರುವಿಗೆ ತಮ್ಮದೇ ಆದ ಪೂಜನೀಯ ಸ್ಥಾನವಿದೆ. ಒಬ್ಬ ವ್ಯಕ್ತಿಯ ಯಶಸ್ಸಿನ ಹಿಂದೆ ಒಬ್ಬ ಅತ್ಯುತ್ತಮ ಗುರುವಿನ ಮಾರ್ಗದರ್ಶನ ವಿರುತ್ತದೆ ಎಂಬುದು ಸರ್ವವಿದಿತ. ಗುರು ತನ್ನ ಶಿಷ್ಯನಿಗೆ ತಂದೆಯಾಗಿ, ಸಹೋದರನಾಗಿ, ಮಿತ್ರನಾಗಿ ಉದ್ಧಾರದ ಮಾರ್ಗಕ್ಕೆ ಕರೆದೊಯ್ಯುತ್ತಾನೆ. ತನ್ನ ಶಿಷ್ಯನನ್ನು ಅತ್ಯುಚ್ಚ ಸ್ಥಾನದಲ್ಲಿ ನೋಡುವುದು ಪ್ರತಿಯೊಬ್ಬ ಗುರುವಿನ ಕನಸಾಗಿರುತ್ತದೆ. ಶಿಷ್ಯ ತನ್ನ ಗುರಿ ಸಾಧನೆಯಲ್ಲಿ ಸೋತಾಗ, ಮತ್ತೆ ಅವನಲ್ಲಿ ಆತ್ಮವಿಶ್ವಾಸ ತುಂಬಿ ಸಾಧನೆಗೆ ಹುರಿದುಂಬಿಸುತ್ತಾನೆ.

ಗುರು ರಾಷ್ಟ್ರದ ನಿರ್ಮಾತೃವಾಗಿದ್ದು ಮಕ್ಕಳು ದೇಶದ ಭವಿಷ್ಯವಾಗಿರುತ್ತಾರೆ. ಅವರನ್ನು ರಾಷ್ಟ್ರಸೇವೆಗೆ ಪ್ರೇರೇಪಿಸುವುದು ಗುರುವೇ. ವರ್ತಮಾನದಲ್ಲಿ ಭಾರತ ವಿಶ್ವ ಗುರುವಾಗುವ ಸಾಮರ್ಥ್ಯ ಹೊಂದಿದ್ದು, ಅದಕ್ಕೆ ಕಾರಣ, ನಮಗೆ ನಮ್ಮ ಗುರುಗಳು ನೀಡಿದ ಅತ್ಯುತ್ತಮ ಶಿಕ್ಷಣವೇ ಆಗಿದೆ.

ಗುರುವೆಂಬುದು ಕೇವಲ ಆಧ್ಯಾತ್ಮಿಕಕ್ಕೆ ಸಂಬಂಧಿಸಿ ಸನ್ಯಾಸಿಯೇ ಆಗಬೇಕೆಂದಿಲ್ಲ. ಅದು ವಿಸ್ತಾರ ಪರಿಧಿಯನ್ನು ಹೊಂದಿದ್ದು ಸಂಸ್ಕೃತಿ, ಸಂಸ್ಕಾರ, ಸನ್ನಡವಳಿಕೆ, ಕ್ರೀಡೆ, ರಾಜಕೀಯ, ಸಾಹಿತ್ಯ, ಸಂಗೀತ, ಶಿಕ್ಷಣ ಎಲ್ಲಾ ಕ್ಷೇತ್ರಗಳಲ್ಲಿನ ಗುರುಗಳಿಗೆ ವ್ಯಾಪಿಸಿದೆ. ಹಾಗೆ ನೋಡುವುದಾದರೆ ತಾಯಿಯೇ ಮೊದಲ ಗುರುವಾಗುತ್ತಾಳೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ತಾಯಿ ತಂದೆಯರು ಗುರುಗಳೇ ಹೌದು.

ಗುರು ಎಂದರೆ ವ್ಯಕ್ತಿಯಲ್ಲ, ಅದೊಂದು ಶಕ್ತಿಯಾಗಿದ್ದು ಕತ್ತಲಿನಿಂದ ಬೆಳಕಿನೆಡೆಗೆ ಒಯ್ಯುವ ಮಹಾನ್ ಶಕ್ತಿಯಾಗಿದೆ. ತಮಗಿಂತ ಶಿಷ್ಯರು ಉನ್ನತಿ ಹೊಂದಿದರೆ ತಮ್ಮ ಜೀವನ ಸಾರ್ಥಕ ಎಂದು ಭಾವಿಸುವ ಉದಾತ್ತ ಮನಸ್ಸಿನ ಗುರುಗಳು ಕಣ್ಣಿಗೆ ಕಾಣುವ ಪ್ರತ್ಯಕ್ಷ ದೇವರೇ ಹೌದು.

ಮಹಾತ್ಮರ ದೃಷ್ಟಿಯಲ್ಲಿ ಮತ್ತು ಜೀವನದಲ್ಲಿ ಗುರುಗಳು: ಸ್ವಾಮಿ ವಿವೇಕಾನಂದರು ತಮ್ಮ ದೇವ ಸಾಕ್ಷಾತ್ಕಾರದ ಕನಸು ಪರಮಹಂಸರ ಆಶೀರ್ವಾದದಿಂದ ಈಡೇರಿತು ಎನ್ನುತ್ತಾರೆ. ಕಬೀರ ದಾಸರು ತಮ್ಮ ದೋಹೆಯಲ್ಲಿ ಇಡೀ ಭೂಮಿಯನ್ನೇ ಕಾಗದ ಮಾಡಿಕೊಂಡು, ಇಡೀ ವನವನ್ನೇ ಲೇಖನಿ ಮಾಡಿಕೊಂಡು, ಸಪ್ತ ಸಾಗರದ ನೀರನ್ನೇ ಮಸಿ ಮಾಡಿಕೊಂಡರೂ ಗುರು ಮಹಿಮೆ ವರ್ಣಿಸಲಾಗದೆಂದು ಹೇಳುತ್ತಾರೆ.

ಪುರಂದರ ದಾಸರು ಹೇಳುವಂತೆ "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣಾ ಮುಕುತಿ" ಎನ್ನುತ್ತಾರೆ. ಯಾವುದೇ ವಿದ್ಯೆ ಫಲಪ್ರದವಾಗಲು ಗುರುಕೃಪೆ ಬೇಕೆನ್ನುತ್ತಾರೆ. "ಹರ ಮುನಿದರೂ ಗುರು ಕಾಯುವನಯ್ಯಾ" ಎಂಬ ಶರಣರ ಮಾತಿನಲ್ಲಿ ಗುರುವಿನ ಮಹತ್ವ ವ್ಯಕ್ತವಾಗುತ್ತದೆ. "ಶಿವ ಪಥವನ್ನರಿವೊಡೆ ಗುರು ಪಥವೇ ಮೊದಲು" ಎಂದು ಬಸವಣ್ಣನವರು ಹೇಳಿದ್ದಾರೆ.

ಮಹಾನ್ ಪಂಡಿತರಾದ ಚಾಣಕ್ಯ ತನ್ನ ವಿದ್ವತ್ತಿನಿಂದ ವೀರ ಶಿಷ್ಯ ಚಂದ್ರಗುಪ್ತ ಮೌರ್ಯನನ್ನು ಚಕ್ರಾಧಿಪತಿಯನ್ನಾಗಿ ಮಾಡಿದರು. ಗೀತೆಯನ್ನು ಬೋಧಿಸಿ ಜಗದ್ಗುರು ವೆನಿಸಿಕೊಂಡ ಭಗವಾನ್ ಕೃಷ್ಣ ಕೂಡ, ತಾನೂ ಗರ್ಗ ಮತ್ತು ಸಾಂದೀಪನಿ ಗುರುಗಳ ಸೇವೆಗೈಯ್ಯುತ್ತ ಅವರ ಪ್ರಿಯ ಶಿಷ್ಯ ಎನಿಸಿಕೊಳ್ಳುತ್ತಾನೆ. ಅಂತೆಯೇ ಶಿವಾಜಿ, ಮಹಾತ್ಮಾ ಗಾಂಧಿ ಮೊದಲಾದ ಪ್ರಸಿದ್ಧ ವ್ಯಕ್ತಿಗಳ ಜೀವನದ ಮೇಲೆ, ಸಾಧನೆಗಳ ಮೇಲೆ ಅವರ ಗುರುಗಳು ಬೀರಿದ ಪ್ರಭಾವ ಅತ್ಯಂತ ಮಹತ್ವಪೂರ್ಣವಾದದ್ದು.

ಗುರು ಪೂರ್ಣಿಮೆಯ ಆಚರಣೆ: ಗುರು ಪೂರ್ಣಿಮೆಯಂದು, ಜನರು ಸಂತಸದಿಂದ ಹೊಸಬಟ್ಟೆ ಉಟ್ಟು ಗುರುವಿನಿಂದ ಪಡೆದ ದೀಕ್ಷೆ, ಮಂತ್ರಗಳನ್ನು ಸಿದ್ಧಿಸಿಕೊಳ್ಳುತ್ತಾರೆ. ಅಲ್ಲದೆ ತಮ್ಮ ಗುರುವಿನ ಹೆಸರಿನಲ್ಲಿ ದಾನ ಧರ್ಮಾದಿಗಳನ್ನು ಮಾಡುತ್ತಾರೆ. ಮತ್ತು ಗುರುಗಳ ಬಳಿ ಹೋಗಿ ಫಲ ತಾಂಬೂಲ ನೀಡಿ ಅವರನ್ನು ಸನ್ಮಾನಿಸಿ ಆಶೀರ್ವಾದ ಪಡೆಯುತ್ತಾರೆ. ಈ ದಿನದಂದು 'ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮಃ' ಎಂದು ನಮ್ಮ ಗುರುಗಳನ್ನು ಸ್ಮರಿಸುವುದು ಅತ್ಯಂತ ಶ್ರೇಯಸ್ಕರ ಎಂದು ನಂಬಲಾಗಿದೆ. ಅಲ್ಲದೆ ಗುರು ಪ್ರಧಾನವಾದ ಧಾರ್ಮಿಕ ಕ್ಷೇತ್ರಗಳಾದ ಮಂತ್ರಾಲಯ, ಗಾಣಗಾಪುರ, ಶಿರಡಿ ಮುಂತಾದವುಗಳಿಗೆ ಭೇಟಿ ಪುಣ್ಯಕರ ಎನ್ನಲಾಗುತ್ತದೆ. ಭಾರತದ ಧಾರ್ಮಿಕ ಕ್ಷೇತ್ರದಲ್ಲಿ ಆಚಾರ್ಯತ್ರಯರೆಂದು ಹೆಸರಾದ ಶಂಕರಾಚಾರ್ಯ, ರಾಮಾನುಜಾ ಚಾರ್ಯ, ಮಧ್ವಾಚಾರ್ಯರಿಗೆ ಸಂಬಂಧಿಸಿದ ಮಠಗಳಲ್ಲಿ ವಿಶೇಷ ಪೂಜೆ ಪುರಸ್ಕಾರ, ಹೋಮ ಹವನಾದಿಗಳು ಜರುಗುತ್ತವೆ. ಒಟ್ಟಿನಲ್ಲಿ ಗುರು ಮಹಿಮೆ ಹೊಗಳುವುದೆಂದರೆ ಸೂರ್ಯನಿಗೆ ದೀಪ ಹಿಡಿದಂತೆಯೇ ಸರಿ. ನಮಗೆ ಜ್ಞಾನ ನೀಡಿ ನಮ್ಮ ಜೀವನ ಬೆಳಗಿಸಿದ ಗುರುಗಳನ್ನು ಸ್ಮರಿಸಿಕೊಂಡು ಧನ್ಯತೆ ಅರ್ಪಿಸುವುದು ಸತ್ಸಂಪ್ರದಾಯವೇ ಸರಿ.

– ಎಸ್.ಎಲ್.ವರಲಕ್ಷ್ಮೀ ಮಂಜುನಾಥ್, ನಂಜನಗೂಡು

ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ

ಮೈಸೂರು, ಜು.10(ಆರ್‌ಕೆಬಿ)– ಮೈಸೂರಿನ ಕೈಲಾಸಪುರಂ 3ನೇ ಮೇನ್, 6ನೇ ಕ್ರಾಸ್‌ನಲ್ಲಿ ಹಾಗೂ ಸಯ್ಯಾಜಿರಾವ್ ರಸ್ತೆ ಪಂಚಮುಖಿ ಗಣಪತಿ ದೇವಸ್ಥಾನದ ಬಳಿ ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರು ಮಹಾತ್ಮ ಗಾಂಧಿ ನಗರವಿಕಾಸ ಯೋಜನೆಯ ಒಟ್ಟು 2 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ ಹಾಗೂ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಗಳಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿದರು.



24ನೇ ವಾರ್ಡ್ ಪಾಲಿಕೆ ಸದಸ್ಯ ರಮೇಶ್ ರಮಣಿ, 25ನೇ ವಾರ್ಡ್ ಪಾಲಿಕೆ ಸದಸ್ಯ ರಂಗಸ್ವಾಮಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ನಾಗೇಂದ್ರ, ಮಂಡಿ ಮೊಹಲ್ಲಾದ ಅಭಿವೃದ್ಧಿಗಾಗಿ ನಾನು ಈವರೆಗೆ 6.5 ಕೋಟಿ ನೀಡಿದ್ದೇನೆ. ಮಂಡಿ ಮೊಹಲ್ಲಾ ಸರ್ವ ಜನಾಂಗದ ಶಾಂತಿಯ ತೋಟ, ಹಿಂದೂ–ಮುಸ್ಲಿಂ ಭಾವೈಕ್ಯತೆಯ ಕೇಂದ್ರವಾಗಿದೆ. ಒಕ್ಕಲಿಗ, ದೇವಾಂಗ, ಮರಾಠ, ಮಾರ್ವಾಡಿಗಳು. ಶಿಯಾ ಸುನ್ನಿ ಮಹಮದಿಯರು ಹೀಗೆ ಹತ್ತು ಹಲವು ಜಾತಿ ಸಮುದಾಯಗಳು ಸೌಹಾರ್ದಯುತವಾಗಿ ನೆಲೆಸಿರುವ ಪ್ರದೇಶವಾಗಿದೆ. ಹೀಗಾಗಿ ಈ ಪ್ರದೇಶದ ಅಭಿವೃದ್ಧಿಗೆ ಇನ್ನು ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ದಾಸಪ್ರಕಾಶ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ರವಿ ರಾಜಕೀಯ, ಉಪಾಧ್ಯಕ್ಷ ಕುಮಾರಗೌಡ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಅರ್ಜುನ್, ವಾರ್ಡ್ ಅಧ್ಯಕ್ಷ ವಿನಯ್ ಕುಮಾರ್, ಜೀವಧಾರ ಟ್ರಸ್ಟ್ ನಿರ್ದೇಶಕ ಗಿರೀಶ್, ಕೇಬಲ್ ವಿಜಯ್ (ಕೇಬಲ್), ರಾಜು, ಸ್ವಾಮಿ, ಮನ್ ಕಿ ಬಾತ್ ಸಂತೋಷ್, ಸುರೇಂದ್ರ, ಧರ್ಮರಾಜು, ಜನಾರ್ಧನ್ ರಾವ್, ಹರೀಶ್, ಮಹೇಶ್, ರವಿ, ರವಿಚಂದ್ರ ವೈರಪ್ಪ, ಲಿಂಗರಾಜು, ರವಿ ಕೆಂಪಣ್ಣ, ನಂದೀಶ್, ವಿಠಲ್, ಶ್ರೀನಿವಾಸ್, ಗಣೇಶ, ಶಾಂತಿ, ಒಬಿಸಿ ಉಪಾಧ್ಯಕ್ಷ ಸೂರಜ್, ಸದಾಶಿವ, ಆರ್.ಎಂ.ಪಿ ಸತೀಶ್, ಬಾಲಾಜಿ, ದೀಪು, ಕೇಶವ, ಸೂರಿ, ಕಿರಣ್, ಮಹಾನಗರಪಾಲಿಕೆಯ ಕಾರ್ಯಪಾಲಕ ಇಂಜಿನಿಯರ್ ರಂಜಿತ್‌ಕುಮಾರ್, ಅಭಿವೃದ್ಧಿ ಅಧಿಕಾರಿ ಮಂಜುನಾಥ್, ಅಭಿಯಂತರರಾದ ಮೋಹನ್, ಕೃಷ್ಣಮೂರ್ತಿ, ಮುಂತಾದವರು ಉಪಸ್ಥಿತರಿದ್ದರು.

ಇಂಗ್ಲೆಂಡ್ ವಿರುದ್ಧ ಭಾರತಕ್ಕೆ ಸೋಲು

2–1ರಿಂದ ಭಾರತಕ್ಕೆ ಸರಣಿ ಜಯ



ಟ್ರೆಂಟ್ ಬ್ರಿಡ್ಜ್, ಜು.10– ಸೂರ್ಯ ಕುಮಾರ್ ಯಾದವ್ ಅವರ ಭರ್ಜರಿ ಶತಕದ ನಡುವೆಯೂ ಭಾರತ ಇಂಗ್ಲೆಂಡ್ ವಿರುದ್ಧದ ಅಂತಿಮ ಟಿ20 ಪಂದ್ಯದಲ್ಲಿ 17 ರನ್‌ಗಳ ಸೋಲು ಅನುಭವಿಸಿದೆ. ಆದರೆ 3 ಪಂದ್ಯಗಳ ಟಿ20 ಸರಣಿಯನ್ನು 2–1 ರಿಂದ ವಶಪಡಿಸಿಕೊಂಡಿದೆ.

ಇಲ್ಲಿನ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿತು. ತಂಡದ ಪರ ಜೇಸನ್ ರಾಯ್ 27, ಜೋಸ್ ಬಟ್ಲರ್ 18, ಡೇವಿಡ್ ಮಲಾನ್ 77, ಲಿಯಾಮ್ ಲಿವಿಂಗ್‌ಸ್ಟೋನ್ 42, ಹ್ಯಾರಿ ಬ್ರೂಕ್ 19, ಕ್ರಿಸ್ ಜೋರ್ಡಾನ್ 11 ರನ್ ಗಳಿಸಿದರು. ಭಾರತದ ಪರ ರವಿ ಬಿಷ್ಣೋಯಿ, ಹರ್ಷಲ್ ಪಟೇಲ್ ತಲಾ 2, ಆವೇಶ್ ಖಾನ್, ಉಮ್ರಾನ್ ಮಲ್ಲಿಕ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

216 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 198 ರನ್ ಗಳಿಸಲಷ್ಟೇ ಶಕ್ತವಾಗಿಯಿತು. ತಂಡದ ಪರ ಅಬ್ಬರಿಸಿದ ಸೂರ್ಯ ಕುಮಾರ್ ಯಾದವ್ 55 ಎಸೆತಗಳಲ್ಲಿ 14 ಬೌಂಡರಿ, 6 ಸಿಕ್ಸರ್ ಒಳಗೊಂಡ 117 ರನ್ ಸಿಡಿಸಿದರು. ಉಳಿದಂತೆ ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ತಲಾ 11, ಶ್ರೇಯಸ್ ಅಯ್ಯರ್ 28 ರನ್ ಗಳಿಸಿದರು. ಇಂಗ್ಲೆಂಡ್ ಪರ ಬೌಲಿಂಗ್‌ನಲ್ಲಿ ರೀಸ್ ಟೋಪ್ಲಿ 3, ಡೇವಿಡ್ ವಿಲ್ಲಿ, ಕ್ರಿಸ್ ಜೋರ್ಡನ್ ತಲಾ 2, ರೀಚರ್ಡ್ ಗ್ಲಿಸನ್, ಮೊಯಿನ್ ಅಲಿ ತಲಾ ಒಂದೊಂದು ವಿಕೆಟ್ ಕಬಳಿಸಿದರು. ರೀಸ್ ಟೋಪ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿ, ಭುವನೇಶ್ವರ್ ಕುಮಾರ್ ಸರಣಿ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬ್ರಿಟನ್ ಪ್ರಧಾನಿ ಹುದ್ದೆ: ಮುನ್ನಡೆ ಕಾಯ್ದುಕೊಂಡ ರಿಷಿ ಸುನಕ್

ಲಂಡನ್: ಬ್ರಿಟನ್ ಪ್ರಧಾನಿ ಸ್ಪರ್ಧೆಯಲ್ಲಿ ಭಾನುವಾರ ಒಂಬತ್ತು ಅಭ್ಯರ್ಥಿಗಳ ಹೆಸರು ಕೇಳಿಬಂದಿದ್ದು, ಮಾಜಿ ಸಚಿವ ರಿಷಿ ಸುನಕ್ ಅವರು ಕನ್ಸರ್ವೇಟಿವ್ ಪಕ್ಷದ ನಾಯಕ ಸ್ಥಾನದ ಜೊತೆಗೆ ಪ್ರಧಾನಿ ಹುದ್ದೆಯ ಆಕಾಂಕ್ಷಿಗಳ ಪಟ್ಟಿಯಲ್ಲೂ ಮುನ್ನಡೆ ಕಾಯ್ದುಕೊಂಡಿದ್ದಾರೆ.



ಪ್ರಧಾನಿ ಸ್ಥಾನಕ್ಕೆ ಈ ಹಿಂದೆ ಕೇಳಿಬಂದಿದ್ದ ಪ್ರಮುಖ ಅಭ್ಯರ್ಥಿಗಳ ಪಟ್ಟಿಗೆ ಭಾನುವಾರ ವಾಣಿಜ್ಯ ಸಚಿವ ಪೆನ್ನಿ ಮೊರ್ಡಾಂಟ್ ಅವರ ಹೆಸರು ಸೇರ್ಪಡೆಗೊಂಡಿದೆ. ರಿಷಿ ಅವರ ಬಳಿಕ ಪ್ರಧಾನಿ ಸ್ಥಾನಕ್ಕೆ ಪೆನ್ನಿ ಅವರು ಎರಡನೇ ಸಂಭಾವ್ಯ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದಾರೆ.

ಬ್ರಿಟನ್‌ನ ಸಾರಿಗೆ ಕಾರ್ಯದರ್ಶಿ ಗ್ರಾಂಟ್ ಶಾಪ್ಸ್, ಮಾಜಿ ವಿದೇಶಾಂಗ ಕಾರ್ಯದರ್ಶಿ ಜೆರೆಮಿ ಹಂಟ್ ಮತ್ತು ಪಾಕಿಸ್ತಾನಿ ಮೂಲದ ಮಾಜಿ ಆರೋಗ್ಯ ಕಾರ್ಯದರ್ಶಿ ಸಾಜಿದ್ ಜಾವಿದ್ ಅವರ ಉಮೇದುವಾರಿಕೆಯ ಬಳಿಕ ಪೆನ್ನಿ ಅವರು 'ಪಿಎಂ4ಪಿಎಂ' ಎನ್ನುವ ಹ್ಯಾಷ್‌ಟ್ಯಾಗ್‌ವುಳ್ಳ ವಿಡಿಯೊ ಹಂಚಿಕೊಂಡು ತಮ್ಮ ಉಮೇದುವಾರಿಕೆ ಘೋಷಿಸಿದ್ದಾರೆ. "ನಾನು ಪ್ರಧಾನಿಯಾದರೆ, ಮಹಿಳೆಯರ ಹಕ್ಕುಗಳ ರಕ್ಷಿಸುತ್ತೇನೆ. ಆಕ್ರಮಣ ಮತ್ತು ನಿಂದನೆರಹಿತ ಪರಿಸರದಲ್ಲಿ ಪುರುಷರು ಅನುಭವಿಸುತ್ತಿರುವ ಸಂತಸದ ವಾತಾವರಣವನ್ನು ಹೆಣ್ಣುಮಕ್ಕಳಿಗೂ ಕಲ್ಪಿಸುತ್ತೇನೆ" ಎಂದು ಪೆನ್ನಿ ಭಾನುವಾರ ಹಂಚಿಕೊಂಡಿರುವ ವಿಡಿಯೊದಲ್ಲಿ ಭರವಸೆ ನೀಡಿದ್ದಾರೆ.

ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಶೀಘ್ರದಲ್ಲೇ ತನ್ನ ಉಮೇದುವಾರಿಕೆಯನ್ನು ಘೋಷಿಸುವ ನಿರೀಕ್ಷೆಯಿದೆ. ಪ್ರಧಾನಿ ಸ್ಥಾನದ ಇತರ ಆಕಾಂಕ್ಷಿಗಳಲ್ಲಿ ಗೋವಾ ಮೂಲದ ಅಟಾರ್ನಿ ಜನರಲ್ ಸುಯೆಲ್ಲಾ ಬ್ರೆವರ್‌ಮನ್, ಇರಾಕ್ ಮೂಲದ ನಾಧಿಮ್ ಜಹಾವಿ, ನೈಜೀರಿಯಾ ಮೂಲದ ಕೆಮಿ ಬೆಡಾನೋಚ್ ಮತ್ತು ಟಾಮ್ ತುಗೆಂಧತ್ ಸೇರಿದ್ದಾರೆ.

ನಾಪತ್ತೆಯಾಗಿದ್ದ ಶ್ರೀಲಂಕಾ ಅಧ್ಯಕ್ಷ ರಾಜಪಕ್ಸೆಯಿಂದ ಅಡುಗೆ ಅನಿಲ ವಿತರಣೆಗೆ ಆದೇಶ

ಕೊಲಂಬೊ: ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸಲು ಮತ್ತು ಜನರ ಮೂಲಭೂತ ಅಗತ್ಯಗಳನ್ನು ಪೂರೈಸಲು ವಿಫಲವಾದ ಶ್ರೀಲಂಕಾ ಸರ್ಕಾರದ ವಿರುದ್ಧ ಆಕ್ರೋಶಗೊಂಡ ಜನ ತಮ್ಮ ಕಚೇರಿ ಮತ್ತು ಅಧಿಕೃತ ನಿವಾಸ ಎರಡನ್ನೂ ಆಕ್ರಮಿಸಿಕೊಂಡ ನಂತರ ನಾಪತ್ತೆಯಾಗಿದ್ದ ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸೆ ಅವರು ಅಡುಗೆ ಅನಿಲ ವಿತರಣೆಗೆ ಆದೇಶ ನೀಡಿದ್ದಾರೆ. ಅದಾಗ್ಯೂ ಅಧ್ಯಕ್ಷರು ಎಲ್ಲಿದ್ದಾರೆ ಎಂದು ತಿಳಿದು ಬಂದಿಲ್ಲ. ಹಸಿವಿನಿಂದ ಬಳಲುತ್ತಿರುವ ದೇಶಕ್ಕೆ 3,700 ಮೆಟ್ರಿಕ್ ಟನ್ ಎಲ್‌ಪಿ ಗ್ಯಾಸ್ ದೊರೆತ ನಂತರ ಅಡುಗೆ ಅನಿಲವನ್ನು ಸುಗಮವಾಗಿ ವಿತರಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದಾರೆ ಎಂದು ಅವರ ಕಚೇರಿ ಭಾನುವಾರ ತಿಳಿಸಿದೆ.

ಇಂದು ಮಧ್ಯಾಹ್ನ ಮೊದಲ ಹಡಗು ಕೆರವಲಪಿಟಿಯಕ್ಕೆ ಆಗಮಿಸುತ್ತಿದ್ದಂತೆ ಅನಿಲ ಇಳಿಸುವಿಕೆ ಮತ್ತು ವಿತರಣೆ ಕೈಗೊಳ್ಳುವಂತೆ ಅಧ್ಯಕ್ಷ ರಾಜಪಕ್ಸೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಅವರ ಕಚೇರಿ ತಿಳಿಸಿದೆ. 3,740 ಮೆಟ್ರಿಕ್ ಟನ್ ಅನಿಲವನ್ನು ಸಾಗಿಸುವ ಎರಡನೇ ಹಡಗು ಜುಲೈ 11 ರಂದು ಬರಲಿದೆ ಮತ್ತು 3,200 ಮೆಟ್ರಿಕ್ ಟನ್ ಅನಿಲ ಹೊತ್ತ ಮೂರನೇ ಹಡಗು ಜುಲೈ 15 ರಂದು ತಲುಪಲಿದೆ ಎಂದು ಶ್ರೀಲಂಕಾ ಮಾಧ್ಯಮಗಳು ವರದಿ ಮಾಡಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಾನು ಜಯಲಲಿತಾ ವಾರಸುದಾರ, ಅವರ ಆಸ್ತಿಯಲ್ಲಿ ನನಗೂ ಪಾಲಿದೆ

ಮೈಸೂರಿನ ವಾಸುದೇವನ್ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ

ಚೆನ್ನೈ, ಜು.10– ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದ ಜಯಲಲಿತಾ ಅವರು




ಮೃತಪಟ್ಟು ಐದೂವರೆ ವರ್ಷಗಳು ಗತಿಸಿವೆ. ಅವರ ಸಾವಿರಾರು ಕೋಟಿ ರೂಪಾಯಿ ಆಸ್ತಿಗಳ ವಿಲೇವಾರಿಗೆ ಸಂಬಂಧಿಸಿದಂತೆ ಇನ್ನೂ ಚರ್ಚೆಗಳು ನಡೆಯುತ್ತಿರುವಾಗಲೇ ಮತ್ತೋರ್ವ ವ್ಯಕ್ತಿ ತಾವು ಅವರ ಸಹೋದರ ಎಂದು ಹೇಳಿಕೊಂಡು ಮದ್ರಾಸ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಈ ಮೊದಲು ಜೆ. ದೀಪಕ್ ಮತ್ತು ಜೆ. ದೀಪಾ ಎಂಬುವವರು ತಾವು ಜಯಲಲಿತಾ ಅವರ ವಾರಸುದಾರರು ಎಂದು ಹೇಳಿಕೊಂಡು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಇದಾದ ಬಳಿಕ ಕರ್ನಾಟಕದ ಅಮೃತಾ ಅವರು ನಟ ಶೋಬನ್‌ಬಾಬು ಮತ್ತು ಜಯಲಲಿತಾ ಅವರ ಪುತ್ರಿ ಎಂದು ಹೇಳಿಕೊಂಡು ಮೊಕದ್ದಮೆ ಹೂಡಿದ್ದರು. ಆದರೆ ಜೆ. ದೀಪಕ್ ಮತ್ತು ಜೆ. ದೀಪಾ ಅವರು ವಾರಸುದಾರರು ಎಂದು ಕೋರ್ಟ್ ಹೇಳಿತ್ತು. ಅಮೃತಾ ಅವರ ಅರ್ಜಿಯನ್ನು ವಜಾ ಮಾಡಲಾಗಿತ್ತು. ಇದೀಗ ಮೈಸೂರಿನ ವ್ಯಾಸಪುರಂನ ವಾಸುದೇವನ್ ಎಂಬ 83 ವರ್ಷದ ವ್ಯಕ್ತಿಯೊಬ್ಬರು ತಾವು ಜಯಲಲಿತಾ ಅವರ ಸಹೋದರ ಎಂದು ಹೇಳಿಕೊಂಡು ಅರ್ಜಿ ಸಲ್ಲಿಸಿದ್ದಾರೆ. ಜಯಲಲಿತಾ ಅವರ ತಂದೆ ಆರ್.ಜಯರಾಮ್ ಅವರ ಮೊದಲ ಪತ್ನಿ ಜೆ.ಜಯಮ್ಮ ಅವರಿಗೆ ನಾನು ಒಬ್ಬನೇ ಮಗ ಮತ್ತು ನಾನು ಅವರ ಏಕೈಕ ವಾರಸುದಾರ ಎಂದು ಅವರು ಹೇಳಿದ್ದಾರೆ.

ನನ್ನ ತಾಯಿ ಜಯಮ್ಮ ಅವರನ್ನು ಜಯಲಲಿತಾ ತಂದೆ ಜಯರಾಮ್ ಅವರು ಮೊದಲೇ ಮದುವೆಯಾಗಿದ್ದರು. ನಂತರ ಅವರ ಪತ್ನಿಯಾಗಿ ಬಂದದ್ದು ಜಯಲಲಿತಾ ತಾಯಿ ವೇದವಲ್ಲಿ ಅಲಿಯಾಸ್ ವೇದಮ್ಮ. ಈ ಎರಡನೆಯ ಪತ್ನಿಗೆ ಹುಟ್ಟಿದ್ದು, ಜಯಕುಮಾರ್ ಮತ್ತು ಜಯಲಲಿತಾ. ಆದ್ದರಿಂದ ಜಯಲಲಿತಾ ಮತ್ತು ಜಯಕುಮಾರ್ ನನ್ನ ಸಹೋದರ ಮತ್ತು ಸಹೋದರಿಯರು ಎಂದು ವಾಸುದೇವನ್ ಹೇಳಿದ್ದಾರೆ.

1950ರಲ್ಲಿ ನನ್ನ ತಾಯಿ ಜಯಮ್ಮ ಮೈಸೂರು ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಮೊಕದ್ದಮೆ ಹೂಡಿದಾಗ ಆ ಪ್ರಕರಣದಲ್ಲಿ ನನ್ನ ತಂದೆಯ ಎರಡನೇ ಪತ್ನಿ ವೇದವಲ್ಲಿ, ಮಕ್ಕಳಾದ ಜಯಕುಮಾರ್ ಮತ್ತು ಜಯಲಲಿತಾ ಅವರನ್ನು ಪ್ರತಿವಾದಿಗಳಾಗಿ ಸೇರಿಸಲಾಗಿತ್ತು. ಇದೇ ನಾನು ಅವರ ಸಹೋದರ ಎನ್ನುವುದಕ್ಕೆ ಸಾಕ್ಷಿ. ಈ ಪ್ರಕರಣ ಇತ್ಯರ್ಥದಲ್ಲಿ ಅಂತ್ಯಗೊಂಡಿತು. ಜಯಕುಮಾರ್ ಅವರು ಜಯಲಲಿತಾ ಅವರಿಗಿಂತ ಮುಂಚೆಯೇ ನಿಧನರಾದರು. ಹಾಗಾಗಿ ಇಂದು ನಾನು ಸಹೋದರನಾಗಿ ಜಯಲಲಿತಾ ಅವರ ನೇರ ಉತ್ತರಾಧಿಕಾರಿ. ಹಾಗಾಗಿ ಜಯಲಲಿತಾ ಅವರ ಆಸ್ತಿಯಲ್ಲಿ ಶೇ.50ರಷ್ಟು ನನಗೆ ನೀಡಬೇಕು ಎಂದು ವಾಸುದೇವನ್ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಶ್ರೀಲಂಕಾ ಬಿಕ್ಕಟ್ಟು: ಅಧ್ಯಕ್ಷರ ಮನೆಗೆ ನುಗ್ಗಿದ ಪ್ರತಿಭಟನಾಕಾರರಿಗೆ ಕೋಟ್ಯಾಂತರ ನಗದು ಪತ್ತೆ



ಕೊಲಂಬೋ, ಜು.10– ಶ್ರೀಲಂಕಾದಲ್ಲಿ ಪಲಾಯನ ಮಾಡಿರುವ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಅಧಿಕೃತ ನಿವಾಸದಲ್ಲಿ ಕೋಟ್ಯಾಂತರ ರೂಪಾಯಿ ನಗದು ಹಣ ಸಿಕ್ಕಿರುವುದಾಗಿ ಸರ್ಕಾರ ವಿರೋಧಿ ಪ್ರತಿಭಟನಾಕಾರರು ತಿಳಿಸಿದ್ದಾರೆ.

ಈ ಕುರಿತ ವಿಡಿಯೋ ಕೂಡ ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದು, ಇಡೀ ದೇಶ ಆರ್ಥಿಕ ಸಂಕಷ್ಟದಿಂದ ಬಳಲುತ್ತಿದ್ದರೆ ಲಂಕಾ ಅಧ್ಯಕ್ಷರು ಮಾತ್ರ ಕೋಟ್ಯಾಂತರ ಹಣವನ್ನು ಬಂಗಲೆಯಲ್ಲಿ ಹುದುಗಿಸಿಟ್ಟಿದ್ದರೇ ಎಂಬ ಪ್ರಶ್ನೆ ಕೂಡ ಮೂಡುತ್ತಿದೆ. ಇದಕ್ಕೆ ಇಂಬು ನೀಡುವಂತೆ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ಅಧಿಕೃತ ನಿವಾಸದ ಮೇಲೆ ದಾಳಿ ನಡೆಸಿದ್ದ ಪ್ರತಿಭಟನಾಕಾರರು ಬಂಗಲೆಯಲ್ಲಿ ಕೋಟ್ಯಾಂತರ ಹಣ ದೊರೆತಿದೆ ಎಂದು ಪ್ರತಿಭಟನಾಕಾರರು ಹೇಳಿಕೊಂಡಿದ್ದಾರೆ.

ಗೊಟಬಯ ಅವರ ಐಷಾರಾಮಿ ನಿವಾಸದ ಸುತ್ತಲೂ ಅಳವಡಿಸಿದ್ದ ಬ್ಯಾರಿಕೇಡ್‌ಗಳನ್ನು ಕಿತ್ತು ಒಳಗೆ ನುಗ್ಗಿದ್ದ ಪ್ರತಿಭಟನಾಕಾರರು, ಅಲ್ಲಿ ಮೋಜು ಮಸ್ತಿ ಮಾಡಿದ್ದರು. ಶನಿವಾರ ರಾತ್ರಿಯನ್ನು ಅನೇಕರು ಅಲ್ಲಿಯೇ ಕಳೆದಿದ್ದರು. ಈಜುಕೊಳದಲ್ಲಿ ಈಜಾಡಿ ಮಜಾ ಮಾಡಿದ್ದರು. ಇನ್ನು ಅನೇಕರು ಅಡುಗೆ ಮನೆಗೆ ನುಗ್ಗಿ ಅಲ್ಲಿ ಅಡುಗೆ ಮಾಡಿ ತಿಂದಿದ್ದರು. ಇನ್ನು ಕೆಲವರು ನಿವಾಸದಲ್ಲಿ ಗುಪ್ತವಾಗಿ ಇರಿಸಿದ್ದ ದೊಡ್ಡ ದೊಡ್ಡ ನೋಟಿನ ಕಂತೆಗಳನ್ನು ಹುಡುಕಿ ಹೊರತೆಗೆದಿದ್ದಾರೆ. ಪ್ರತಿಭಟನಾಕಾರರು ಅದನ್ನು ಎಣಿಸುವುದು ವಿಡಿಯೋಗಳಲ್ಲಿ ದಾಖಲಾಗಿದೆ. ಆದರೆ, ಹೀಗೆ ದೊರೆತ ಹಣವನ್ನು ತಾವೇ ಕೊಂಡೊಯ್ಯುವುದಿಲ್ಲ. ಬದಲಾಗಿ ಭದ್ರತಾ ಘಟಕಗಳಿಗೆ ಒಪ್ಪಿಸಿರುವುದಾಗಿ ಪ್ರತಿಭಟನಾಕಾರರು ತಿಳಿಸಿದ್ದಾರೆ.

ಇದರ ಸತ್ಯಾಸತ್ಯತೆಗಳನ್ನು ಪರಿಶೀಲನೆ ಮಾಡಿದ ಬಳಿಕ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ಆದರೆ ಆಕ್ರೋಶಿತ ಜನರು ಗೊಟಬಯ ನಿವಾಸದಿಂದ ಅನೇಕ ವಸ್ತುಗಳನ್ನು ಹೊತ್ತುಕೊಂಡು ಹೋಗಿದ್ದಾರೆ. ಭಾನುವಾರ ಬೆಳಿಗ್ಗೆ ಎದ್ದು ಅಲ್ಲಿಯೇ ಜಿಮ್ ಮಾಡಿದ್ದಾರೆ. ಬಂಗಲೆಯ ಐಷಾರಾಮು ಕಂಡು ದಂಗಾಗಿದ್ದಾರೆ. "ಅವರು ಮಜಾ ಮಾಡುತ್ತಿದ್ದರೆ, ನಾವು ಸಂಕಷ್ಟ ಅನುಭವಿಸುತ್ತಿದ್ದೇವೆ" ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೇನಾ ಮುಖ್ಯಸ್ಥರ ಮನವಿ: ಇತ್ತ ಆರ್ಥಿಕ ಬಿಕ್ಕಟ್ಟು ಮತ್ತು ರಾಜಕೀಯ ಅರಾಜಕತೆ ಮಧ್ಯೆ ಅತಂತ್ರವಾಗಿರುವ ಶ್ರೀಲಂಕಾದಲ್ಲಿ ಸಹಜ ಸ್ಥಿತಿ ಮೂಡಲು ವರ್ಷಗಳೇ ಬೇಕಾಗಬಹುದು. ದೇಶದಲ್ಲಿ ಶಾಂತಿ ನೆಲೆಸಲು ಬೆಂಬಲ ನೀಡುವಂತೆ ಜನತೆಗೆ ಶ್ರೀಲಂಕಾ ಸೇನಾ ಮುಖ್ಯಸ್ಥ ಜನರಲ್ ಶವೇಂದ್ರ ಸಿಲ್ವ ಭಾನುವಾರ ಮನವಿ ಮಾಡಿದ್ದಾರೆ. ಈ ಮಧ್ಯೆ, ಆರ್ಥಿಕ ದಿವಾಳಿಯಾಗಿರುವ ಶ್ರೀಲಂಕಾದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವುದಾಗಿ ಅಂತಾರಾಷ್ಟ್ರೀಯ ಹಣಕಾಸು ನಿಧಿ ಹೇಳಿದೆ. ರಾಜಕೀಯ ಅರಾಜಕತೆ ಶೀಘ್ರದಲ್ಲಿಯೇ ಪರಿಹಾರ ಕಾಣಲಿದ್ದು, ಇದು ಐಎಂಎಫ್ ಬೆಂಬಲಿತ ಯೋಜನೆ ಕುರಿತಾದ ಮಾತುಕತೆಯ ಪುನರಾರಂಭಕ್ಕೆ ಅನುವು ಮಾಡಿಕೊಡಲಿದೆ ಎಂದು ಆಶಿಸಿದೆ.

ಜು.20ರಿಂದ ಆರೋಗ್ಯ ವರ್ಧನಾ ಶಿಬಿರ

ಮೈಸೂರು, ಜು. 10– ಮೈಸೂರಿನ ವಿನೂತನ ಸಂಸ್ಥೆ ವತಿಯಿಂದ ಜು.20 ರಿಂದ ಫ್ರೀಡಮ್ ಪಾರ್ಕ್‌ನಲ್ಲಿ ಒಂದು ವಾರಗಳ ಆರೋಗ್ಯ ವರ್ಧನಾ ಶಿಬಿರ ಆಯೋಜಿಸಿದೆ. ಶಿಬಿರದಲ್ಲಿ ಸದೃಢ ಶರೀರ, ಉತ್ತಮ ಆರೋಗ್ಯಕ್ಕೆ ಪೂರಕವಾದ ಜಾಗಿಂಗ್, ನಡಿಗೆ, ವಿಧಾನ, ಯೋಗ ಶೈಲಿಯ ಕ್ರಿಯಾಶೀಲ ವ್ಯಾಯಾಮ, ಪ್ರಾಣಾಯಾಮ, ಧ್ಯಾನ, ಓಂಕಾರಗಳ ಜೊತೆಗೆ ಜೀವನ ಶೈಲಿ ಮತ್ತು ಆಹಾರ ಪದ್ಧತಿ ಬಗ್ಗೆ ಉಪಯುಕ್ತ ಸಲಹೆಗಳನ್ನು ನೀಡಲಾಗುವುದು. ತರಬೇತುದಾರ ರಾಮಕೃಷ್ಣಾರ್ಪಣಾನಂದ ಅವರು ಉಪಯುಕ್ತ ಸಲಹೆಗಳೊಂದಿಗೆ ತರಬೇತಿ ನೀಡಲಿದ್ದಾರೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9342241291 ಸಂಪರ್ಕಿಸಬಹುದು.

ಪ್ರವೇಶ ಅರ್ಜಿ ಅವಧಿ ವಿಸ್ತರಣೆ

ಮೈಸೂರು, ಜು.10– ನಂಜನಗೂಡು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ 2022–23ನೇ ಸಾಲಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು ಜುಲೈ 15ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 080–8050370006 ಸಂಪರ್ಕಿಸಬಹುದು.

ಹೆಣ್ಣು ಮಕ್ಕಳ ಅಂತರ ಪ್ರೌಢಶಾಲಾ ಪ್ರಬಂಧ ಸ್ಪರ್ಧೆ

ಮೈಸೂರು, ಜು. 10 – ಸಂಸ್ಥಾಪಕರ ದಿನಾಚರಣೆ ಅಂಗವಾಗಿ ಶ್ರೀಕಾಂತ ಬಾಲಿಕಾ ಪ್ರೌಢಶಾಲೆಯಲ್ಲಿ ಪ್ರೌಢಶಾಲಾ ಹೆಣ್ಣು ಮಕ್ಕಳಿಗೆ ಅಂತರ ಪ್ರೌಢಶಾಲಾ ಪ್ರಬಂಧ ಸ್ಪರ್ಧೆಯನ್ನು ಜು. 26 ರಂದು ಬೆಳಗ್ಗೆ 10.30 ರಿಂದ 11.30 ರವರೆಗೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿನಿಯರ ಹೆಸರನ್ನು ಜು. 25ರಂದು ಸಂಜೆ 4 ಗಂಟೆಯೊಳಗೆ ಶಾಲಾ ಕಚೇರಿಯಲ್ಲಿ ನೋಂದಾಯಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–2523437, 9986051536 ಸಂಪರ್ಕಿಸಬಹುದು.

ವಿನಾಯಕ್ ನಿಧನ



ಮೈಸೂರು, ಜು.10– ಮೈಸೂರಿನ ಶ್ರೀರಾಂಪುರ 2ನೇ ಹಂತದ ಬಿಇಎಂಎಲ್ ಲೇಔಟ್ ನಿವಾಸಿ, ಪ್ರಜ್ವಲ್ ಅಸೋಸಿಯೇಟ್ಸ್ ಉದ್ಯೋಗಿ ವಿನಾಯಕ್ (ವಿನಯ್–50) ಇಂದು ನಿಧನರಾದರು. ಅಂತ್ಯಕ್ರಿಯೆ ನಾಳೆ (ಸೋಮವಾರ) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 11 ಜುಲೈ 2022

ಮಹಾರಾಣಿ ಪಿಯು ಕಾಲೇಜಿಗೆ ಉಪನ್ಯಾಸಕರ ನಿಯೋಜನೆ: ಶಾಸಕ ಎಲ್.ನಾಗೇಂದ್ರ ಸ್ವಾಗತ

ಮೈಸೂರು, ಜು.10(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಪದವಿಪೂರ್ವ ಕಾಲೇಜಿನ ವಿಜ್ಞಾನ ವಿಭಾಗಕ್ಕೆ ಅಗತ್ಯವಿದ್ದ ಉಪನ್ಯಾಸಕರನ್ನು ಕಡ್ಡಾಯ ವರ್ಗಾವಣೆ ಮೂಲಕ



ನಿಯೋಜಿಸಿರುವ ಪದವಿ ಪೂರ್ವ ಶಿಕ್ಷಣ ಇಲಾಖೆ ಕ್ರಮವನ್ನು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸ್ವಾಗತಿಸಿದ್ದಾರೆ.

ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಪ್ರಸ್ತುತ 820 ವಿದ್ಯಾರ್ಥಿನಿಯರಿದ್ದು, ನಾಲ್ವರು ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದರು. ವಿಜ್ಞಾನ ವಿಭಾಗದಲ್ಲಿ 160 ವಿದ್ಯಾರ್ಥಿಗಳಿಗೆ ಒಬ್ಬರಂತೆ ಉಪನ್ಯಾಸಕರನ್ನು ನಿಯೋಜಿಸಬೇಕೆಂಬ ನಿಯಮಾನುಸಾರ ಇನ್ನೂ ಒಬ್ಬರು ಉಪನ್ಯಾಸಕರ ಅಗತ್ಯವಿದೆ ಎನ್ನುವುದನ್ನು ಶಾಸಕ ಎಲ್.ನಾಗೇಂದ್ರ, ಪದವಿ ಪೂರ್ವ ಶಿಕ್ಷಣ ಇಲಾಖೆ ಗಮನಕ್ಕೆ ತಂದು ಕ್ರಮಕ್ಕೆ ಆಗ್ರಹಿಸಿದ್ದರು.

ಈ ನಿಟ್ಟಿನಲ್ಲಿ ಕೌನ್ಸಿಲಿಂಗ್ ಮೂಲಕ ಇತ್ತೀಚೆಗೆ ನಡೆದ ಕಡ್ಡಾಯ ವರ್ಗಾವಣೆಯಲ್ಲಿ ಹುಬ್ಬಳಿಯಿಂದ ಒಬ್ಬರು ಉಪನ್ಯಾಸಕರನ್ನು ಮಹಾರಾಣಿ ಕಾಲೇಜಿಗೆ ನಿಯೋಜಿಸಿದ್ದು, ಇದರಿಂದ ಉಪನ್ಯಾಸಕರ ಅಧಿಕ ಕಾರ್ಯಭಾರ ಕಡಿಮೆಯಾಗುವುದರ ಜೊತೆಗೆ ವಿದ್ಯಾರ್ಥಿನಿಯರ ಶೈಕ್ಷಣಿಕ ದೃಷ್ಟಿಯಿಂದಲೂ ತುಂಬಾ ಅನುಕೂಲವಾಗಿದೆ ಎಂದು ಶಾಸಕ ಎಲ್.ನಾಗೇಂದ್ರ, ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಇನ್ನೂ ಉಪನ್ಯಾಸಕರು ಬೇಕು: ಮಹಾರಾಣಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು 2,250 ವಿದ್ಯಾರ್ಥಿನಿಯರು ದಾಖಲಾಗಿದ್ದು, ಇನ್ನೂ 4 ವಿಭಾಗಗಳಲ್ಲಿ ಉಪನ್ಯಾಸಕರ ಕೊರತೆಯಿದೆ. ವಾಣಿಜ್ಯ ಹಾಗೂ ಅರ್ಥಶಾಸ್ತ್ರ ವಿಭಾಗಗಳಿಗೆ ತಲಾ ಐವರು ಉಪನ್ಯಾಸಕರ ಅಗತ್ಯವಿದ್ದು, ಸದ್ಯ ತಲಾ ಮೂವರು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗೆಯೇ ಕನ್ನಡ ಮತ್ತು ಇಂಗ್ಲಿಷ್ ಬೋಧನೆಗೆ ತಲಾ 6 ಉಪನ್ಯಾಸಕರು ಬೇಕಿದ್ದು, ಪ್ರಸ್ತುತ ತಲಾ ನಾಲ್ವರು ಮಾತ್ರ ಇದ್ದಾರೆ. ವಿಜ್ಞಾನ ವಿಭಾಗಕ್ಕೆ ನಿಯೋಜನೆಗೊಳಿಸಿದ ಮಾದರಿಯಲ್ಲಿ ಶೂನ್ಯ ದಾಖಲಾತಿಯಿರುವ ಕಾಲೇಜು ಅಥವಾ ಯಾವುದೇ ಕಾಳೇಜಿನ ಹೆಚ್ಚುವರಿ ಉಪನ್ಯಾಸಕರನ್ನು ಮಹಾರಾಣಿ ಕಾಲೇಜಿಗೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕೆಂದು ಶಾಸಕರು ಮನವಿ ಮಾಡಿದ್ದಾರೆ.

ಆಷಾಢ ಪ್ರಥಮ ಏಕಾದಶಿ; ಶ್ರೀ ಪಾಂಡುರಂಗ ವಿಠಲ ಸ್ವಾಮಿಗೆ ವಿಶೇಷ ಅಲಂಕಾರ

ಮೈಸೂರು, ಜು.10(ಆರ್‌ಕೆಬಿ)– ಆಷಾಢದ ಪ್ರಥಮ ಏಕಾದಶಿ ಅಂಗವಾಗಿ ಮೈಸೂರಿನ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ವಿಠಲಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದವು.

ಶ್ರೀ ಕೃಷ್ಣ ರುಕ್ಮಿಣಿ ಸಮೇತ ಪಾಂಡುರಂಗ ಸ್ವಾಮಿಗೆ ವಿಶೇಷ ಬೆಣ್ಣೆ ಅಲಂಕಾರ



ಹಾಗೂ ಹೂವಿನ ಅಲಂಕಾರ ಮಾಡಲಾಗಿತ್ತು. ಬೆಳಿಗ್ಗೆ ಪಾಂಡುರಂಗ ವಿಠಲ ಸ್ವಾಮಿಗೆ ಕಾಕಡಾರತಿ ಭಜನೆ, ವಿಶೇಷ ಹಾಲಿನ ಅಭಿಷೇಕ ಫಲಪಂಚಾಮೃತ, ಅಷ್ಟೋತ್ತರ ಪೂಜೆ, ಮಹಾಪೂಜೆ, ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ ನಡೆಯಿತು.

ಭಾವಸಾರ ಕ್ಷತ್ರಿಯ ಮಂಡಳಿಯ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಂಡಳಿ ಅಧ್ಯಕ್ಷ ಆರ್.ವಿ.ಶಿವಾಜಿರಾವ್ ರಂಪೂರೆ, ಪಾಂಡುರಂಗ ಭಜನಾ ಮಂಡಳಿ ಅಧ್ಯಕ್ಷ ವೆಂಕಟೇಶ್ ರಾವ್ ಪತಂಗೆ ನೇತೃತ್ವದಲ್ಲಿ ರಾತ್ರಿ ಸಾಂಪ್ರದಾಯಿಕ ಪಂಡರಿ ಭಜನೆ ನಡೆಯಿತು. ಈ ಸಂದರ್ಭದಲ್ಲಿ ಮಂಡಳಿಯ ಗೌರವ ಕಾರ್ಯದರ್ಶಿ ಎಸ್.ರಾಕೇಶ್ ನಾಯಕ್, ಸಹ ಕಾರ್ಯದರ್ಶಿ ಎಸ್.ಶಶಿಕುಮಾರ್ ಮಹೇಂದರ್ ಕರ್, ಭಜನಾ ಮಂಡಳಿ ಅಧ್ಯಕ್ಷ ವೆಂಕಟೇಶರಾವ್ ಪತಂಗೆ ಇನ್ನಿತರರು ಉಪಸ್ಥಿತರಿದ್ದರು.

ಕೆಆರ್‌ಎಸ್, ಕಬಿನಿ ಅಣೆಕಟ್ಟು ಭರ್ತಿಗೆ ಒಂದೇ ಅಡಿ ಬಾಕಿ



ಕೆಆರ್‌ಎಸ್‌ನಿಂದ ಹೊರಬಿಡಲಾಗುತ್ತಿರುವ ನೀರಿಗೆ ಬಣ್ಣದ ಚಿತ್ತಾರ.



ಕೆಆರ್‌ಎಸ್ ಸೊಬಗನ್ನು ಕಣ್ತುಂಬಿಕೊಳ್ಳುತ್ತಿರುವ ಪ್ರವಾಸಿಗರು.

ಹಾರಂಗಿ ನೀರಿನ ಮಟ್ಟ

ಗರಿಷ್ಠ ಮಟ್ಟ	2,859 ಅಡಿ
ಭಾನುವಾರ	2,854.27 ಅಡಿ
ಒಳ ಹರಿವು	14,620 ಕ್ಯೂಸೆಕ್
ಹೊರ ಹರಿವು	24,000 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ

ಗರಿಷ್ಠ ಮಟ್ಟ	2,922 ಅಡಿ
ಭಾನುವಾರ	2,918 ಅಡಿ
ಒಳ ಹರಿವು	15,723ಕ್ಯೂಸೆಕ್
ಹೊರ ಹರಿವು	1,345 ಕ್ಯೂಸೆಕ್

ಒಂದನೇ ಪುಟದಿಂದ

ಪ್ರಮಾಣದ ನೀರು ಹೊರ ಬಿಡುತ್ತಿರುವ ಹಿನ್ನೆಲೆಯಲ್ಲಿ ನದಿ ಪಾತ್ರದ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ ಆತಂಕ ಹೆಚ್ಚಾಗಿದೆ. ಮಳೆ ಕಾವೇರಿ ಕಣಿವೆಯಲ್ಲಿ ಮುಂದುವರೆಯುವ ಮುನ್ಸೂಚನೆ ಇರುವುದರಿಂದ ಅಣೆಕಟ್ಟೆಗೆ ಒಳ ಹರಿವಿನ ಪ್ರಮಾಣ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ. ಅದರ ಜೊತೆಗೆ ಡ್ಯಾಂನಿಂದ ಬಿಡುವ ನೀರಿನ ಪ್ರಮಾಣವೂ ಹೆಚ್ಚಾಗುವುದರಿಂದ ಕಾವೇರಿ ನದಿಯಲ್ಲಿ ನೀರಿನ ಮಟ್ಟ ಉಲ್ಬಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಕಾವೇರಿ ಜಲಾನಯನ ತಗ್ಗು ಪ್ರದೇಶದಲ್ಲಿ ಪ್ರವಾಹದ ಭೀತಿ ಉಂಟಾಗುವ ಆತಂಕವಿದೆ.



ಶ್ರೀರಂಗಪಟ್ಟಣ ಸಮೀಪದ ರಂಗನತಿಟ್ಟು ಪಕ್ಷಿಧಾಮದಲ್ಲಿ ನೀರಿನಿಂದ ಆವೃತವಾಗಿರುವ ದ್ವೀಪವೊಂದರಲ್ಲಿ ವಿವಿಧ ಬಗೆಯ ಪಕ್ಷಿಗಳು ಇರುವುದನ್ನು ಕಾಣಬಹುದು. ಚಿತ್ರ: ಎಂ.ಎನ್. ಲಕ್ಷ್ಮೀನಾರಾಯಣ ಯಾದವ್

ಶ್ರೀರಂಗಪಟ್ಟಣ ತಾಲೂಕಿನ ಪ್ರವಾಸಿ ತಾಣಗಳಲ್ಲೊಂದಾಗಿರುವ ರಂಗನತಿಟ್ಟು ಪಕ್ಷಿಧಾಮಕ್ಕೆ ಪ್ರವಾಹದ ಭೀತಿ ಹೆಚ್ಚಾಗಿದೆ. ಈಗಾಗಲೇ ಮುಂಜಾಗ್ರತಾ ಕ್ರಮವಾಗಿ ದೋಣಿ ವಿಹಾರವನ್ನು ನಿರ್ಬಂಧಿಸಲಾಗಿದೆ. ಆದರೆ ಪಕ್ಷಿಧಾಮ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಆದರೂ ಪಕ್ಷಿಧಾಮದಲ್ಲಿ ಪ್ರವಾಸಿಗರ ಹಿತ ದೃಷ್ಟಿಯಿಂದ ಕೆಲವು ಕಟ್ಟುನಿಟ್ಟಿನ ನಿಯಮವನ್ನು ಜಾರಿಗೊಳಿಸಲಾಗಿದೆ. ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರಿಗೆ ಪ್ರವೇಶ ದ್ವಾರದಲ್ಲೇ ದೋಣಿ ವಿಹಾರ ಬಂದ್ ಆಗಿರುವ ಮಾಹಿತಿಯನ್ನು ನೀಡಲಾಗುತ್ತಿದೆ. ಆ ಬಳಿಕ ಸಮ್ಮತಿಸಿದ ಪ್ರವಾಸಿಗರು ಟಿಕೆಟ್ ಪಡೆದು ಪಕ್ಷಿಧಾಮವನ್ನು ಪ್ರವೇಶಿಸುತ್ತಿದ್ದಾರೆ.

ವೀಕ್ಷಣೆಗೆ ಅವಕಾಶ: ಈ ಕುರಿತು ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ಕಾವೇರಿ ನದಿಯಲ್ಲಿ ಹೊರ ಹರಿವಿನ ಪ್ರಮಾಣ ಹೆಚ್ಚಾದ ಹಿನ್ನೆಲೆಯಲ್ಲಿ ನಿನ್ನೆಯಿಂದ (ಜು.9) ಬೋಟಿಂಗ್ ದೋಣಿ ವಿಹಾರವನ್ನು ಸ್ಥಗಿತಗೊಳಿಸಲಾಗಿದೆ. ಆದರೆ ಪ್ರವಾಸಿಗರು ಪಕ್ಷಿಧಾಮವನ್ನು ವೀಕ್ಷಿಸಬಹುದು. ಹಲವು ಪರಗೋಲಗಳಿದ್ದು, ಅವುಗಳಲ್ಲಿ ವಿಶ್ರಾಂತಿ ಪಡೆಯಬಹುದು. ಇದರೊಂದಿಗೆ ಬ್ಯಾಟರಿ ಚಾಲಿತ ವಾಹನವಿದ್ದು, ಅದರ ಸವಾರಿ ಮಾಡಬಹುದಾಗಿದೆ. ಮಾಹಿತಿ ಕೇಂದ್ರದಲ್ಲೂ ಉತ್ತಮವಾದ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಮುಂಜಾಗ್ರತಾ ಕ್ರಮವಾಗಿ ದೋಣಿ ವಿಹಾರವನ್ನು ನಿಷೇಧಿಸಲಾಗಿದೆ. ನದಿಯಲ್ಲಿ ನೀರಿನ ಪ್ರಮಾಣ ಕುಗ್ಗಿದ ಬಳಿಕ ದೋಣಿ ಯಾನವನ್ನು ಪುನರಾರಂಭಿಸಲಾಗುತ್ತಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಮುಂಬರುವ ಎರಡು ದಿನಗಳಲ್ಲೂ ಮೋಡ ಮುಸುಕಿದ ವಾತಾವರಣದೊಂದಿಗೆ ತುಂತುರು ಹಾಗೂ ಸಾಧಾರಣ ಮಳೆ ಬೀಳಲಿದೆ. ಕೊಡಗು ಜಿಲ್ಲೆಯಲ್ಲಿ ಜು.11 (ಸೋಮವಾರ)ರಂದು ಗರಿಷ್ಠ 43 ಮಿ.ಮೀ., ಜು.12ರಂದು 38 ಮಿ.ಮೀ., ಜು.13ರಂದು 39 ಮಿ.ಮೀ. ಮಳೆಯಾಗಲಿದೆ. ಮೈಸೂರು ಜಿಲ್ಲೆಯಲ್ಲಿ 5 ರಿಂದ 8 ಮಿ.ಮೀ. ಮಳೆಯಾಗಲಿದೆ. ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿಯೂ ಸಾಧಾರಣ ಮಳೆಯಾಗುವುದರಿಂದ ಜನರು ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಹವಾ ಮಾನ ಇಲಾಖೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಹೆಚ್.ಡಿ.ಕೋಟೆ: ಕೇರಳದಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಕಬಿನಿ ಜಲಾಶಯದ 4 ಕ್ರಸ್ಟ್ ಗೇಟ್‌ಗಳ ಮೂಲಕ 25 ಸಾವಿರ ಕ್ಯೂಸೆಕ್ ನೀರು ಹಾಗೂ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್(ವಿದ್ಯುತ್ ಉತ್ಪಾದನಾ ಘಟಕ)ನಿಂದ 5 ಸಾವಿರ ಕ್ಯೂಸೆಕ್ ಸೇರಿದಂತೆ ಒಟ್ಟು 30 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ ಎಂದು ಕಬಿನಿ ಸಹಾಯಕ ಇಂಜಿನಿಯರ್ ರಮೇಶ್ ಬಾಬು ತಿಳಿಸಿದ್ದಾರೆ.

ಕಬಿನಿ ಜಲಾಶಯವು 2284 ಅಡಿ ಇದ್ದು, ಅದರಲ್ಲಿ ಭಾನುವಾರ ಸಂಜೆ ವೇಳೆಗೆ 2283 ಅಡಿ ಭರ್ತಿಯಾಗಿದೆ. ಜಲಾಶಯದ ಪೂರ್ಣ ಭರ್ತಿಗೆ ಕೇವಲ 1 ಅಡಿ ಬಾಕಿ ಇದ್ದು, 27,000 ಕ್ಯೂಸೆಕ್‌ಗಿಂತ ಹೆಚ್ಚಿನ ನೀರು ಡ್ಯಾಂಗೆ ಹರಿದು ಬರುತ್ತಿದೆ. ಇದರಿಂದ ಡ್ಯಾಂನ ಸುರಕ್ಷತೆಗಾಗಿ ಮುಂಜಾಗ್ರತಾ ಕ್ರಮ ಕೈಗೊಂಡು 30 ಸಾವಿರ ಕ್ಯೂಸೆಕ್ ನೀರನ್ನು ಕಪಿಲಾ ನದಿಗೆ ಬಿಡಲಾಗುತ್ತಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2276 ಅಡಿ ನೀರು ಸಂಗ್ರಹವಾಗಿತ್ತು. ಅಲ್ಲದೇ 996 ಕ್ಯೂಸೆಕ್ಸ್ ಒಳಹರಿವು, 700 ಸಾವಿರ ಕ್ಯೂಸೆಕ್ಸ್ ಹೊರ ಹರಿವಿತ್ತು ಎಂದರು.

ಅಣೆಕಟ್ಟೆಯಿಂದ ನದಿಗೆ ಹೆಚ್ಚಿನ ಪ್ರಮಾಣದ ನೀರು ಹರಿಸಲಾಗುತ್ತಿದ್ದು, ಜಲಾಶಯದ ಮುಂಭಾಗವಿರುವ ಬಿದರಹಳ್ಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ನೀರಿನಿಂದ ಆವೃತ್ತವಾಗಿದ್ದು, ಆ ರಸ್ತೆಯಲ್ಲಿ ಜನ ಹಾಗೂ ವಾಹನ ಸಂಚಾರ ನಿರ್ಬಂಧಿಸಿ ಪೊಲೀಸ್ ಪಹರೆ ಹಾಕಲಾಗಿದೆ. ಅಲ್ಲದೇ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿರುವುದರಿಂದ ಬಿದರಹಳ್ಳಿ ಗ್ರಾ.ಪಂ. ಎನ್.ಬೇಗೂರು ಗ್ರಾ ಪಂ ವ್ಯಾಪ್ತಿಯ 50 ಗ್ರಾಮಗಳ ರಸ್ತೆ ಸಂಪರ್ಕ ಕಡಿತವಾಗಿದೆ. ಹೀಗಾಗಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಆ ಭಾಗದ ಜನತೆರಿಗೆ ಜಲಾಶಯದ ಅಣೆಕಟ್ಟೆಯ ಮೇಲೆ ಓಡಾಡುವ ಅವಕಾಶ ಮಾಡಿಕೊಡಲಾಗಿದೆ ಎಂದು ತಿಳಿಸಿದರು.

ಜಲಾಶಯಕ್ಕೆ ಮುಗಿಬಿದ್ದ ಪ್ರವಾಸಿಗರು: ಕೇರಳದಲ್ಲಿ ಉತ್ತಮ ಮಳೆಯಾಗಿ ಹೆಚ್ಚಿನ ನೀರು ಹರಿದು ಬರುತ್ತಿರುವುದರಿಂದ ಕಬಿನಿ ಸೊಬಗನ್ನು ಸವಿಯಲು ಆಗಮಿಸುತ್ತಿದ್ದಾರೆ. ಜಲಾಶಯಕ್ಕೆ ಅಧೀಕ್ಷಕ ಇಂಜಿನಿಯರ್ ಶಿವಮಾರಯ್ಯ ಭೇಟಿ ನೀಡಿ ಕಾರ್ಯಪಾಲಕ ಅಭಿಯಂತರದ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರದ ಜನಾರ್ಧನ್, ಸಹಾಯಕ ಇಂಜಿನಿಯರ್‌ಗಳಾದ ರಮೇಶ್ ಬಾಬು, ವಿಶ್ವನಾಥ್, ಹಾಗೂ ಗೇಜ್ ಆಪರೇಟರ್ ನಾಗರಾಜು ಅಣೆಕಟ್ಟೆಗೆ ಒಳ ಮತ್ತು ಹೊರ ಹರಿವಿನ ನೀರಿನ ಪ್ರಮಾಣದ ಸಮತೋಲನದ ಸೂಕ್ಷ್ಮತೆಯನ್ನು ಗ್ರಹಿಸಿ ಕಟ್ಟೆಚ್ಚರದಿಂದ ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ಮುಕ್ತ ವಿವಿಯಲ್ಲಿ ಮಹಿಳಾ ಉದ್ಯಮಿಗಳ ವಸ್ತುಪ್ರದರ್ಶನ

ಮೈಸೂರು, ಜು.10(ಆರ್‌ಕೆ)– ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮಹಿಳಾ ಉದ್ಯಮಶೀಲರು ತಯಾರಿಸಿರುವ ಉತ್ಪನ್ನಗಳ ಎರಡು ದಿನಗಳ ವಸ್ತು ಪ್ರದರ್ಶನ ಇಂದು ಆರಂಭವಾಯಿತು.

ಮುಕ್ತ ಗಂಗೋತ್ರಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಎಲ್. ನಾಗೇಂದ್ರ ಹಾಗೂ ವಿಶ್ವವಿದ್ಯಾನಿಲಯದ ವ್ಯವಸ್ಥಾಪಕ ಮಂಡಳಿ ಸದಸ್ಯೆ ಯಶಸ್ವಿನಿ ಅವರು ವಸ್ತುಪ್ರದರ್ಶನವನ್ನು ಉದ್ಘಾಟಿಸಿದರು.

ಈ ಸಂದರ್ಭ ಮಹಿಳಾ ಉದ್ಯಮಿಗಳನ್ನುದ್ದೇಶಿಸಿ ಮಾತನಾಡಿದ ಶಾಸಕರು, ಇಂದು ಮಹಿಳೆ ಎಲ್ಲಾ ರಂಗದಲ್ಲೂ ತನ್ನ ಪ್ರತಿಭೆ ಮೂಲಕ ಸಾಧನೆ ಮಾಡುತ್ತಿದ್ದು, ಗುರಿ ಮುಟ್ಟುತ್ತಿದ್ದಾರೆ. ಪರಿಶ್ರಮವಿದ್ದಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು ಸಾಧ್ಯ ಎಂಬುದಕ್ಕೆ ಹಲವು ಉದಾಹರಣೆಗಳಿವೆ. ಸರ್ಕಾರದ ಸೌಲಭ್ಯಗಳನ್ನು ಬಳಸಿಕೊಂಡು ಉದ್ಯಮ ಸ್ಥಾಪಿಸಿ ಸ್ವಯಂ ಉದ್ಯೋಗಿಗಳಾಗಿ ಉದ್ಯೋಗ ನೀಡಿ ಎಂದು ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ಎಸ್. ವಿದ್ಯಾಶಂಕರ್, ಕುಲಸಚಿವ ಖಾದರ್ ಪಾಷ, ಡೀನ್ (ಶೈಕ್ಷಣಿಕ) ಡಾ. ಅಶೋಕ್ ಕಾಂಬ್ಳೆ, ಯಶಸ್ವಿ ಉದ್ಯಮಿಗಳಾದ ಛಾಯಾ ನಂಜಪ್ಪ, ಮಮತಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದ ಬೇಸ್‌ಮೆಂಟ್‌ನಲ್ಲಿ ಆಯೋಜಿಸಿರುವ ವಸ್ತುಪ್ರದರ್ಶನದಲ್ಲಿ ಮಹಿಳಾ ಉದ್ಯಮಿಗಳು ಉತ್ಪಾದಿಸಿರುವ ಉಡುಪುಗಳು, ಬ್ಯಾಗ್, ಗುಡಿ ಕೈಗಾರಿಕೆ ಉತ್ಪನ್ನಗಳು, ಉಪ್ಪಿನಕಾಯಿ, ಗೃಹೋಪಯೋಗಿ ಉಪಕರಣಗಳು ಸೇರಿದಂತೆ ಹಲವು ಉತ್ಪನ್ನಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕಿಡಲಾಗಿದೆ.

ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ತೆರೆದಿರುವ ವಸ್ತುಪ್ರದರ್ಶನವು ಭಾನುವಾರ ಅಂತ್ಯಗೊಳ್ಳಲಿದ್ದು, ಸಾರ್ವಜನಿರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಅಗ್ನಿಪಥ್ ಯೋಜನೆ ವಿರೋಧಿಸುವುದರಲ್ಲಿ ಯಾವುದೇ ಅರ್ಥವಿಲ್ಲ: ಕೇಂದ್ರ ಸಚಿವ ಕ್ರಿಶನ್ ಪಾಲ್

ಮಂಡ್ಯ, ಜು.10(ಮೋಹನ್‌ರಾಜ್)– ಪ್ರತಿ ಪಕ್ಷಗಳು ಅಗ್ನಿಪಥ್ ಯೋಜನೆ ವಿರೋಧಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಕೇಂದ್ರದ ಇಂಧನ ಮತ್ತು ಬೃಹತ್ ಕೈಗಾರಿಕೆಗಳ ರಾಜ್ಯ ಸಚಿವ ಕ್ರಿಶನ್ ಪಾಲ್ ಗುರ್ಜರ್ ಹೇಳಿದರು.

ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಗ್ನಿಪಥ್ ಯೋಜನೆಯಡಿ ಸೇನೆಗೆ ಸೇರಿದ ಯುವ ಜನರಿಗೆ 4 ವರ್ಷಗಳ ಕಾಲ ಸೇನಾ ತರಬೇತಿ, ಕೌಶಲ್ಯ ತರಬೇತಿ ನೀಡಲಾಗುತ್ತದೆ. ಸಾಮಾನ್ಯ ಸೈನಿಕರಿಗೆ ನೀಡುವಂತೆ ಅವರಿಗೂ ಸಂಬಳ ನೀಡಲಾಗುತ್ತದೆ. ನಿವೃತ್ತಿ ಬಳಿಕ 10ಲಕ್ಷ ರೂ. ನೀಡಲಾಗುತ್ತದೆ. ಇದರಿಂದ ಅವರು ನಿವೃತ್ತಿ ಬಳಿಕ ಸ್ವಂತ ಉದ್ಯೋಗ ಆರಂಭಿಸಬಹುದು. ಜೊತೆಗೆ ನಿವೃತ್ತ ಸೈನಿಕರಿಗೆ ಉದ್ಯೋಗದಲ್ಲಿ ಶೇ.15ರಷ್ಟು ಮೀಸಲು ಸೌಲಭ್ಯ ಕಲ್ಪಿಸಲು ಸಾಕಷ್ಟು



ಕಂಪನಿಗಳು ಮುಂದೆ ಬಂದಿವೆ. ಈ ರೀತಿ ಭಾರತ ಮಾತ್ರವಲ್ಲದೆ ಹಲವು ರಾಷ್ಟ್ರಗಳಲ್ಲಿ ಜಾರಿಯಲ್ಲಿದೆ ಎಂದು ವಿವರಿಸಿದರು.

ಹಾಸನ ಮತ್ತು ಮಂಡ್ಯ ಜಿಲ್ಲೆಯಲ್ಲಿ ನಾನು ಇಂದಿಗೆ 7 ದಿನಗಳ ಪ್ರವಾಸ ನಡೆಸಿದ್ದೇನೆ. ಈ ಸಂದರ್ಭದಲ್ಲಿ ಸಾಕಷ್ಟು ವಿಚಾರಗಳ ಬಗ್ಗೆ ಚರ್ಚಿಸಿದ್ದೇನೆ. ಹತ್ತಾರು ಅಂಶಗಳನ್ನು ಅರಿತಿದ್ದೇನೆ. ಈ ಸಂದರ್ಭದಲ್ಲಿ ಜನರಿಂದ ಸಾಕಷ್ಟು ಬೇಡಿಕೆಗಳು ಬಂದಿವೆ. ಅವೆಲ್ಲವುಗಳು ನನ್ನ ಗಮನದಲ್ಲಿದ್ದು, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲೆಗೆ ಕೈಗಾರಿಕೆಗಳನ್ನು ತರುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕೃಷಿ ಕ್ಷೇತ್ರದ ವಿಚಾರವಾಗಿ ಕೇಂದ್ರ ಸರ್ಕಾರ ಯಾವುದೇ ಹೊಸ ಯೋಜನೆಗಳನ್ನು ಜಾರಿಗೆ ತಂದರೂ ವಿಪಕ್ಷಗಳು ವಿನಾಕಾರಣ ಟೀಕೆ ಮಾಡುತ್ತವೆ. ಆದಾಗಿಯೂ ಕೇಂದ್ರ ಸರ್ಕಾರ ಕೃಷಿಗೆ ಹೆಚ್ಚಿನ ಆದ್ಯತೆ ನೀಡಿದೆ ಕಿಸಾನ್ ಸಮ್ಮಾನ್ ಯೋಜನೆಯಡಿ 16 ಕೋಟಿಗಿಂತ ಹೆಚ್ಚು ರೈತರ ಖಾತೆಗೆ 6 ಸಾವಿರ ರೂ. ನೇರವಾಗಿ ಜಮೆ ಆಗುತ್ತಿದೆ ಎಂದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ಸಚಿವರು ಜೈಲಿಗೆ ಹೋದರು, ಅಷ್ಟೊಂದು ಭ್ರಷ್ಟಾಚಾರ ಮಾಡಿದ್ದಾರೆನ್ನುವ ಮಾತು ಕೇಳಿಬರುತ್ತಿತ್ತು. ಆದರೆ ನಮೋ ಆಡಳಿತದಲ್ಲಿ ಅಂತಹ ಯಾವುದಾದರೂ ಮಾತುಗಳು ಕೇಳಿಬಂದಿಲ್ಲ. ಜನರು ಉತ್ತಮರನ್ನು ಆಯ್ಕೆ ಮಾಡಿದರೆ, ಉತ್ತಮ ಆಡಳಿತ ಸಿಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಿ.ಪಿ.ಉಮೇಶ್, ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ರಾಜ್ಯ ಕಾರ್ಯದರ್ಶಿ ಭಾರತಿ, ಬಿಜೆಪಿ ನಾಯಕಿ ಲಕ್ಷ್ಮೀಅಶ್ವಿನ್‌ಗೌಡ ಉಪಸ್ಥಿತರಿದ್ದರು.

ಸಂಸದೆ ಸುಮಲತಾ ವಿರುದ್ಧ ಶಾಸಕ ರವೀಂದ್ರ ಶ್ರೀಕಂಠಯ್ಯ ವಾಗ್ದಾಳಿ

ಶ್ರೀರಂಗಪಟ್ಟಣ, ಜು.10(ವಿನಯ್ ಕಾರೇಕುರ)– ಕೆಆರ್‌ಎಸ್ ಅಣೆಕಟ್ಟೆ ಬಿರುಕು ಬಿಟ್ಟಿದೆ ಎಂದು ಹೇಳಿಕೆ ನೀಡಿದ್ದ ಸಂಸದೆ ಸುಮಲತಾ ಅಂಬರೀಶ್ ಅವರು ನದಿ ಪಾತ್ರದ ರಕ್ಷಣೆ ಕುರಿತು ನಡೆದ ಮಹತ್ವದ ಕಾರ್ಯಾಗಾರಕ್ಕೆ ಗೈರಾಗಿರುವುದು ನನಗೆ ಬಹಳ ಅಚ್ಚರಿ ಮೂಡಿಸಿದೆ ಎಂದು ಸಂಸದೆ ವಿರುದ್ಧ ಶಾಸಕ ರವೀಂದ್ರಶ್ರೀಕಂಠಯ್ಯ ವಾಗ್ದಾಳಿ ನಡೆಸಿದರು.



ತಾಲೂಕಿನ ಕೊಡಿಯಾಲ ಗ್ರಾಮದಲ್ಲಿ ಸೋಮವಾರ ಲೋಕಾರ್ಪಣೆಗೊಳ್ಳಲಿರುವ ಆಸ್ಪತ್ರೆ ವೀಕ್ಷಣೆ ಹಾಗೂ ಆಸ್ಪತ್ರೆ ಮುಂಭಾಗದಲ್ಲಿನ 10 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೆಆರ್‌ಎಸ್ ಅಣೆಕಟ್ಟೆ ಬಿರುಕು ಬಿಟ್ಟಿದೆ ಎಂದು ರೈತರು ಹಾಗೂ ಸಾರ್ವಜನಿಕರಲ್ಲಿ ಸಂಸದರು ಗೊಂದಲ ಸೃಷ್ಟಿಸಿದ್ದರು. ಶುಕ್ರವಾರ ತಾಲೂಕಿನ ಮೊಗರಹಳ್ಳಿ ಮಂಟಿ ಬಳಿಯ ಸಮುದಾಯ ಭವನದಲ್ಲಿ ಸಂಬಂಧಪಟ್ಟ ಸಚಿವರು, ಶಾಸಕರು ಸೇರಿದಂತೆ ರಾಜ್ಯ ಮಟ್ಟದ ಉನ್ನತ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗಿಯಾಗಿ, ಕೆಆರ್‌ಎಸ್‌ಅಣೆಕಟ್ಟೆ ಸೇರಿದಂತೆ ಇತರೆ ಜಲಾಶಯಗಳ ರಕ್ಷಣೆ ಮಾಡಿ, ಮುಂದಿನ ಪೀಳಿಗೆಗೆ ಹೇಗೆ ಉಳಿಸಿಕೊಡಬೇಕು ಎನ್ನುವುದು ಸೇರಿದಂತೆ ಮಹತ್ವರವಾದ ಕಾರ್ಯಾಗಾರಕ್ಕೆ ಅವರು ಗೈರಾಗುವ ಮೂಲಕ ಬೇಜವಾಬ್ದಾರಿತನ ಪ್ರದರ್ಶಿಸಿದ್ದಾರೆ. ಅಲ್ಲದೇ ತಮ್ಮ ಮೂಲ ಉದ್ದೇಶ ಬೇರೆ ಇದೆ ಎಂಬುದನ್ನ ವ್ಯಕ್ತಪಡಿಸಿದ್ದಾರೆ ಎಂದು ಆರೋಪಿಸಿದರು. ಪಶ್ಚಿಮವಾಹಿನಿ– ಕಣ್ಣಾನ್ನೂರು ಹೆದ್ದಾರಿ ರಸ್ತೆ ಅಭಿವೃದ್ಧಿಪಡಿಸಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸರ್ಕಾರದಿಂದ 9.40 ಕೋಟಿ ರೂ. ಅನುದಾನ ತರಲು ಯಶಸ್ವಿಯಾಗಿದ್ದೇವೆ. ಇದರ ಫಲವಾಗಿ ಇದೀಗ ಟೆಂಡರ್ ಪ್ರಕ್ರಿಯೆ ಹಂತದಲ್ಲಿದೆ. ಕೆಡಿಪಿ ಸಭೆಯಲ್ಲೂ ಜಿಲ್ಲೆಯ ಎಲ್ಲಾ ಶಾಸಕರು ಒಕ್ಕೋರಲಿನಿಂದ ಅಧಿಕಾರಿಗಳಿಗೆ ಒತ್ತಡ ತಂದು ಹೆದ್ದಾರಿ ಗುಂಡಿ ಮುಚ್ಚಿಸುವ ಕೆಲಸ ಮಾಡಿಸಿದ್ದೇವೆ. ಆದರೆ ಸಂಸದರು ಹೆದ್ದಾರಿಗೆ ಗುಂಡಿ ಮುಚ್ಚಿಸುವ ಕೆಲಸ ನನ್ನಿಂದಾಗುತ್ತಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟರ್ ಹಾಕಿಕೊಳ್ಳುವ ಮೂಲಕ ಸಂತಸಪಡುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಮರೀಗೌಡ, ಎಂಜಿನಿಯರ್ ರಾಮಕೃಷ್ಣೇಗೌಡ, ಗ್ರಾಪಂ ಸದಸ್ಯರಾದ ಹೇಮಂತ್‌ಕುಮಾರ್, ಎಲ್.ಪ್ರಶಾಂತ್, ಪಿಡಿಒ ಮಹೇಶ್, ಮುಖಂಡರಾದ ಶಂಕರಪ್ಪ, ಶ್ರೀಪವನ್, ರವಿ ಪದ್ಮಶಾಲಿ, ಸ್ವಾಮಿ, ರಾಜೇಗೌಡ, ರವಿ, ಶಂಕರಪ್ಪ, ಗುತ್ತಿಗೆದಾರ ಗೌಡಹಳ್ಳಿ ಲೋಕೇಶ್ ಇದ್ದರು.

ಇಂದು ವಿಶೇಷ ಪೂಜೆ

ಭಾರತೀನಗರ, ಜು.10(ಅಣ್ಣೂರು



ಸತೀಶ್)– ಆಷಾಢದ ಅಂಗವಾಗಿ ಇಲ್ಲಿಗೆ ಸಮೀಪದ ಶ್ರೀಸಣ್ಣಕ್ಕಿ ರಾಯಸ್ವಾಮಿ ದೇವಸ್ಥಾನದಲ್ಲಿ ಜು. 11ರ ಸೋಮವಾರ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ.

ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ದೊಡ್ಡರಸಿನಕೆರೆ ಹೊನ್ನೇಗೌಡರವರ ನೇತೃತ್ವದಲ್ಲಿ ನಡೆಯುವ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಅನ್ನಸಂತರ್ಪಣೆಯನ್ನು ಸಹ ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಬೇಕೆಂದು ಕೋರಿದ್ದಾರೆ.

ಬೇಲೂರು ಫೈನಾನ್ಶಿಯರ್ ಸುನೀಲ್‌ಕುಮಾರ್ ಹತ್ಯೆ ಪ್ರಕರಣ

6 ಮಂದಿ ಆರೋಪಿಗಳ ಬಂಧನ

ನಾಗಮಂಗಲ, ಜು.10(ಮಹೇಶ್)– ಇತ್ತೀಚೆಗೆ ತಾಲೂಕಿನ ಬೆಳ್ಳೂರಿನಲ್ಲಿ ನಡೆದ ಫೈನಾನ್ಶಿಯರ್ ಸುನೀಲ್‌ಕುಮಾರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ 6ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಳ್ಳೂರು ಪಟ್ಟಣದ ಅಂಬೇಡ್ಕರ್ ಕಾಲೋನಿಯ ಬಿ.ಕೆ.ಶಶಿಧರ್ ಅಲಿಯಾಸ್ ಸೈಲೆಂಟ್ ಶಶಿ, ಪ್ರದೀಪ್, ಶಿವಣ್ಣ, ಟಿ.ಬಿ.ಬಡಾವಣೆಯ ಸುಭಾಷ್‌ನಗರದ ಕಾರ್ತಿಕ್, ಬಿಟ್ಟಗೋನಹಳ್ಳಿ ಗ್ರಾಮದ ಚಂದನ್ ಅಲಿಯಾಸ್ ಜಪಾನ್, ಬೈರನಹಳ್ಳಿಯ ಲೋಕೇಶ್ ಬಂಧಿತ ಆರೋಪಿಗಳಾಗಿದ್ದು, ಮತ್ತಿಬ್ಬರಿಗಾಗಿ ಪೊಲೀಸರು ಬಲೆ ಬೀಸಿದ್ದಾರೆ.

ವಿವರ: ಹಳೆ ವೈಷ್ಯಮದ ಹಿನ್ನೆಲೆಯಲ್ಲಿ ಜು.3ರಂದು ಪಟ್ಟಣದ ಆರಣಿ ರಸ್ತೆಯ ಶ್ರೀಮಹದೇಶ್ವರ ದೇವಸ್ಥಾನದ ಬಳಿಯಿರುವ ಅರಳಿಕಟ್ಟೆ ಸಮೀಪ ಆರೇಳು ಮಂದಿ ದುಷ್ಕರ್ಮಿಗಳು ತಾಲೂಕಿನ ಬೆಳ್ಳೂರು ಪಟ್ಟಣದ ಡಾ.ಅಂಬೇಡ್ಕರ್ ಕಾಲೋನಿ ನಿವಾಸಿ ಕೆಂಪಯ್ಯನ ಅವರ ಪುತ್ರ ಬಿ.ಕೆ.ಸುನಿಲ್‌ಕುಮಾರ್(35) ಅವರ ಮೇಲೆ ಮಾರಕಾಸ್ತ್ರಗಳಿಂದ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಹತ್ಯೆಗೈದಿದ್ದರು.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಬೆಳ್ಳೂರು ಠಾಣೆಯ ಪೊಲೀಸರು, ಎಸ್‌ಪಿ ಯತೀಶ್ ಅವರ ಆದೇಶದಂತೆ ಡಿವೈಎಸ್‌ಪಿ ನವೀನ್‌ಕುಮಾರ್, ಎಎಸ್‌ಪಿ ವೇಣುಗೋಪಾಲ್, ಸಿಪಿಐ ಸುಧಾಕರ್ ನೇತೃತ್ವದಲ್ಲಿ ತನಿಖಾ ತಂಡ ಬೆಂಗಳೂರಿನ ಜಾಲಹಳ್ಳಿ ಕ್ರಾಸ್‌ನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಬೆಳ್ಳೂರು ಮತ್ತು ಬಿಂಡಿಗನವಿಲೆ ಠಾಣೆಯ ಲೋಕೇಶ್, ಪ್ರಶಾಂತ್‌ಕುಮಾರ್, ಗುರುಪ್ರಸಾದ್, ಪ್ರಸನ್ನ ಕುಮಾರ್, ಶಂಕರ್‌ನಾಯಕ್, ಸಂದೇಶ್ ಪಟೇಲ್, ಮತ್ತು ಸಿಡಿಆರ್ ವಿಭಾಗದ ಲೋಕೇಶ್ ಮತ್ತು ರವಿಕಿರಣ್ ಪಾಲ್ಗೊಂಡಿದ್ದರು.

ಮಾನ್ಸೂನ್ ಮ್ಯಾರಥಾನ್‌ಗೆ ಶಾಸಕರಿಂದ ಚಾಲನೆ



ಚಿನಕುರಳಿ, ಜು.10(ಸಿ.ಎ.ಲೋಕೇಶ್)– ಪಾಂಡವಪುರ ತಾಲೂಕಿನ ಚಿನಕುರಳಿ ಲಿಂಗಾಪುರ ರಸ್ತೆಯಲ್ಲಿರುವ ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ಫಿಟ್ ಇಂಡಿಯಾ ಕಾರ್ಯಕ್ರಮದಡಿ ನಡೆದ ಮಾನ್ಸೂನ್ ಮ್ಯಾರಥಾನ್ ಸ್ಪರ್ಧೆಗೆ ಸಂಸ್ಥೆಯ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್.ಪುಟ್ಟರಾಜು ಚಾಲನೆ ನೀಡಿದರು.

ಸಂಸ್ಥೆಯ ಆವರಣದಿಂದ ಹೊರಟ ಮ್ಯಾರಥಾನ್ ಸ್ಪರ್ಧೆಯಲ್ಲಿ ಶಾಲೆಯ ಸುಮಾರು 500ಕ್ಕೂ ಅಧಿಕ ಮಕ್ಕಳು ಪಾಲ್ಗೊಂಡಿದ್ದರು. ಚಿನಕುರಳಿಯ ಕೃಷಿಪತ್ತಿನ ಸಹಕಾರ ಸಂಘದ ಸರ್ಕಲ್ ಬಳಿ ತಲುಪಿ ಅಲ್ಲಿಂದ ಬಿಜಿಎಸ್ ಗೇಟ್ ಬಳಿ ತೆರಳಿ, ಬಿಜಿಎಸ್ ಶಾಲೆಯ ಮಾರ್ಗವಾಗಿ ಗ್ರಾಮದ ರಂಗ ತಲುಪಿ, ಹಳೇ ಎಸ್‌ಬಿಎಂ ಬ್ಯಾಂಕ್ ಮಾರ್ಗವಾಗಿ ಮತ್ತೆ ಶಾಲೆ ಪ್ರವೇಶಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಎಸ್‌ಟಿಜಿ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಮಾನ್ಸೂನ್ ಮ್ಯಾರಥಾನ್ ಓಟದ ಸ್ಪರ್ಧೆಗೆ ಚಾಲನೆ ನೀಡಲಾಗಿದ್ದು, ಸ್ಪರ್ಧೆಯಲ್ಲಿ ಸುಮಾರು 500ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ. ಸ್ಪರ್ಧೆ, ಕ್ರೀಡಾಕೂಟಗಳಲ್ಲಿ ಸೋಲು–ಗೆಲುವು ಸಾಮಾನ್ಯ, ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಗಳು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ಕ್ರೀಡಾಮನೋಭಾವ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಂಸ್ಥೆಯ ಸಿಇಓ ಸಿ.ಪಿ.ಶಿವರಾಜು ಮಾತನಾಡಿ, ಫಿಟ್ ಇಂಡಿಯಾ ಕಾರ್ಯಕ್ರಮದಡಿ ಎಸ್‌ಟಿಜಿ ಶಿಕ್ಷಣ ಸಂಸ್ಥೆಯೂ ಪ್ರತಿವರ್ಷವು ವಿದ್ಯಾರ್ಥಿಗಳಿಗಾಗಿ ಮಾನ್ಸೂನ್ ಮ್ಯಾರಥಾನ್ ಓಟದ ಸ್ಪರ್ಧೆಯನ್ನು ನಡೆಸಲಾಗುತ್ತಿದೆ. ಅದೇ ರೀತಿ ಈ ವರ್ಷವು ನಮ್ಮ ತಾತ–ಅಜ್ಜಿ (ಸಣ್ಣತಮ್ಮೇಗೌಡ ಮತ್ತು ಅಂಕಮ್ಮ) ಹೆಸರಿನ ಅರ್ಪಣಾ ಕಾರ್ಯಕ್ರಮದಡಿ ಸ್ಪರ್ಧೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

6ರಿಂದ 8ನೇ ತರಗತಿಯ ಬಾಲಕರ ವಿಭಾಗದ ವಿಜೇತರು: ರಾಹುಲ್ ಎಸ್.ಗೌಡ(ಪ್ರಥಮ), ಪಿ.ವಿಕಾಶ್(ದ್ವಿತೀಯ), ಯಶಸ್‌ಗೌಡ(ತೃತೀಯ), ಮಹೇಶ್(4ನೇ ಸ್ಥಾನ). **6 ರಿಂದ 8ನೇ ತರಗತಿಯ ಬಾಲಕಿಯರ ವಿಭಾಗ:** ಪ್ರೀತಿ(ಪ್ರಥಮ), ಎಲ್.ಎಂ.ಮೇಘನಾ(ದ್ವಿತೀಯ), ಚಂದನಾ(ತೃತೀಯ), ನಿತಿಶ್ರೀ(4), **9ರಿಂದ 10ನೇ ತರಗತಿ ಬಾಲಕರ ವಿಭಾಗ:** ಸಾಗರ್(ಪ್ರಥಮ), ಡಿ.ಎಸ್.ಲಿಕಿತ್ (ದ್ವಿತೀಯ), ಚಿನ್ಮಯ್(ತೃತೀಯ), ನಿಶಾಂತ್(4), **9ರಿಂದ 10ನೇ ತರಗತಿಯ ಬಾಲಕಿಯರ ವಿಭಾಗ:** ಸಾನಿಧ್ಯ(ಪ್ರಥಮ), ನಿತ್ಯಶ್ರೀ(ದ್ವಿತೀಯ), ಪ್ರೀತಿ(ತೃತೀಯ), ಎಂ.ಯುಕ್ತಿ(4ನೇ ಸ್ಥಾನ) ಪಡೆದುಕೊಂಡಿದ್ದಾರೆ.

ಈ ವೇಳೆ ಆಡಳಿತಾಧಿಕಾರಿ ನಿವೇದಿತಾ ನಾಗೇಶ್, ಪ್ರಾಂಶುಪಾಲರಾದ ಮಾಚಮ್ಮ, ಸಹ ಶಿಕ್ಷಕ ಗೋಪಾಲ್ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಭಾರತೀನಗರ, ಜು.10(ಅಣ್ಣೂರು ಸತೀಶ್)– ಇಲ್ಲಿಗೆ ಸಮೀಪದ ಭುಜುವಳ್ಳಿ ಗ್ರಾಮದಲ್ಲಿ 1.50 ಕೋಟಿರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ಸಿ.ತಮ್ಮಣ್ಣ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ಜಾತ್ಯಾತೀತವಾಗಿ ಕೆಲಸ ನಿರ್ವಹಿಸಿದ್ದೇನೆ. ಬಿಜೆಪಿ ಸರ್ಕಾರದ ಮಂತ್ರಿಗಳ ಮನೆಯ ಬಾಗಿಲಿಗೆ ಅಲೆದು ಹಣ ತಂದು ಕ್ಷೇತ್ರವನ್ನು ಅಭಿವೃದ್ಧಿ ಪಡಿಸುತ್ತಿದ್ದೇನೆ. ಎಲ್ಲರೂ ಕೂಡ ಅಭಿವೃದ್ಧಿ ಕೆಲಸಗಳಿಗೆ ಸಹಕರಿಸಬೇಕು ಎಂದು ಕೋರಿದರು.

ನಿವೃತ್ತ ಕಂದಾಯ ಉಪನಿರೀಕ್ಷಕ ಆರ್.ಐ.ಪುಟ್ಟಸ್ವಾಮಿ ಮಾತನಾಡಿ, ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ತಮ್ಮಣ್ಣನವರು ಯಾವುದೇ ತಾರತಮ್ಯ ಮಾಡಿಲ್ಲ. ಗ್ರಾಮದಲ್ಲಿ ಯಾವುದೇ ಮುಖಂಡರು ಸಮಸ್ಯೆಗಳ ಬಗ್ಗೆ ತಿಳಿಸಿದರೆ ಅದಕ್ಕೆ ಸ್ಪಂದಿಸುತ್ತಾರೆ. ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದಾರೆ ಎಂದರು.



ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ದಯಾನಂದ, ಮುಖಂಡರಾದ ಸಿದ್ದಯ್ಯ, ಗಣೇಶ್, ಪುಟ್ಟಸ್ವಾಮಿ, ರಾಜಣ್ಣ, ರಘು, ಸುರೇಶ್, ಕೆಂಪರಾಜು, ಮನುಕುಮಾರ್, ಸತೀಶ್, ಮಹೇಶ್, ಮಾಯೀಗೇಗೌಡ, ಪ್ರೀತಮ್‌ಕುಮಾರ್, ಗುತ್ತಿಗೆದಾರ ಬಾಬು ಸೇರಿದಂತೆ ಇತರರಿದ್ದರು.

ಜಿಲ್ಲೆಗೆ ತೃತೀಯ ಸ್ಥಾನ

ಮಂಡ್ಯ, ಜು.10– ಅಟಲ್ ಜೀ ಜನಸ್ನೇಹಿ ಯೋಜನೆಯಡಿ ನಾಡ ಕಚೇರಿಗಳಲ್ಲಿ ಸಾರ್ವಜನಿಕರಿಗೆ ವಿವಿಧ ಪ್ರಮಾಣ ಪತ್ರ ನೀಡುವ ಸಂಬಂಧ ಜೂನ್ –2022 ಮಾಹೆಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ನಿಗದಿತ ಅವಧಿಗಿಂತ ಮೊದಲೇ ವಿಲೇವಾರಿ ಮಾಡಿದ ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರಿಗೆ ಅಟಲ್ ಜೀ ಜನಸ್ನೇಹಿ ನಿರ್ದೇಶನಾಲಯದ ನಿರ್ದೇಶಕ ಗಂಗೂಬಾಯಿ ರಮೇಶ್ ಮಾನಕರ್ ಅಭಿನಂದನೆ ಸಲ್ಲಿಸಿದ್ದಾರೆ. ಜೂನ್ 2022ರ ಮಾಹೆಯಲ್ಲಿ ಸ್ವೀಕೃತವಾದ 2617ಅರ್ಜಿಗಳ ಪೈಕಿ ನಿಗದಿತ ಅವಧಿಗಿಂತ ಮೊದಲೇ ಶೇ.99.85 ರಷ್ಟು ವಿಲೇವಾರಿ ಮಾಡಿ ರಾಜ್ಯ ಮಟ್ಟದಲ್ಲಿ ತೃತೀಯ ಸ್ಥಾನ ಪಡೆದುಕೊಂಡಿರುವುದು ಶ್ಲಾಘನೀಯ ಎಂದು ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ ಸೋಮವಾರ 11 ಜುಲೈ 2022

ಹಾರಂಗಿಯಿಂದ 24 ಸಾವಿರ ಕ್ಯೂಸೆಕ್ಸ್ ನೀರು ಬಿಡುಗಡೆ

ಹಾಲಿನ ನೊರೆಯಂತೆ ಧುಮ್ಮಿಕ್ಕುವ ದೃಶ್ಯ ಕಣ್ತುಂಬಿಕೊಂಡ ಸುತ್ತ-ಮುತ್ತಲಿನ ನಿವಾಸಿಗಳು



ಕುಶಾಲನಗರ, ಜು.10– ಹಾರಂಗಿ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಭಾನುವಾರ ಒಳಹರಿವಿನಲ್ಲಿ ಗಣನೀಯವಾಗಿ ಏರಿಕೆ ಕಂಡು ಬಂದಿದ್ದು, ಜಲಾಶಯದ ನಾಲ್ಕು ಕ್ರೆಸ್ಟ್ ಗೇಟ್‌ಗಳಿಂದ ನದಿಗೆ 24,000 ಕ್ಯೂಸೆಕ್ಸ್ ನೀರು ಹರಿಬಿಡಲಾಯಿತು.

ಕಾವೇರಿ ಕಣಿವೆಯ ಪ್ರಮುಖ ಜಲಾಶಯಗಳಲ್ಲಿ ಒಂದಾದ ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿ ಇದ್ದು ಜಲಾಶಯದ ಇಂದಿನ ನೀರಿನ ಮಟ್ಟ ಸಂಜೆ 4 ಗಂಟೆ ವೇಳೆಗೆ 2,854.27 ಅಡಿ ಇತ್ತು ಜಲಾಶಯಕ್ಕೆ 14,620 ಕ್ಯೂಸೆಕ್ಸ್ ಒಳಹರಿವು ಇತ್ತು. 8.5 ಟಿ.ಎಂ.ಸಿ ಸಾಮರ್ಥ್ಯದ ಹಾರಂಗಿ ಜಲಾಶಯದಲ್ಲಿ ಇದೀಗ 6.89 ಟಿ.ಎಂ.ಸಿ ಗಳಷ್ಟು ನೀರು ಶೇಖರಣೆಯಾಗಿದೆ.

ಹಾರಂಗಿ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿ 45 ಮಿ.ಮೀ ನಷ್ಟು ಮಳೆ ದಾಖಲಾಗಿದೆ.

ಜಲಾಶಯದ ಕ್ರೆಸ್ಟ್ ಗೇಟ್‌ಗಳ ಮೂಲಕ ಹಾಲಿನ ನೊರೆಯಂತೆ ಧುಮ್ಮಿಕ್ಕುವ ನೀರಿನ ದೃಶ್ಯ ನಯನ ಮನೋಹರವಾಗಿತ್ತು ಜಲಾಶಯದಿಂದ ನೀರು ಹರಿಸುವ ಮುನ್ನ ತಗ್ಗುಪ್ರದೇಶದ ಜನರಿಗೆ, ಮೀನುಗಾರರಿಗೆ, ನದಿಯ ಆಸುಪಾಸಿನಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚಿಸಲು ಸೈರನ್ ಮೊಳಗಿಸಲಾಯಿತು. ಜಲಾಶಯದಿಂದ ಹೆಚ್ಚಿನ ನೀರು ಬಿಟ್ಟ ವಿಷಯ ತಿಳಿದ ಸುತ್ತ ಮುತ್ತಲಿನ ಜನರು ಹಾಗೂ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವೀಕ್ಷಿಸಿ ಸಂಭ್ರಮಿಸಿದರು. ಕಳೆದ ಒಂದು ವಾರದಿಂದ ಉತ್ತಮವಾಗಿ ಮಳೆ ಬಿದ್ದ ಹಿನ್ನೆಲೆಯಲ್ಲಿ ಜಲಾಶಯ ಭರ್ತಿಯಾಗಿರುವುದರಿಂದ ಅಚ್ಚುಕಟ್ಟು ವ್ಯಾಪ್ತಿಯ ರೈತರು ಹರ್ಷಚಿತ್ತರಾಗಿದ್ದಾರೆ. ನದಿ ತೀರದಲ್ಲಿ ವಾಸಿಸುತ್ತಿರುವ ಜನರು ಮುನ್ನೆಚ್ಚರಿಕೆಯ ಕ್ರಮವಾಗಿ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಹಾರಂಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಐ.ಕೆ.ಪುಟ್ಟಸ್ವಾಮಿ ಸೂಚನೆ ನೀಡಿದ್ದಾರೆ. ಹಾರಂಗಿ ಜಲಾಶಯದಿಂದ ಕೊಡಗು ಜಿಲ್ಲೆ ಸೇರಿದಂತೆ ನೆರೆಯ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ಹುಣಸೂರು ಮತ್ತು ಕೆ.ಆರ್.ನಗರ ಹಾಗೂ ಹಾಸನ ಜಿಲ್ಲೆಯ ಅರಕಲಗೂಡು ತಾಲೂಕು ಸೇರಿದಂತೆ 1.5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲಾಗುತ್ತಿದೆ.

ಹಾರಂಗಿ ಜಲಾಶಯದಿಂದ ಹರಿಯುವ ನೀರು ಕೂಡಿಗೆ ಬಳಿ ಹಾರಂಗಿ ನದಿ ಸೇರುವ ಮೂಲಕ ಕಾವೇರಿ ನದಿ ಸೇರಿ ನಂತರ ಕೃಷ್ಣರಾಜ ಸಾಗರವನ್ನು ಸೇರಲಿದೆ.

ಕೊಯನಾಡು ಕಿಂಡಿ ಅಣೆಕಟ್ಟೆಯ ಪ್ರವಾಹದಲ್ಲಿ ತೇಲಿ ಬಂದ ಮರದ ದಿಮ್ಮಿ

- ಎನ್‌ಡಿಆರ್‌ಎಫ್‌ನಿಂದ ತೆರವು ಕಾರ್ಯಾಚರಣೆ
- ಇಂದು ಅಂಗನವಾಡಿ, ಶಾಲೆಗಳಿಗೆ ರಜೆ



ಮಡಿಕೇರಿ,ಜು.10– ಕೊಯನಾಡು ಕಿಂಡಿ ಅಣೆಕಟ್ಟೆಯಲ್ಲಿ ಪ್ರವಾಹದಲ್ಲಿ ತೇಲಿ ಬಂದಿದ್ದ ಬೃಹತ್ ಮತ್ತು ಭಾರೀ ಪ್ರಮಾಣದ ಮರದ ದಿಮ್ಮಿಗಳನ್ನು ಎನ್.ಡಿ.ಆರ್.ಎಫ್ ರಕ್ಷಣಾ ಸಿಬ್ಬಂದಿಗಳ ತಂಡ ತೆರವು ಮಾಡುತ್ತಿದೆ.

10ನೇ ಎನ್.ಡಿ.ಆರ್.ಎಫ್ ಚಾರ್ಲಿ ತಂಡ ಪ್ರವಾಹ ಪರಿಸ್ಥಿತಿ ಎದುರಾಗಿದ್ದ ಕೊಯನಾಡಿಗೆ ತಲುಪಿದ್ದು, ರಕ್ಷಣಾ ಕಾರ್ಯದಲ್ಲಿ ತೊಡಗಿದೆ. ಬೃಹತ್ ಗಾತ್ರದ ಮರದ ದಿಮ್ಮಿಗಳನ್ನು ಕ್ರೇನ್‌ಗಳ ಸಹಾಯದಿಂದ ತೆರವು ಮಾಡಲಾಗುತ್ತಿದ್ದು, ನದಿ ನೀರು ಸರಾಗವಾಗಿ ಹರಿಯಲು ಅನುವು ಮಾಡಿಕೊಡಲಾಗುತ್ತಿದೆ. ಪ್ರಸ್ತುತ ಸ್ಥಳದಲ್ಲಿ ಪ್ರವಾಹ ಪರಿಸ್ಥಿತಿ ಅಲ್ಪ ಮಟ್ಟಿಗೆ ತಗ್ಗಿರುವ ಬಗ್ಗೆ ವರದಿಯಾಗಿದೆ.

ಶಾಲೆಗಳಿಗೆ ರಜೆ: ಕೊಡಗು ಜಿಲ್ಲೆಯಲ್ಲಿ ಮಳೆಯ ಆರ್ಭಟ ಮುಂದುವರೆದಿರುವುದರಿಂದ ಸೋಮವಾರ (ಜು.11) ಜಿಲ್ಲೆಯ ಅಂಗನವಾಡಿ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದು, ಕಾಲೇಜುಗಳು ಎಂದಿನಂತೆ ನಡೆಯಲಿದೆ ಎಂದಿದ್ದಾರೆ. ಇದಕ್ಕೂ ಮುನ್ನ ಸೋಮವಾರ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದರಿಂದ ಜಿಲ್ಲಾಧಿಕಾರಿ ಈ ಸ್ಪಷ್ಟನೆ ನೀಡಿದ್ದಾರೆ.

ನಾಪೋಕ್ಲು ಸುತ್ತ-ಮುತ್ತ ಭಾರೀ ಮಳೆಯಿಂದ ರಸ್ತೆ ಸಂಚಾರ ಬಂದ್



ನಾಪೋಕ್ಲು, ಜು.10(ದುಗ್ಗಳ)– ಸತತವಾಗಿ ಸುರಿಯುತ್ತಿರುವ ಮಳೆಯಿಂದ ವಿವಿಧೆಡೆ ರಸ್ತೆ ಸಂಚಾರ ಸ್ಥಗಿತಗೊಂಡಿದೆ. ಇಲ್ಲಿಗೆ ಸಮೀಪದ ಚೆರಿಯಪರಂಬು ಕಲ್ಲುಮೊಟ್ಟೆ ಸಂಪರ್ಕ ರಸ್ತೆಯು ಕಾವೇರಿ ನದಿ ಪ್ರವಾಹದಿಂದ ಜಲಾವೃತಗೊಂಡಿದ್ದು ಸಂಪರ್ಕ ಸ್ಥಗಿತಗೊಂಡಿದೆ.

ನಾಪೋಕ್ಲು ಮೂರ್ನಾಡು ಸಂಪರ್ಕ ರಸ್ತೆಯ ಬೊಳಿಬಾಣೆ ಎಂಬಲ್ಲಿ ರಸ್ತೆ ಮೇಲೆ ನದಿ ನೀರು ಉಕ್ಕಿ ಹರಿಯುತ್ತಿದ್ದು ರಸ್ತೆ ಜಲಾವೃತಗೊಂಡಿದೆ. ತಗ್ಗು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಇದ್ದು ವಾಹನ ಸಂಚಾರ ಸ್ಥಗಿತಗೊಂಡಿದೆ. ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಸ್ಥಗಿತಗೊಂಡು ಜನಜೀವನ ಅಸ್ತವ್ಯಸ್ತಗೊಂಡಿದೆ.

ಕೆಲವು ದಿನಗಳಿಂದ ಸುರಿದ ಧಾರಾಕಾರ ಮಳೆಯಿಂದ ಅಲ್ಲಲ್ಲಿ ಹಾನಿ ಸಂಭವಿಸಿದ್ದು ನಾಪೋಕ್ಲು ನಿವಾಸಿ ಬೊವ್ವೇರಿಯಂಡ ರಾಜಾ ಸುಬ್ಬಯ್ಯ ಅವರ ವಾಸದ ಮನೆಯ ತಡೆಗೋಡೆ ಕುಸಿದು ಮನೆಯ ಪಕ್ಕದ ಗೋಡೌನ್ ಹಾನಿಯಾಗಿ ಗೋಡೌನ್‌ನಲ್ಲಿದ್ದ ಸಾಮಗ್ರಿಗಳು ಹಾಗೂ ಜನರೇಟರ್ ಹಾನಿಗೊಳಗಾಗಿ ಅಧಿಕ ನಷ್ಟ ಸಂಭವಿಸಿದೆ. ಸ್ಥಳಕ್ಕೆ ರೆವಿನ್ಯೂ ಅಧಿಕಾರಿ ರವಿಕುಮಾರ್ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸೋ.ಪೇಟೆಯಲ್ಲಿ ಬರೆ ಕುಸಿತ, ಮುರಿದು ಬಿದ್ದ ಮರ

ಸೋಮವಾರಪೇಟೆ, ಜು.10– ತಾಲೂಕಿನಲ್ಲಿ ನಿರಂತರ ಮಳೆಯಾಗುತ್ತಿದ್ದು, ಅಲ್ಲಲ್ಲಿ ಮರಗಳು ಮುರಿದು ಬಿದ್ದಿವೆ ಹಾಗೂ ಬರೆ ಕುಸಿಯುತ್ತಿದೆ.



ಶಾಂತಳ್ಳಿ ಹೋಬಳಿಯ ಪುಷ್ಪಗಿರಿ ಹೋಗುವ ರಸ್ತೆಯ ಪಕ್ಕ ಬರೆ ಕುಸಿದಿದ್ದ ಸ್ಥಳದಲ್ಲಿ ಭಾನುವಾರ ತಹಸೀಲ್ದಾರ್ ಗೋವಿಂದರಾಜು ನೇತೃತ್ವದಲ್ಲಿ ಜೆಸಿಬಿ ಮೂಲಕ ತೆರವು ಗೊಳಿಸಲಾಯಿತು. ಈ ಸಂದರ್ಭ ನೋಡಲ್ ಅಧಿಕಾರಿ ಸ್ವಾಮಿ, ಕಂದಾಯ ಇಲಾಖಾಧಿಕಾರಿ ದಾಮೋಧರ್, ಗ್ರಾಮ ಲೆಕ್ಕಿಗರಾದ ಸುಖಾರಾಮ್, ಕರಿಬಸವಯ್ಯ, ಉಮೇಶ, ಬೆಟ್ಟದಳ್ಳಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಇದ್ದರು.

ನಾಲ್ವರು ವಿಗ್ರಹ ಚೋರರ ಬಂಧನ

ಬಂಧಿತರಿಂದ ವಿಗ್ರಹ, ಕಾರು, ಇತರ ವಸ್ತುಗಳ ವಶ



ಮಡಿಕೇರಿ/ನಾಪೋಕ್ಲು, ಜು.10– ಮಡಿಕೇರಿ ತಾಲೂಕು ಬಲ್ಲಮಾವಟಿ ಗ್ರಾಮದ ದೇವಸ್ಥಾನದಲ್ಲಿ ನಡೆದಿದ್ದ ವಿಗ್ರಹ ಕಳವು ಪ್ರಕರಣವನ್ನು ಪತ್ತೆ ಹಚ್ಚಲಾಗಿದ್ದು, ಕೇರಳ ಮೂಲದ ನಾಲ್ವರು ಆರೋಪಿಗಳನ್ನು ಬಂಧಿಸುವಲ್ಲಿ ಮಡಿಕೇರಿ ಗ್ರಾಮಾಂತರ ಪೊಲೀಸರ ತಂಡ ಯಶಸ್ವಿಯಾಗಿದೆ.

ನಾಪೋಕ್ಲು ಠಾಣಾ ಸರಹದ್ದಿನ ಬಲ್ಲಮಾವಟಿ ಗ್ರಾಮದ ದೇವಾಲಯದಿಂದ ಶ್ರೀ ಚಾಮುಂಡೇಶ್ವರಿ ವಿಗ್ರಹವನ್ನು ಕಳ್ಳತನ ಮಾಡಿರುವ ಬಗ್ಗೆ ದೂರು ದಾಖಲಾಗಿತ್ತು. ನಾಪೋಕ್ಲು ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದರು.

ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕರ ನೇತೃತ್ವದ ಒಂದು ತಂಡ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಕೇರಳ ಮೂಲದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ 1.50 ಲಕ್ಷ ರೂ. ಮೌಲ್ಯದ ವಿಗ್ರಹ, ಕೃತ್ಯಕ್ಕೆ ಬಳಸಿದ್ದ ಮೆಟಲ್ ಡಿಟೆಕ್ಟರ್, (ಕೆಎಲ್-11-ಎಕ್ಸ್-5006) ಕಾರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ನೇತೃತ್ವದಲ್ಲಿ ನಾಪೋಕ್ಲು ಠಾಣೆ ಪಿಎಸ್‌ಐ ಎಂ.ಕೆ.ಸದಾಶಿವ, ಎಎಸ್‌ಐ ಕುಶಾಲಪ್ಪ, ಸಿಬ್ಬಂದಿಗಳಾದ ರವಿಕುಮಾರ್, ಸಾಜನ್, ಲವಕುಮಾರ್, ನವೀನ್, ಮಧುಸೂದನ್, ಮಾಚಯ್ಯ, ಶರತ್ ಕುಮಾರ್, ಗಿರೀಶ್, ಗಣೇಶ್, ರಾಜೇಶ್, ಪಂಚಲಿಂಗ, ಕಾಳಿಯಪ್ಪ, ಪ್ರೇಮ್ ಕುಮಾರ್, ಶೋಭ, ರಾಜೇಶ್, ಗಿರೀಶ್, ಪ್ರವೀಣ್, ಷರೀಫ್ ಮತ್ತು ಉಮೇಶ್ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಅಕ್ರಮ ಲಾಟರಿ ಮಾರಾಟಗಾರನ ಬಂಧನ



ವಿರಾಜಪೇಟೆ, ಜು.10– ವಿರಾಜಪೇಟೆ ಖಾಸಗಿ ಬಸ್ ನಿಲ್ದಾಣದಲ್ಲಿ ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಮಾರಾಟ ಮಾಡುತ್ತಿದ್ದವನನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಬಂಧಿಸಿ 500ಕ್ಕೂ ಹೆಚ್ಚು ಲಾಟರಿ ಟಿಕೆಟ್‌ನ್ನು ವಶಪಡಿಸಿಕೊಂಡಿದ್ದಾರೆ.

ವಿರಾಜಪೇಟೆ ಪಟ್ಟಣದಲ್ಲಿ ಅಕ್ರಮವಾಗಿ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿರುವುದಾಗಿ ದೊರೆತ ಮಾಹಿತಿ ಹಿನ್ನೆಲೆ ನಗರ ಠಾಣಾಧಿಕಾರಿ ಶ್ರೀಧರ್ ಹಾಗೂ ಸಿಬ್ಬಂದಿ ದಾಳಿ ನಡೆಸಿದಾಗ ಬಸ್ ನಿಲ್ದಾಣದಲ್ಲಿ ಕೇರಳ ರಾಜ್ಯದ ಲಾಟರಿ ಮಾರಾಟ ಮಾಡುತ್ತಿದ್ದ ಎ. ನಾಸೀರ್ ಎಂಬಾತನನ್ನು ಬಂಧಿಸಿ ಲಾಟರಿ ಟಿಕೆಟ್ ಮತ್ತು ಮಾರಾಟ ಮಾಡಿದ್ದ ರೂ. 2,800 ನಗದನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಡಿವೈಎಸ್‌ಪಿ ನಿರಂಜನ್ ರಾಜೇ ಅರಸ್ ಅವರ ಆದೇಶದಂತೆ ಸರ್ಕಲ್ ಇನ್ಸ್‌ಪೆಕ್ಟರ್ ಶಿವರುದ್ರ ಅವರ ಮಾರ್ಗದರ್ಶನದಲ್ಲಿ ಠಾಣಾಧಿಕಾರಿ ಶ್ರೀಧರ್, ಸಿಬ್ಬಂದಿಗಳಾದ ಗಿರೀಶ್, ಮುಸ್ತಾಫ್, ಗೀತಾ, ಕಾರ್ಯಾಚರಣೆಯಲ್ಲಿದ್ದರು.

ಎಂ.ರಮೇಶ್ ನಿಧನ



ನಾಪೋಕ್ಲು, ಜು.10– ವಿಜಯ ಕರ್ನಾಟಕ ಪತ್ರಿಕೆಯ ವರದಿಗಾರ ನಾಪೋಕ್ಲುವಿನ ಕುಂದ್ಯೆರಿರ ಎಂ.ರಮೇಶ್(59) ಶನಿವಾರ ನಿಧನರಾದರು. ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಅವರು ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದರು. ನಾಪೋಕ್ಲು ಹಳೆ ತಾಲೂಕಿನಲ್ಲಿ ಭಾನುವಾರ ಅಂತ್ಯಕ್ರಿಯೆ ಜರುಗಿತು. ಪತ್ನಿ, ಮೂವರು ಪುತ್ರಿಯರು ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ. ರಮೇಶ್ ನಾಪೋಕ್ಲು ಗ್ರಾಮ ಪಂಚಾಯಿತಿ ಸದಸ್ಯರಾಗಿ, ವಾಹನ ಚಾಲಕ ಮತ್ತು ಮಾಲೀಕರ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ಜಿಲ್ಲಾ ಪತ್ರಕರ್ತರ ಸಂಘದ ಸದಸ್ಯರು ಅಂತಿಮ ನಮನ ಸಲ್ಲಿಸಿದರು.

ಕುಶಾಲನಗರದಲ್ಲಿ ಮುಸ್ಲಿಂ ಬಾಂಧವರಿಂದ ಬಕ್ರೀದ್ ಆಚರಣೆ

ಕುಶಾಲನಗರ, ಜು.10– ತ್ಯಾಗ, ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಪಟ್ಟಣದಲ್ಲಿ ಆಚರಿಸಿದರು.

ಇಲ್ಲಿನ ಶಾಫಿ ಬಾಂಧವರು ಪಟ್ಟಣದ ಹಿಲಾಲ್ ಮಸೀದಿಯಲ್ಲಿ ಹಬ್ಬದ ಅಂಗವಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.ಹನಫಿ ಬಾಂಧವರು ಜಾಮಿಯಾ ಮಸೀದಿಯಲ್ಲಿ ಪ್ರಾರ್ಥನೆ ಮಾಡಿದರು.

ಹಿಲಾಲ್ ಮಸೀದಿ ಧರ್ಮಗುರು ಸೂಫಿ ಧಾರಿಮಿ ಹಾಗೂ ಜಾಮಿಯಾ ಮಸೀದಿ ಧರ್ಮಗುರು ಮೌಲಾನಾ ಮುಫ್ತಿ ಮುಹಮ್ಮದ್ ಅಮೀರ್ ಬಕ್ರೀದ್ ಹಬ್ಬದ ವಿಶಿಷ್ಟತೆಯನ್ನು ಕುರಿತು ಸಂದೇಶ ತಿಳಿಸಿದರು.

ಮುಸ್ಲಿಂ ಬಾಂಧವರು ಪರಸ್ಪರ ಬಕ್ರೀದ್ ಶುಭಾಶಯ ಗಳನ್ನು ವಿನಿಮಯ ಮಾಡಿಕೊಂಡರು.ಮುಸ್ಲಿಂ ಸಹೋದರರು, ಬಡವರಿಗೆ ಧನ ಸಹಾಯ ಮಾಡಿದರು. ಹಿಲಾಲ್ ಮಸೀದಿ ಕಾರ್ಯದರ್ಶಿ ಅಬ್ದುಲ್ ಮಜೀದ್ ಮಾತನಾಡಿ, ಈ ದಿನ ಬಲಿದಾನ ಹಬ್ಬ ಎಂದು ಹೇಳಲ್ಪಡುವ ಬಕ್ರೀದ್ ಹಬ್ಬವನ್ನು ಆಚರಿಸಲಾಯಿತು. ಎಲ್ಲರೂ ಶಾಂತಿ, ಸಹಬಾಳ್ವೆಯಿಂದ ಹಬ್ಬವನ್ನು ಆಚರಿಸುವಂತೆ ಮನವಿ ಮಾಡಿದರು.

ಪೌರಕಾರ್ಮಿಕರಿಗೆ ಸವಲತ್ತು ತಲುಪಿಸಿ; ಜಿಲ್ಲಾಧಿಕಾರಿ



ಚಾಮರಾಜನಗರ, ಜು.10–ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪೌರಕಾರ್ಮಿಕರಿಗೆ ವಸತಿ, ವೇತನ ಪಾವತಿ ಸೇರಿದಂತೆ ವಿವಿಧ ಸೌಲಭ್ಯ, ಸವಲತ್ತನ್ನು ಹೊಣೆಗಾರಿಕೆಯಿಂದ ತಲುಪಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ಮ್ಯಾನುವೆಲ್ ಸ್ಕ್ಯಾವೆಂಜರ್ ನಿಷೇಧ ಮತ್ತು ಪುನರ್ವಸತಿ ಕಾಯ್ದೆ ಅನುಷ್ಠಾನದ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ವಿವಿಧ ಗ್ರಾಮ ಪಂಚಾಯಿತಿ ಹಾಗೂ ಮಲೆ ಮಹದೇಶ್ವರಬೆಟ್ಟ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಪೌರಕಾರ್ಮಿಕರಿಗೆ ವಸತಿ ವ್ಯವಸ್ಥೆ, ವೇತನ ಪಾವತಿ, ಸಮುದಾಯ ಭವನ, ವಿಶ್ರಾಂತಿ ಗೃಹ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಹಕ್ಕುಪತ್ರ ವಿತರಣೆ, ಸ್ಮಶಾನ ಸೇರಿದಂತೆ ಇತರೆ ಸವಲತ್ತುಗಳನ್ನು ಆದಷ್ಟು ಶೀಘ್ರವಾಗಿ ತಲುಪಿಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು ಎಂದು ನಿರ್ದೇಶನ ನೀಡಿದರು.

ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಹಾಗೂ ಮಾಸ್ಟರ್ ಚೆಕ್‌ಅಪ್ ಅನ್ನು ನಿಯಮಿತವಾಗಿ ನಡೆಸಬೇಕು. ವೇತನ ಪಾವತಿಗೆ ಸಂಬಂಧಿಸಿದಂತೆ ಇಎಸ್‌ಐ ಹಾಗೂ ಪಿಎಫ್ ಕ್ರಮಬದ್ಧವಾಗಿ ಕಟಾವಣೆ ಬಗ್ಗೆ ಗಮನಿಸಬೇಕು. ಹಲವೆಡೆ ಕುಡಿಯುವ ನೀರಿಗಾಗಿ ನಿರ್ಮಿಸಿರುವ ತೊಂಬೆಗಳು ಕಳಪೆ ಕಾಮಗಾರಿಯಾಗಿದ್ದು, ಪರಿಶೀಲಿಸಿ ನೀರಿನ ತೊಂಬೆ ನಿರ್ಮಿಸಿರುವ ಏಜೆನ್ಸಿಗೆ ಅವರ ಸ್ವಂತ ಖರ್ಚಿನಲ್ಲಿ ದುರಸ್ತಿಪಡಿಸಲು ಸೂಚಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಚಾಮರಾಜನಗರ ಹಾಗೂ ಗುಂಡ್ಲುಪೇಟೆಯಲ್ಲಿ ಪೌರಕಾರ್ಮಿಕರಿಗಾಗಿ ನಿರ್ಮಿಸಿರುವ ವಿಶ್ರಾಂತಿಗೃಹ ಹಾಗೂ ಶೌಚಾಲಯ ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದೆಡೆ ಈ ಕಾಮಗಾರಿಗಳನ್ನು ತುರ್ತಾಗಿ ಮಾಡಬೇಕಾಗಿದೆ. ಗೃಹಭಾಗ್ಯ ಯೋಜನೆಯಡಿ ಜಿಲ್ಲೆಯ ಕೆಲವೆಡೆ ಸ್ವಂತ ಸೂರು ಸಿಗದೇ ಊರಿನ ಹೊರಗೆ ಟೆಂಟ್‌ನಲ್ಲಿ ವಾಸಿಸುತ್ತಿರುವುದು ಕಂಡು ಬಂದಿದೆ. ಜಿಲ್ಲೆಯ ಯಾವುದೇ ಭಾಗದಲ್ಲಿರುವ ಪೌರಕಾರ್ಮಿಕರಿಗೆ ವಸತಿಗೆ ಕೊರತೆಯಾಗದಂತೆ ಅಧಿಕಾರಿಗಳು ಜವಾಬ್ದಾರಿಯುತವಾಗಿ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಇದೇ ವೇಳೆ ಜಿಪಂ ಸಿಇಓ ಕೆ.ಎಂ. ಗಾಯತ್ರಿ ಮಾತನಾಡಿದರು. ಎಡಿಸಿ ಎಸ್. ಕಾತ್ಯಾಯಿನಿದೇವಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೆ.ಸುರೇಶ್, ನಗರಸಭೆ ಪೌರಾಯುಕ್ತ ಕರಿಬಸವಯ್ಯ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ, ಜಾಗೃತಿ ಸಮಿತಿ ಸದಸ್ಯರಾದ ಶಂಕರ್, ಗೋಪಾಲ್, ಭಾಗ್ಯ, ಪುಷ್ಪ ಲತಾ, ನಗರಸಭೆ ಕಂದಾಯ ನಿರೀಕ್ಷಕ ಶರವಣ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

ಭಾರತೀಯ ವಿದ್ಯಾರ್ಥಿ ಸಂಘದಿಂದ ಪ್ರತಿಭಾ ಪುರಸ್ಕಾರ

ಸಕಾರಾತ್ಮಕ ನಡೆಯಿಂದ ಉತ್ತಮ ಪ್ರಜೆಯಾಗಲು ಸಾಧ್ಯ

ಶಾಸಕ ಎನ್.ಮಹೇಶ್ ಅಭಿಮತ



ಚಾಮರಾಜನಗರ, ಜು.10(ಎಸ್‌ಎಸ್)– ವಿದ್ಯಾರ್ಥಿಗಳು ಜೀವನದಲ್ಲಿ ನಕಾರಾತ್ಮಕ ನಡವಳಿಕೆ ರೂಢಿಸಿಕೊಳ್ಳದೆ, ಸಕಾರಾತ್ಮಕ ನಡೆ ಅಳವಡಿಸಿಕೊಂಡಾಗ ಉತ್ತಮ ಪ್ರಜೆಯಾಗಿ ರೂಪುಗೊಳ್ಳಬಹುದು ಎಂದು ಶಾಸಕ ಎನ್. ಮಹೇಶ್ ವಿದ್ಯಾರ್ಥಿಗಳಿಗೆ ಅಭಿಪ್ರಾಯಪಟ್ಟರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ(ಬಿವಿಎಸ್) ದಿಂದ ನಡೆದ 2021-22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ಕ್ಕೂ ಹೆಚ್ಚು ದ್ವಿತೀಯ ಪಿಯುನಲ್ಲಿ ಶೇ.80ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಸಕಾರಾತ್ಮಕ ನಡಾವಳಿ ಅಳವಡಿಸಿಕೊಂಡರೆ ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಬಹುದು. ಸಾಧನೆ ಮಾಡಬಹುದು. ಅಲ್ಲದೆ ದೇಶ ಕಟ್ಟಲು ಸಾಧ್ಯವಾಗುತ್ತದೆ. ಇದನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮಸ್ಯೆ, ಪ್ರಶ್ನೆಗಳ ಕಡೆಗೆ ಗಮನ ಕೊಡಬಾರದು. ಇದರ ಬದಲು ಪರಿಹಾರ, ಉತ್ತರ ಹುಡುಕುವ ಕಡೆಗೆ ತಮ್ಮ ಚಿತ್ತ ಹರಿಸಬೇಕು ಎಂದು ಸಲಹೆ ನೀಡಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಪ್ರತಿ ಮಕ್ಕಳೂ ಶಿಕ್ಷಣ ಪಡೆಯಬೇಕು. ಶಿಕ್ಷಣಕ್ಕಾಗಿ ಇಂದು ಸರ್ಕಾರದಿಂದ ಎಲ್ಲಾ ರೀತಿಯ ಸೌಕರ್ಯ ಕಲ್ಪಿಸಲಾಗಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಸಮಾರಂಭದಲ್ಲಿ ನ್ಯಾಯಾಧೀಶ ಗಣಪತಿ ಜಿ.ಬಾದಮಿ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಎಎಸ್ಪಿ ಕೆ.ಎಸ್.ಸುಂದರ್‌ರಾಜ್, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಬಿಇಓ ಸೋಮಣ್ಣೇಗೌಡ, ನಗರಸಭೆ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಬಿಜೆಪಿ ಮುಖಂಡ ಜಿ.ನಿಜಗುಣರಾಜು, ಬಿವಿಎಸ್ ಜಿಲ್ಲಾ ಸಂಯೋಜಕ ಪರ್ವತರಾಜ್, ಜಿಪಂ ಲೆಕ್ಕಾಧಿಕಾರಿ ಗಂಗಾಧರ, ಮುಖಂಡರಾದ ಚಾ.ರಂ. ಶ್ರೀನಿವಾಸಗೌಡ, ಭವಾನಿದೇವಿ, ನಮ್ಮನೆ ಪ್ರಶಾಂತ ಸೇರಿದಂತೆ ಇತರರಿದ್ದರು.

ಚಾ.ನಗರದಲ್ಲಿ ಬಕ್ರೀದ್ ಆಚರಣೆ



ಚಾಮರಾಜನಗರ,ಜು.10(ಎಸ್‌ಎಸ್)–ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ (ಈದ್ ಉಲ್ ಅದಾ) ಅನ್ನು ನಗರ ಹಾಗೂ ತಾಲೂಕಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಜಿಟಿಜಿಟಿ ಮಳೆ ಹಿನ್ನೆಲೆಯಲ್ಲಿ ಮುಸ್ಲಿಮರು ಈದ್ಗಾ ಮೈದಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಲಾಗದ ಕಾರಣ ಮಸೀದಿಗಳಲ್ಲೇ ಪ್ರಾರ್ಥನೆ ಸಲ್ಲಿಸಿದರು. ನಗರದ ಜಾಮಿಯಾ ಮಸೀದಿ, ಮದೀನಾ ಮಸೀದಿ, ಮಸ್ಜಿದ್ ಜೊಹರಾ, ಮಸ್ಜಿದ್ ಆಝಂ, ಫಾತಿಮಾ ಮಸೀದಿ, ಮೆಕ್ಕಾ ಮಸೀದಿ ಸೇರಿದಂತೆ ಮತ್ತಿತರ ಮಸೀದಿಗಳಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು. ಹೊಸ ಬಟ್ಟೆಗಳನ್ನು ಧರಿಸಿ ಸಿಹಿಯನ್ನು ಸವಿದು ಮಸೀದಿ ಬಳಿ ಜಮಾವಣೆಗೊಂಡ ಬಾಂಧವರು, ವಿಶೇಷ ಪ್ರಾರ್ಥನೆ ಸಲ್ಲಿಸಿದರಲ್ಲದೆ, ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ಬಕ್ರೀದ್ ಅನ್ನು ಸರಳವಾಗಿ ಆಚರಿಸಲಾಯಿತು. ಧರ್ಮ ಗುರು ಅಲ್ ಹಾಫಿಜ್ ಶಹಬ್ಬಾಸ್ ಅಹಮದ್ ಅವರು ಬಕ್ರೀದ್ ಪ್ರವಚನ ನೀಡಿದರು.

ಸರ್ಕಾರಿ ನೌಕರರ ಸಮಸ್ಯೆ ಬಗೆಹರಿಸಲು ಪ್ರಯತ್ನ

ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಭರವಸೆ



ಹನೂರು, ಜು.10(ಸೋಮು)–ಸರ್ಕಾರಿ ನೌಕರರ ಕುಂದು-ಕೊರತೆ ಆಲಿಸಿ, ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಷಡಕ್ಷರಿ ಭರವಸೆ ನೀಡಿದರು.

ಹನೂರು ತಾಲೂಕು ಕೇಂದ್ರಕ್ಕೆ ಇಂದು ಆಗಮಿಸಿದ್ದ ಷಡಕ್ಷರಿ ಅವರನ್ನು ನೌಕರರ ಸಂಘದ ತಾಲೂಕು ಅಧ್ಯಕ್ಷ ಹ.ಮ.ಗುರುಸ್ವಾಮಿ ನೇತೃತ್ವದಲ್ಲಿ ಸರ್ಕಾರಿ ನೌಕರರ ವಿವಿಧ ಸಂಘಗಳ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿ ಸ್ವಾಗತಿಸಿದರು.

ಈ ವೇಳೆ ಸುದ್ದಿಗಾರರೊಡನೆ ಮಾತನಾಡಿದ ಷಡಕ್ಷರಿ ಅವರು, ರಾಜ್ಯ ಸರ್ಕಾರಿ ನೌಕರರ ಹೋರಾಟದ ಫಲ ಶೀಘ್ರದಲ್ಲೇ 7ನೇ ವೇತನ ಆಯೋಗ ಕಾರ್ಯರೂಪಕ್ಕೆ ಬರಲಿದೆ. ಈ ಬಗ್ಗೆ ಸರ್ಕಾರ ಆಗಸ್ಟ್‌ನಲ್ಲಿ ವೇತನ ಆಯೋಗ ರಚಿಸಿ ಜನವರಿ ವೇಳೆಗೆ ಕೇಂದ್ರದ ಸರಿಸಮಾನಾಗಿ ವೇತನ ಪರಿಷ್ಕರಣೆ ಮಾಡಲಾಗುವುದು ಎಂದು ಘೋಷಿಸಿದೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದರು.

ರಾಜ್ಯದಲ್ಲಿ 2.50 ಲಕ್ಷ ಎನ್‌ಪಿಎಸ್ ನೌಕರರಿದ್ದು, ಅವರ ಹಿತ ಕಾಪಾಡುವುದು ನಮ್ಮ ಜವಾಬ್ದಾರಿ. ನೂತನ ಪಿಂಚಣಿ ಯೋಜನೆ ರದ್ದು ಮಾಡುವ ದಿಸೆಯಲ್ಲಿ ಸಂಘ ಅವಿರತವಾಗಿ ಹೋರಾಡಲಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯ ಫ್ರಾನ್ಸಿಸ್, ಪ್ರೌಢಶಾಲೆ ಸಹಶಿಕ್ಷಕರ ಸಂಘದ ಅಧ್ಯಕ್ಷ ಅಶೋಕ್, ನಿರ್ದೇಶಕ ದೇವರಾಜು, ಪ್ರೌಢಶಾಲೆ ಶಿಕ್ಷಕರ ಸಂಘದ ಖಜಾಂಚಿ ಪ್ರದೀಪ್, ನಿರ್ದೇಶಕ ವೆಂಕಟೇಶ್, ಜಿಲ್ಲಾ ಪ್ರೌಢಶಾಲೆ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ವೀರಭದ್ರಸ್ವಾಮಿ, ಶಿಕ್ಷಕರಾದ ನಾಗರಾಜಪ್ಪ.ಕೆ.ಎಸ್. ಸೇರಿದಂತೆ ಶಿಕ್ಷಕರು ಮತ್ತು ವಿವಿಧ ಇಲಾಖೆಯ ನೌಕರರ ಸಂಘದ ಪದಾಧಿಕಾರಿಗಳಿದ್ದರು.

ಬೈಕ್ ಡಿಕ್ಕಿ; ಪಾದಚಾರಿ ಸಾವು

ಕೊಳ್ಳೇಗಾಲ, ಜು.10(ನಾಗೇಂದ್ರಸ್ವಾಮಿ)–ಬೈಕ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿಯೋರ್ವ ಮೃತಪಟ್ಟಿದ್ದು, ಸವಾರರು ಗಾಯಗೊಂಡಿರುವ ಘಟನೆ ತಾಲೂಕಿನ ಸತ್ತೇಗಾಲ ಗ್ರಾಮ ಸಮೀಪದಲ್ಲಿ ನಡೆದಿದೆ. ಸತ್ತೇಗಾಲ ಗ್ರಾಪಂನ ಪೌರಕಾರ್ಮಿಕ ರಾಜು(35) ಅಪಘಾತದಲ್ಲಿ ಮೃತಪಟ್ಟವರು. ರಾಮನಗರ ಜಿಲ್ಲೆ, ಕನಕಪುರ ತಾಲೂಕಿನ ವೆಂಕಟಪ್ಪ ದೊಡ್ಡಿ ಗ್ರಾಮದ ಕುಮಾರ ಹಾಗೂ ಮಹದೇವ ಗಾಯಗೊಂಡ ಬೈಕ್ ಸವಾರರು.

ರಾಜು ಅವರು ಹ್ಯಾಂಡ್‌ಪೋಸ್ಟ್ ಕಡೆಗೆ ನಡೆದು ಹೋಗುವಾಗ ಮಹದೇಶ್ವರಬೆಟ್ಟದಿಂದ ಕನಕಪುರ ಕಡೆಗೆ ಸಂಚರಿಸುತ್ತಿದ್ದ ಬೈಕ್ ಸವಾರರು ಡಿಕ್ಕಿ ಹೊಡೆದ ಪರಿಣಾಮ ರಾಜು ಸ್ಥಳದಲ್ಲೇ ಅಸುನೀಗಿದ್ದಾರೆ. ಸ್ಥಳಕ್ಕಾಗಮಿಸಿದ ಕೊಳ್ಳೇಗಾಲ ಗ್ರಾಮಾಂತರ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಗುಂಡ್ಲುಪೇಟೆ ಕ್ಷೇತ್ರದಲ್ಲಿ ಮೂಲ ಸೌಕರ್ಯಕ್ಕೆ ಆದ್ಯತೆ



ಗುಂಡ್ಲುಪೇಟೆ, ಜು.10(ಸೋಮ್.ಜಿ)–ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಮೂಲಸೌಕರ್ಯ ಒದಗಿಸಲು ಅವಿರತವಾಗಿ ಶ್ರಮಿಸಲಾಗುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ತಾಲೂಕಿನ ಬರಗಿ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಸಾಮಾನ್ಯ ವರ್ಗದವರ ಬೀದಿಗಳಿಗೆ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಅಗತ್ಯವಿರುವ ಗ್ರಾಮಗಳಿಗೆ ಆದ್ಯತೆ ಮೇರೆಗೆ ಕಾಂಕ್ರಿಟ್ ರಸ್ತೆ ಹಾಗೂ ಚರಂಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಅಲ್ಲದೆ ಕುಡಿಯುವ ನೀರು, ರಸ್ತೆ, ಮೂಲ ಸೌಕರ್ಯ ಕಲ್ಪಿಸಲು ಶ್ರಮಿಸುತ್ತಿದ್ದೇನೆ ಎಂದರು. ಈ ಸಂದರ್ಭದಲ್ಲಿ ಮಂಡಲಾಧ್ಯಕ್ಷ ಜಗದೀಶ್, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಬಾಬು, ಪಿಕಾರ್ಡ್ ನಿರ್ದೇಶಕ ಬಸವಣ್ಣ, ಎಪಿಎಂಸಿ ನಿರ್ದೇಶಕ ಅರಸಶೆಟ್ಟಿ, ಮುಖಂಡರಾದ ಮಹದೇವಪ್ಪ ರಾಜೇಶ್, ಪ್ರವೀಣ್, ಕನ್ನೇಗಾಲ ಸ್ವಾಮಿ, ಸಿ.ಮಹದೇವಪ್ರಸಾದ್, ನಾಗೇಂದ್ರ, ಮಲ್ಲೇಶ್ ವಿವಿಧ ಘಟಕ ಪದಾಧಿಕಾರಿಗಳು ಹಾಗೂ ಗ್ರಾಪಂ ಸದಸ್ಯರಿದ್ದರು.

ಇಂದು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ

ಚಾಮರಾಜನಗರ, ಜು.10–ನ್ಯಾ.ನಾಗಮೋಹನ್‌ದಾಸ್ ವರದಿ ಜಾರಿಗೆ ಒತ್ತಾಯಿಸಿ ಎಸ್‌ಸಿ, ಎಸ್‌ಟಿ ಹಾಗೂ ಶೋಷಿತ ಸಮುದಾಯಗಳಿಂದ ಜು.11ರಂದು ನಗರದ ಜಿಲ್ಲಾಡಳಿತಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ನಾಯಕರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ ತಿಳಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡುವಂತೆ ಒತ್ತಾಯಿಸಿ 142 ದಿನಗಳಿಂದ ದಾವಣಗೆರೆ ಜಿಲ್ಲೆಯ ರಾಜನಹಳ್ಳಿ ವಾಲ್ಮೀಕಿ ಮಠದ ಪ್ರಸನ್ನಾ ನಂದಪುರಿ ಸ್ವಾಮೀಜಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಸರ್ಕಾರ ಮಾತ್ರ ಕ್ರಮಕೈಗೊಂಡಿಲ್ಲ. ನ್ಯಾ.ನಾಗಮೋಹನ್‌ದಾಸ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ 2 ವರ್ಷವಾಗಿದೆ. ಶ್ರೀಗಳು ನಿರ್ಧಾರದಂತೆ ಜು.11ರಂದು ನಾಯಕ ಸಮುದಾಯವರಿಂದ ರಾಜ್ಯದ ಎಲ್ಲಾ ಜಿಲ್ಲಾಡಳಿತ ಕಚೇರಿಗೆ ಮುತ್ತಿಗೆ ಹಾಕಲಾಗುತ್ತಿದ್ದು, ಜಿಲ್ಲೆಯಲ್ಲೂ ಅಂದು ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲಾಗುವುದು ಎಂದರು.

ಅಂದು ನಗರದ ಪ್ರವಾಸಿಮಂದಿರ ಆವರಣದಲ್ಲಿ ಬೃಹತ್ ಮಟ್ಟದಲ್ಲಿ ಸಮಾವೇಶಗೊಂಡ ನಾಯಕ ಸಮುದಾಯದವರು, ಮೆರವಣಿಗೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಮುತ್ತಿಗೆ ಹಾಕುವರು ಎಂದರು. ಮೀಸಲಾತಿ ಹೆಚ್ಚಳ ಕ್ರಿಯಾ ಸಮಿತಿ ವೀಕ್ಷಕ ಅರಕಲವಾಡಿ ನಾಗೇಂದ್ರ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಜಿಪಂ ಮಾಜಿ ಸದಸ್ಯ ಕೊಪ್ಪಾಳಿ ಮಹದೇವನಾಯಕ, ನಗರಸಭಾ ಸದಸ್ಯ ಶಿವರಾಜ್, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಮುಖಂಡರಾದ ಕಪಿನಿನಾಯಕ, ಕಂಡಕ್ಟರ್ ಚಾ.ಸಿ.ಸೋಮನಾಯಕ, ಕೃಷ್ಣನಾಯಕ, ವೆಂಕಟೇಶ್ ನಾಯಕ, ಶ್ರೀನಿವಾಸನಾಯಕ, ನಾರಾಯಣನಾಯಕ, ಪುಟ್ಟವೀರ ನಾಯಕ, ಸಿದ್ದರಾಜನಾಯಕ, ಮಹೇಂದ್ರ ಹಾಜರಿದ್ದರು.

ಡಿ.ವಿಷ್ಣು ನಿಧನ



ಗುಂಡ್ಲುಪೇಟೆ,ಜು.10–ತಾಲೂಕಿನ ಬೇಗೂರಿನ ಕಂದಾಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಡಿ.ವಿಷ್ಣು (54) ಅವರು ಭಾನುವಾರ ನಿಧನರಾದರು. ಮೃತರು ಪತ್ನಿ ವಿನೋದ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ವಿಷ್ಣು ಅವರ ಅಂತ್ಯಕ್ರಿಯೆ ಜು.11ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯ ಕೋಟೆಕೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ತತ್ತರಿಸಿದ ಕೊಡಗು



ನಿಯೋಜಿಸಿ ಈ ರಸ್ತೆಯನ್ನು ಬಂದ್ ಮಾಡಲಾಗಿದೆ.

ಗುಡ್ಡ ಕುಸಿದು ಶಾಲೆಗೆ ಹಾನಿ: ದೇಚೂರು ಬಳಿ ಮನೆಯೊಂದರ ತಡೆಗೋಡೆ ಕುಸಿದು ಬಿದ್ದು ಹಾನಿಯಾಗಿದೆ. ಭಾರೀ ಮಳೆ ಗಾಳಿಗೆ ಕೊಯ ನಾಡು ಮತ್ತು ಜೋಡುಪಾಲ ಸರಕಾರಿ ಶಾಲೆಗಳ ಮೇಲೆ ಗುಡ್ಡ ಕುಸಿದು ಬಿದ್ದಿದೆ. ಪರಿಣಾಮ ಶಾಲೆಯ ಕೊಠಡಿಗಳಿಗೆ ಹಾನಿ ಯಾಗಿದೆ. ಚೆರಿಯಂಡ ಸಮೀಪ ತೊಟ್ಟಿ ಕುಂಞ ಎಂಬಲ್ಲಿ ಅನಿತಾ ಎಂಬವರ ಮನೆ ಪಕ್ಕದಲ್ಲಿ ಲಘು ಭೂ ಕುಸಿತ ಸಂಭವಿಸಿದ್ದು, ಮನೆ ಅಪಾಯ ಸ್ಥಿತಿಗೆ ತಲುಪಿದೆ. ಬಿರುನಾಣಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಲ್ಯ ಮಂಡೂರು ಹುದಿಕೇರಿ ರಸ್ತೆಗೆ ಗುಡ್ಡ ಕುಸಿದು ಬಿದ್ದಿದ್ದು, ಮಣ್ಣನ್ನು ತೆರವುಗೊಳಿಸ ಲಾಗಿದೆ. ಮಡಿಕೇರಿ ಚೆಟ್ಟಳ್ಳಿ ರಸ್ತೆಯ ಕತ್ತಲೆಕಾಡು ಬಳಿ ಭೂ ಕುಸಿತ ಸಹಿತ ಮರ ಮುರಿದು ಬಿದ್ದಿದ್ದು, ತೆರವು ಕಾರ್ಯ ನಡೆದಿದೆ. ಈ ರಸ್ತೆಯಲ್ಲಿ ಮತ್ತಷ್ಟು ಭೂ ಕುಸಿಯುವ ಲಕ್ಷಣಗಳು ಕಂಡು ಬಂದಿದೆ. ಮಕ್ಕಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಟ್ಟಿಹೊಳೆ-ಹಮ್ಮಿಯಾಲ ಸಂಪರ್ಕ ರಸ್ತೆಯ ಎರಡು ಕಡೆಗಳಲ್ಲಿ ಭೂ ಕುಸಿದು ರಸ್ತೆ ಸಂಚಾರ ವ್ಯತ್ಯಯವಾಗಿತ್ತು ಮಣ್ಣನ್ನು ತೆರವುಗೊಳಿಸುವ ಮೂಲಕ ರಸ್ತೆ ಸಂಚಾರ ಸುಗಮಗೊಳಿಸಲಾಗಿದೆ.

ವಿರಾಜಪೇಟೆ ತಾಲೂಕು ಕೆದಮುಳ್ಳೂರು, ತೋರಾ ಗ್ರಾಮ ಪ್ರಾಕೃತಿಕ ವಿಕೋಪ ಘಟಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಬೆಟ್ಟ ತಪ್ಪಲಿನ 8 ಕುಟುಂಬಗಳನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ. ತೋರಾ ಗ್ರಾಮಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಯೋಗಾನಂದ ಅಲ್ಲಿನ ನಿವಾಸಿಗಳ ಮನವೊಲಿಸಿ ತೋಮರ ಶಾಲೆಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರಕ್ಕೆ ಗ್ರಾಮಸ್ಥರನ್ನು ಸ್ಥಳಾಂತರಿಸಿದರು.

ತಟದೋರಿದ ಪ್ರವಾಹ: ಮದೆನಾಡು, ಜೋಡುಪಾಲ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ಪಯಸ್ವಿನಿ ನದಿ ಪ್ರವಾಹ ಸ್ಥಿತಿ ತಲುಪಿದೆ. ಭಾರೀ ಮಳೆಯಿಂದ ಕೊಯನಾಡು ಬಳಿ ನಿರ್ಮಿಸಲಾಗಿರುವ ಕಿಂಡಿ ಅಣೆಕಟ್ಟಿನಿಂದ 5 ಮನೆಗಳಿಗೆ ಏಕಾಏಕಿ ನೀರು ನುಗ್ಗಿದ್ದು, ಮನೆಗಳು ಜಲಾವೃತವಾಗಿವೆ. ನದಿ ನೀರಿನಲ್ಲಿ ಭಾರೀ ಪ್ರಮಾಣದಲ್ಲಿ ಮರದ ದಿಮ್ಮಿಗಳು ಕೊಚ್ಚಿ ಬಂದು ಕಿಂಡಿ ಅಣೆಕಟ್ಟಿಗೆ ಅಡ್ಡಲಾಗಿ ನಿಂತ ಪರಿಣಾಮ ನದಿ ನೀರು ಮನೆಗಳಿಗೆ ನುಗ್ಗಿ ದಿನ ಬಳಕೆ ವಸ್ತುಗಳಿಗೆ ಭಾರೀ ಹಾನಿಯಾಗಿದೆ. ಪ್ರವಾಹ ಸಂತ್ರಸ್ತರು ಸಾರ್ವಜನಿಕರ ಸಹಾಯದಿಂದ ಮನೆ ಬಳಕೆ ವಸ್ತುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಿದ್ದಾರೆ. ಸ್ಥಳಕ್ಕೆ ಜಿಲ್ಲಾಧಿಕಾರಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ರಸ್ತೆ ಸಂಪರ್ಕ ಬಂದ್: ಮಡಿಕೇರಿ ತಾಲೂಕಿನ ಹಲವೆಡೆ ಜಲ ದಿಗ್ಬಂಧನ ವಿಧಿಸಿದ್ದು, ಮುಕ್ಕೋಡ್ಲು ಗ್ರಾಮದ ಭದ್ರಕಾಳಿ ದೇವಸ್ಥಾನ ಜಲಾವೃತವಾಗಿದೆ. ಗಾಳಿಬೀಡು, ವಣಚಲು, ಕಾಲೂರು ವ್ಯಾಪ್ತಿಯಲ್ಲಿ ಭಾರಿ ಸುರಿದ ಪರಿಣಾಮ ಹೊದಕಾನ-ಮುಕ್ಕೋಡ್ಲು ಸಂಪರ್ಕ ಸೇತುವೆಯ ಮೇಲೆ 7 ಅಡಿ ಎತ್ತರದಲ್ಲಿ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತವಾಗಿದೆ. ಉಕ್ಕಿ ಹರಿಯುತ್ತಿರುವ ನದಿಯಿಂದ ಮುಕ್ಕೋಡ್ಲು ಭದ್ರಕಾಳಿ ದೇವಸ್ಥಾನದ ತೂಗು ಸೇತುವೆಗೆ ಹಾನಿಯಾಗಿದೆ. ತಗ್ಗು ಪ್ರದೇಶಗಳಲ್ಲಿರುವ ಕಾಫಿ, ಬಾಳೆ ತೋಟಗಳಿಗೆ ನೀರು ನುಗ್ಗಿದೆ. ಗಾಳಿಬೀಡುವಿನ ಒಂದನೇ ಮೊಣ್ಣಂಗೇರಿಯ ರಸ್ತೆಯಲ್ಲಿ ನೀರು ಹರಿಯುತ್ತಿದ್ದು, ರಸ್ತೆ ಸಂಪರ್ಕ ಬಂದ್ ಆಗಿದೆ. ಕಳೆದ ಕೆಲ ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದ ಗಾಳಿಬೀಡುವಿನ ಗಣಪತಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ನೀರು ತುಂಬಿದ್ದು, ರಸ್ತೆ ಸಂಪರ್ಕ ಬಂದ್ ಆಗಿದೆ.

ಕಾವೇರಿ ನದಿಯಲ್ಲಿ ಪ್ರವಾಹ ಏರ್ಪಟ್ಟಿದ್ದು, ನಾಪೋಕ್ಲು-ಮೂರ್ನಾಡು ರಸ್ತೆಯ ಬೊಳಿಬಾಣೆಯಲ್ಲಿ ರಸ್ತೆ ಜಲಾವೃತವಾಗಿದ್ದು, ವಾಹನ ಸಂಚಾರ ಬಂದ್ ಆಗಿದೆ. ನಾಪೋಕ್ಲು-ಚೆರಿಯಪರಂಬು-ಕಲ್ಲುಮೊಟ್ಟೆ ಸಂಪರ್ಕ ರಸ್ತೆಯಲ್ಲಿ ಕಾವೇರಿ ಪ್ರವಾಹ ಉಕ್ಕೇರಿದ್ದು ರಸ್ತೆ ಸಂಪರ್ಕ ಸ್ಥಗಿತವಾಗಿದೆ. ಬ್ರಹ್ಮಗಿರಿ ಬೆಟ್ಟ ಸಾಲಿನ ತಲಕಾವೇರಿ, ಭಾಗಮಂಡಲ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದ್ದು, ಭಾಗಮಂಡಲ-ಅಯ್ಯಂಗೇರಿ ರಸ್ತೆ ಸಂಪರ್ಕ ಕಳೆದ 6 ದಿನಗಳಿಂದ ಬಂದ್ ಆಗಿದೆ. ತ್ರಿವೇಣಿ ಸಂಗಮ ಕಳೆದ 10 ದಿನಗಳಿಂದ ಮುಳುಗಿದ ಸ್ಥಿತಿಯಲ್ಲಿದೆ. ಭಾಗಮಂಡಲ-ಮಡಿಕೇರಿ ರಸ್ತೆಯ ಮೇಲೆ 1 ಅಡಿ ನೀರು ಹರಿಯುತ್ತಿದ್ದು, ಸದ್ಯಕ್ಕೆ ವಾಹನ ಸಂಚಾರಕ್ಕೆ ತೊಡಕ್ಕಾಗಿಲ್ಲ. ಭಾಗಮಂಡಲ ದಲ್ಲಿ ಬೋಟ್ ಸಹಿತ ಕರ್ತವ್ಯಕ್ಕೆ ಹೋಂ ಗಾರ್ಡ್‌ಗಳ ನಿಯೋಜನೆ ಮಾಡಲಾಗಿದೆ. ಭಾಗಮಂಡಲ-ತಣ್ಣಿಮಾನಿ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿದ್ದ ಮೋರಿಯೊಂದು ನದಿ ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದು, ಗ್ರಾಮಕ್ಕೆ ಸಂಪರ್ಕ ಕಡಿತವಾಗಿದೆ. ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳೀಯರು ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ತಾತ್ಕಾಲಿಕವಾಗಿ ಮರದ ಸೇತುವೆ ನಿರ್ಮಿಸಿ ಗ್ರಾಮಸ್ಥರ ಓಡಾಟಕ್ಕೆ ವ್ಯವಸ್ಥೆ ಕಲ್ಪಿಸಿದ್ದಾರೆ.

ಕಾವೇರಿ ನದಿ ಪ್ರವಾಹ ಮಟ್ಟ ಮೀರಿ ಹರಿಯುತ್ತಿರುವ ಪರಿಣಾಮ ಮೂರ್ನಾಡು ಸಮೀಪದ ಬೇತ್ರಿ ಸೇತುವೆ ಮುಳುಗಡೆಯಾಗಲು ಕ್ಷಣಗಣನೆ ಆರಂಭವಾಗಿದೆ. ಕಾವೇರಿ ನದಿ ಪಾತ್ರದಲ್ಲಿ ಮಳೆ ಮುಂದುವರೆದಲ್ಲಿ ಮಡಿಕೇರಿ-ವಿರಾಜಪೇಟೆ ಸಂಪರ್ಕಿಸುವ ಬೇತ್ರಿ ಸೇತುವೆ ಮುಳುಗಡೆಯಾಗಲಿದ್ದು, ಎರಡು ತಾಲೂಕುಗಳ ಸಂಪರ್ಕ ಕಡಿತವಾಗುವ ಎಲ್ಲಾ ಸಾಧ್ಯತೆಗಳಿವೆ. ಕೊಯನಾಡು ಜಲ ಪ್ರವಾಹ ಸಂತ್ರಸ್ತರನ್ನು ಸಮೀಪದ ಕೊಯನಾಡು ಸರಕಾರಿ ಶಾಲೆಯಲ್ಲಿ ತೆರೆಯಲಾಗಿದ್ದ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿತ್ತು. ಆ ವೇಳೆಗೆ ಕಾಳಜಿ ಕೇಂದ್ರದ ಶಾಲೆಯ ಹಿಂಬದಿ ಗುಡ್ಡ ಕುಸಿದು ಬಿದ್ದು, ಕೊಠಡಿಗಳಿಗೆ ಹಾನಿಯಾಯಿತು. ತದನಂತರ ಸಂತ್ರಸ್ಥರನ್ನು ಕೊಯನಾಡು ಗಣಪತಿ ದೇವಾಲಯದ ಬಳಿ ಇರುವ ಸಭಾಂಗಣಕ್ಕೆ ಸ್ಥಳಾಂತರ ಮಾಡಲಾಯಿತು. ಘಟನಾ ಸ್ಥಳಕ್ಕೆ ಮಡಿಕೇರಿ ತಹಶೀಲ್ದಾರ್ ಮಹೇಶ್, ಕಂದಾಯ ಇಲಾಖಾ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೆಂಗಳೂರಿಗೆ ದ್ರೌಪದಿ ಮುರ್ಮು

ಸೇರಿದಂತೆ ಇತರರು ಉಪಸ್ಥಿತರಿದ್ದರು. ರಾಷ್ಟ್ರಪತಿ ಹುದ್ದೆಗೆ ಜುಲೈ 18 ರಂದು ಚುನಾವಣೆ ನಡೆಯಲಿದ್ದು, ಜುಲೈ 21 ರಂದು ಫಲಿತಾಂಶ ಹೊರಬೀಳಲಿದೆ. ಈ ಹಿನ್ನೆಲೆಯಲ್ಲಿ ದ್ರೌಪದಿ ಮುರ್ಮು ಅವರು ತಮ್ಮನ್ನು ಬೆಂಬಲಿಸುವಂತೆ ಕೋರಿ ರಾಜ್ಯ ಬಿಜೆಪಿ ಹಾಗೂ ಜೆಡಿಎಸ್ ನಾಯಕರಲ್ಲಿ ಮನವಿ ಮಾಡಲು ಬೆಂಗಳೂರಿಗೆ ಭೇಟಿ ನೀಡಿದ್ದಾರೆ.

ಸುಮಲತಾ ಬೆಂಬಲ: ದೌಪದಿ ಮುರ್ಮು ಅವರಿಗೆ ಸಂಸದೆ ಸುಮಲತಾ ಅಂಬರೀಶ್ ಬೆಂಬಲವನ್ನು ಸೂಚಿದ್ದಾರೆ. ಸಂಸದೆ ಸುಮಲತಾ ಅವರು ಬಿಜೆಪಿ ಸಭೆ ನಡೆಯುತ್ತಿದ್ದ ಹೋಟೆಲ್‌ಗೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಿದರು. ಈ ವೇಳೆ ಎನ್‌ಡಿಎ ಅಭ್ಯರ್ಥಿಗೆ ಬೆಂಬಲ ಸೂಚಿಸಿವುದಾಗಿ ತಿಳಿಸಿದ್ದಾರೆ. ಪಕ್ಷೇತರ ಸಂಸದೆ ಸುಮಲತಾ ಅಂಬರೀಶ್ ಅವರು ಬಿಜೆಪಿ ಸಭೆಯಲ್ಲಿ ಭಾಗಿ ವಿಚಾರವಾಗಿ ಮಾತನಾಡಿ, ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವುದಾಗಿ ಸ್ಪಷ್ಟಪಡಿಸಿದರು.

ಹೆಚ್.ಡಿ.ದೇವೇಗೌಡರ ಭೇಟಿ: ದ್ರೌಪದಿ ಮುರ್ಮು ಅವರು ಭಾನುವಾರ ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಷಿ, ಕಿಶನ ರೆಡ್ಡಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಮಾಜಿ ಸಿಎಂ ಎಚ್ ಡಿ ಕುಮಾರಸ್ವಾಮಿ, ಮಾಜಿ ಸಚಿವ ಎಚ್.ಡಿ. ರೇವಣ್ಣ ಮತ್ತು ಇತರರು ಉಪಸ್ಥಿತರಿದ್ದರು.

ಕೆಲವು ದಿನಗಳ ಹಿಂದೆ ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರು, ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಹುದ್ದೆಗೆ ಆಯ್ಕೆಯಾಗುವುದು ಖಚಿತ. ಜೆಡಿಎಸ್‌ನ ಬೆಂಬಲ ದ್ರೌಪದಿ ಅವರಿಗೆ ಅವಶ್ಯಕತೆ ಇಲ್ಲ. ಆದ್ರೂ ಬಿಜೆಪಿ ಅಭ್ಯರ್ಥಿಗೆ ಬೆಂಬಲಿಸುವುದಾಗಿ ಘೋಷಿಸಿದ್ದರು.

ಏಕರೂಪದ ಶೈಕ್ಷಣಿಕ ವೇಳಾಪಟ್ಟಿ

ಉದ್ದಗಲಕ್ಕೂ ಪದವಿ ತರಗತಿಗಳಿಗೆ ಜು.11ರಿಂದ ಪ್ರವೇಶಾತಿ ಆರಂಭವಾಗಲಿದ್ದು, ಆಗಸ್ಟ್ 17ರಿಂದ 22ರ ನಡುವೆ ತರಗತಿಗಳು ಆರಂಭವಾಗಲಿವೆ. ಇದೇ ರೀತಿಯಲ್ಲಿ, ಸ್ನಾತಕೋತ್ತರ ಕೋರ್ಸ್‌ಗಳಿಗೆ ಅ.15ರಿಂದ ಪ್ರವೇಶ ಪ್ರಕ್ರಿಯೆ ಆರಂಭವಾಗಲಿದ್ದು, ನ.2ರಿಂದ 14ರ ನಡುವೆ ತರಗತಿಗಳಿಗೆ ಚಾಲನೆ ಸಿಗಲಿದೆ ಎಂದಿದ್ದಾರೆ. ಇದುವರೆಗೂ ರಾಜ್ಯದಲ್ಲಿ ಒಂದೊಂದು ವಿ.ವಿ.ಯೂ ತಮ್ಮ ಅನುಕೂಲಕ್ಕೆ ತಕ್ಕಂತೆ ಶೈಕ್ಷಣಿಕ ವೇಳಾಪಟ್ಟಿ ರೂಪಿಸಿಕೊಳ್ಳುತ್ತಿದ್ದವು. ಇದರಿಂದಾಗಿ ವಿದ್ಯಾರ್ಥಿಗಳಿಗೆ ಗೊಂದಲ ಮತ್ತು ಅನನುಕೂಲ ಆಗುತ್ತಿತ್ತು. ಇದನ್ನು ಗಮನಿಸಿ ಏಕರೂಪದ ವೇಳಾಪಟ್ಟಿ ತರಲಾಗಿದೆ ಎಂದು ಹೇಳಿದ್ದಾರೆ.

ಈ ವೇಳಾಪಟ್ಟಿಯಲ್ಲಿ ಪ್ರತೀ ಸೆಮಿಸ್ಟರುಗಳ ಆರಂಭ, ದಂಡರಹಿತ ಮತ್ತು ದಂಡ ಸಹಿತ ಪ್ರವೇಶಾತಿ ಅವಧಿ, ಪ್ರತಿ ಸೆಮಿಸ್ಟರುಗಳಿಗೆ ಬೋಧನಾ ತರಗತಿಗಳು ಆರಂಭವಾಗುವ ಮತ್ತು ಮುಗಿಯುವ ದಿನ, ಪರೀಕ್ಷೆ ಆರಂಭವಾಗುವ ದಿನ, ಮೌಲ್ಯಮಾಪನ ಆರಂಭ ಮತ್ತು ಫಲಿತಾಂಶ ಪ್ರಕಟಣೆಯ ದಿನ, ರಜೆ ಆರಂಭದ ದಿನಗಳನ್ನೆಲ್ಲ ಸ್ಪಷ್ಟವಾಗಿ ಸೂಚಿಸಲಾಗಿದೆ ಎಂದು ವಿವರಿಸಿದ್ದಾರೆ. ಈ ಪಟ್ಟಿಯಲ್ಲಿ ಪದವಿಯ 6, ಸ್ನಾತಕೋತ್ತರ ಮಟ್ಟದ 4 ಮತ್ತು ವೃತ್ತಿಪರ ಕೋರ್ಸ್‌ಗಳ 8 ಸೆಮಿಸ್ಟರುಗಳನ್ನೂ ಗಣನೆಗೆ ತೆಗೆದುಕೊಳ್ಳಲಾಗಿದೆ. ಸೆಮಿಸ್ಟರ್ ಮುಗಿದ ನಂತರದ ರಜೆ ಅವಧಿಯಲ್ಲಿ ಪರೀಕ್ಷಾ ಕರ್ತವ್ಯ ಬಂದರೆ, ಉಪನ್ಯಾಸಕರು ಆ ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಹೇಳಿದರು.

ಹಿಂದುತ್ವ ಪ್ರತಿಪಾದಿಸುವವರಿಗೆ ಬಸವಣ್ಣನ ಪರಿಚಯಿಸಬೇಕಿದೆ

● ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಸಲಹೆ ● 'ಮಹಾತ್ಮರ ಚರಿತಾಮೃತ' ಕೃತಿ ಬಿಡುಗಡೆ

ಮೈಸೂರು, ಜು.10(ಎಸ್‌ಪಿಎನ್)- ದೇಶದಲ್ಲಿ ಹಿಂದುತ್ವದ ಪ್ರತಿಪಾದನೆ ಮಾಡುವ ಮುಖಂಡರು ಮತ್ತು ಕಾರ್ಯಕರ್ತರಿಗೆ ಬಸವಣ್ಣ ಅವರನ್ನು ಪರಿಚಯಿಸುವ ಕಾರ್ಯ ತುರ್ತು ಆಗಬೇಕಿದೆ ಎಂದು ಕೊಟ್ಟೂರಿನ ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ ಅಭಿಪ್ರಾಯಪಟ್ಟರು.

ಮೈಸೂರು ಅಗ್ರಹಾರದ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕ ವತಿಯಿಂದ ಆಯೋಜಿಸಿದ್ದ ಅಥಣಿಯ ಶ್ರೀ ಮೋಟಗಿ ಮಠಾಧ್ಯಕ್ಷ ಶ್ರೀ ಪ್ರಭು ಚನ್ನಬಸವ ಸ್ವಾಮೀಜಿ ರಚನೆಯ 'ಮಹಾತ್ಮರ ಚರಿತಾಮೃತ' ಕೃತಿ ಬಿಡುಗಡೆಗೊಳಿಸಿ ಮಾತನಾಡಿದರು.

ಬಸವಣ್ಣನವರ ತತ್ವಾದರ್ಶ ಹಾಗೂ ವಚನ ಸಾಹಿತ್ಯ ಪುನರುತ್ಥಾನ ಮಾಡದೇ ಹೋದರೆ ಪ್ರಸ್ತುತ ಸಮಾಜಕ್ಕೆ ಉಳಿಗಾಲವಿಲ್ಲ. ಬಸವಣ್ಣ ನಮಗೆ ಅತ್ಯಂತ ಮುಖ್ಯವಾದವರು. ಮಠಗಳು ಇಲ್ಲದೆ ಹೋಗಿದ್ದರೆ ನಾವು ಇಷ್ಟೊಂದು ಎತ್ತರಕ್ಕೆ ಏರಲು ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಬಸವಣ್ಣ ನಮ್ಮ-ನಿಮ್ಮೆಲ್ಲರ ಸಾರ್ವಕಾಲಿಕ ಪ್ರಧಾನಿ ಎಂದು ಪ್ರತಿಪಾದಿಸಿದರು.



ನಮ್ಮ ದೇಶದಲ್ಲಿ ಸಾಕುನಾಯಿಗಳನ್ನು ಕಾರಿನಲ್ಲಿ ಕರೆದೊಯ್ಯುತ್ತಾರೆ. ಆದರೆ, ಜನರನ್ನು ಕರೆದುಕೊಂಡು ಹೋಗಲು ಇಲ್ಲ-ಸಲ್ಲದ ಕಾರಣ ಹುಡುಕುತ್ತಾರೆ. ಇಷ್ಟೊಂದು ಅಸ್ಪೃಶ್ಯತಾ ಮನೋಭಾವವನ್ನು ಇಂದಿನ ಯುವ ಪೀಳಿಗೆ ಬೆಳೆಸಿಕೊಂಡಿದೆ. ದೇವರು ಇರುವವರೆಗೆ ದೇಶದ ಪ್ರಗತಿ ದೂರದ ಮಾತು ಎಂಬ ನಿಲುವು ಬಸವಣ್ಣನವರದ್ದು. ನಂತರ ಸಮಾಜ ಸುಧಾರಣೆಗೆ ಒತ್ತು ನೀಡಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿದರು.

ವಿಚಾರ ದೀವಿಗೆಯಾಗಿರುವ ಬಸವಣ್ಣ ನನ್ನ ಇಷ್ಟದ ದೈವ. ಹಾಗಾಗಿ ನಾನು 'ಜೈ ಬಸವೇಶ' ಎಂದು ಘೋಷಣೆ ಕೂಗುತ್ತೇನೆ. ಎಂದಿಗೂ 'ಜೈ ಶ್ರೀರಾಮ್' ಎಂಬ ಘೋಷಣೆ ಹೇಳುವುದಿಲ್ಲ. ಮನುಶಾಸ್ತ್ರದ ವಿರುದ್ಧ ಶರಣರು ರಚಿಸಿದ ಸಾಹಿತ್ಯವೇ ನನ್ನ ಸಂವಿಧಾನ. ಹಾಗಾಗಿ 12ನೇ ಶತಮಾನದ ವಚನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಹೊಸ ತಿರುವು ನೀಡಿದ ಕಾಲವದು ಎಂದು ಹೇಳಿದರು.

ಕರ್ನಾಟಕದಲ್ಲಿ ಮಠ-ಮಾನ್ಯಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆ ನೀಡಿವೆ. ಅದರಂತೆ ನನಗೂ ಮಠದಲ್ಲಿ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟ ಹಿನ್ನೆಲೆಯಲ್ಲಿ ಇಂದು ಲೇಖಕನಾಗಿ ರೂಪುಗೊಂಡೆ. ಇಲ್ಲದಿದ್ದರೆ ಕುಂಬಾರ ವೀರಪ್ಪನಾಗಿ ಉಳಿಯುತ್ತಿದ್ದೆ. ಅಲ್ಲದೆ, ವಚನ ಚಳವಳಿ ಕನ್ನಡ ನಾಡು-ನುಡಿ ಹಾಗೂ ಶೋಷಿತ ಸಮುದಾಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿವೆ ಎಂದರೆ ತಪ್ಪಾಗಲಾರದು ಎಂದ ಅವರು, ಶ್ರೀ ಪ್ರಭು ಚನ್ನಬಸವಸ್ವಾಮೀಜಿ ರಚಿಸಿದ ಮಹಾತ್ಮರ ಚರಿತಾಮೃತ ಕೃತಿ ಕೈಯಲ್ಲಿ ಹಿಡಿದು ಓದುವ ಕೃತಿಯಲ್ಲ. ಅದು ವ್ಯಾಸ ಪೀಠದಲ್ಲಿ ಇಟ್ಟು ಓದುವ ಕೃತಿ. ಇದು ಪಾರಾಯಣ ಮಾಡಬೇಕಾದ ಕೃತಿ ಎಂದು ಹರ್ಷ ವ್ಯಕ್ತಪಡಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ನಂದೀಶ್ ಹಂಚೆ ಮಾತನಾಡಿ, 'ಮಹಾತ್ಮರ ಚರಿತಾಮೃತ' ಕೃತಿಯಲ್ಲಿ 216 ವಿಭೂತಿ ಪುರುಷರ ಉಲ್ಲೇಖವಿದೆ. ಹಾಗಾಗಿ ಈ ಕೃತಿ ಅತ್ಯಂತ ಮಹತ್ವದ್ದು ಎಂದು ಬಣ್ಣಿಸಿದರು.

ಈ ವೇಳೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಂಗಳೂರಿನ ರಮಣಶ್ರೀ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಸ್. ಷಡಾಕ್ಷರಿ, ಲೇಖಕ ಶಂಕರ್ ದೇವನೂರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮ.ಗು. ಸದಾನಂದಯ್ಯ ಇದ್ದರು. ವಿಜಯಪುರದ ವೀರೇಶ್ ವಾಲಿ, ಬೆಂಗಳೂರಿನ ಕುಮಾರ ಕಣವಿ, ಮಾಲಾಶ್ರೀ ಕಣವಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಶಿವರಾತ್ರಿ ರಾಜೇಂದ್ರ ವೈಭವ ಕೃತಿ ಬಿಡುಗಡೆ; ನೃತ್ಯ ರೂಪಕ



ಮೈಸೂರು, ಜು.10(ಎಸ್‌ಪಿಎನ್)-ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿರವರ ಸಾಧನೆ ಬಿಂಬಿಸುವ 'ಶಿವರಾತ್ರಿ ರಾಜೇಂದ್ರ ವೈಭವ' ಕೃತಿ ಬಿಡುಗಡೆ ಹಾಗೂ ನೃತ್ಯ ರೂಪಕ ಕಾರ್ಯಕ್ರಮಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ನವ ಜ್ಯೋತಿ ಸಭಾಂಗಣದಲ್ಲಿ ಶಿವರಾತ್ರೀಶ್ವರ ಮಹಿಳಾ ಸಮಾಜದ ವತಿಯಿಂದ ಸಂಘದ 29ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಚಾಲನೆ ನೀಡಿ, ಮಾತನಾಡಿದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಮಾಧುಸ್ವಾಮಿ ಅವರು, ಉತ್ತಮ ಸಂಸದೀಯ ಪಟು, ಅವರ ಹಾವ-ಭಾವ ವೇಷ-ಭೂಷಣಗಳು ಸದನದ ಒಳಗೆ -ಹೊರಗೂ ಒಂದೇ ರೀತಿ ಇರುತ್ತದೆ. ಅವರು ಸದನದಲ್ಲಿ ಮಾತನಾಡುವಾಗ ಎದುರಾಳಿ ಎಷ್ಟೇ ಬುದ್ಧಿವಂತರಾಗಿದ್ದರೂ ಅವರನ್ನು ಮಾತಿನಲ್ಲೇ ಕಟ್ಟಿ ಹಾಕುವ ಕಲೆ ಕರಗತ ಮಾಡಿಕೊಂಡಿದ್ದು, ಇತರರಿಗೂ ಮಾದರಿ ಎಂದರು.

ಆಯುರ್ವೇದ ವೈದ್ಯ ಎಂ.ಜಿ.ಆರ್. ಅರಸ್ ಅವರು, ಹಲವು ವರ್ಷಗಳಿಂದ ಜನ ಸೇವೆಯಲ್ಲಿ ತೊಡಗಿದ್ದಾರೆ. ಹಾಗೆಯೇ ಚುಟುಕು ಸಾಹಿತ್ಯ ಪರಿಷತ್ತು ಮೂಲಕ ಅನೇಕ ಚುಟುಕು ಸಾಹಿತ್ಯ ಪುಸ್ತಕಗಳನ್ನು ಬಿಡುಗಡೆಗೊಳಿಸಿ, ಅನೇಕ ಯುವ ಸಾಹಿತಿಗಳನ್ನು ಪ್ರೋತ್ಸಾಹಿಸಿದ್ದಾರೆ. ಹಾಗೆಯೇ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಸಾಧನೆ ಬಿಂಬಿಸುವ ನೃತ್ಯರೂಪಕ ಕಾರ್ಯಕ್ರಮಕ್ಕೂ ಪ್ರೋತ್ಸಾಹಿಸಿರುವುದು ಉತ್ತಮ ಸಂಗತಿ ಎಂದರು.

ಶಿಂಜೊ ಅಬೆ ಅವರಿಗೆ ಸಂತಾಪ: ನಂತರ ಹತ್ಯೆಗೀಡಾದ ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಸ್ಮರಣಾರ್ಥ ಕೇಂದ್ರ ಸರ್ಕಾರ ಅವರಿಗೆ ಒಂದು ದಿನದ ಶೋಕಾಚರಣೆ ಘೋಷಣೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕಾನೂನು ಸಚಿವ ಜೆ.ಮಾಧುಸ್ವಾಮಿ ಅವರು ಒಂದು ನಿಮಿಷ ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಅರ್ಪಿಸಿದರು.

ಈ ವೇಳೆ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಚುಟುಕು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಡಾ.ಎಂ.ಜಿ.ಆರ್.ಅರಸ್, ನೃತ್ಯ ಕಲಾವಿದೆ ವಿ.ಮಾಲಿನಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಶಿವರಾತ್ರೀಶ್ವರ ಮಹಿಳಾ ಸಮಾಜದ ಅಧ್ಯಕ್ಷೆ ರತ್ನ ಹಾಲಪ್ಪಗೌಡ ಹಾಗೂ ಇತರರು ಉಪಸ್ಥಿತರಿದ್ದರು. ನಂತರ ಡಾ.ಟಿ.ಪಿ.ಹಾಲಪ್ಪಗೌಡ ಅಕಾಡೆಮಿ ಟ್ರಸ್ಟ್ ಕಲಾವಿದರು 'ಶಿವರಾತ್ರಿ ರಾಜೇಂದ್ರ ವೈಭವ' ನೃತ್ಯರೂಪಕ ಪ್ರದರ್ಶಿಸಿದರು.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರನ್ನು ಭರತ್ ಗೌಡ, ಅಪೆಕ್ಸ್ ಶ್ರೀನಿವಾಸ್, ಗ್ರಾಪಂ ಸದಸ್ಯರಾದ ಬಿ.ಶಿವಣ್ಣ, ಬೋರಪ್ಪ ಅಭಿನಂದಿಸಿದರು.

ಆ. 7ರಂದು ವಿಶ್ವಕರ್ಮ ಸೇವಾ ಟ್ರಸ್ಟ್ ಉದ್ಘಾಟನೆ

ಮೈಸೂರು,ಜು.10(ಎಂಟಿವೈ)- ವಿಶ್ವಕರ್ಮ ಸಮುದಾಯ ಸಂಘಟನಾ ಹಿತದೃಷ್ಟಿಯಿಂದ ಹೊಸದಾಗಿ ವಿಶ್ವಕರ್ಮ ಸೇವಾ ಟ್ರಸ್ಟ್ ರಚಿಸಲಾಗಿದ್ದು, ಆ.7ರಂದು ಮೈಸೂರಿನ ಕಲಾಮಂದಿರದಲ್ಲಿ ನೂತನ ಟ್ರಸ್ಟ್ ಉದ್ಘಾಟನಾ ಹಾಗೂ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಟ್ರಸ್ಟ್‌ಗೆ ಜು. 11ರಿಂದ ಸದಸ್ಯತ್ವ ನೋಂದಣಿ ಅಭಿಯಾನ ಹಮ್ಮಿಕೊಳ್ಳಲಾಗಿದೆ.



ಆ.7ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಸಂಪನ್ಮೂಲ ಮಠದ ಡಾ.ನೀಲಕಂಠಾಚಾರ್ಯ ಸಾನ್ನಿಧ್ಯ ವಹಿಸಲಿದ್ದು, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೂತನ ಟ್ರಸ್ಟ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಡಾ.ಯತೀಂದ್ರ ಸಿದ್ದರಾಮಯ್ಯ, ಎಲ್.ನಾಗೇಂದ್ರ, ಹೆಚ್.ಪಿ. ಮಂಜುನಾಥ್, ಅನಿಲ್ ಚಿಕ್ಕಮಾದು, ನಿರಂಜನ್‌ಕುಮಾರ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಪುಟ್ಟಸ್ವಾಮಾಚಾರ್, ಪದಾಧಿಕಾರಿಗಳಾದ ವರುಣ ನಿಂಗಾಚಾರ್, ಎಲ್.ಆನಂದ್, ಸತೀಶ್, ನಾಗೇಂದ್ರ ಹಾಗೂ ಶಿವಕುಮಾರ್ ಇದ್ದರು.

ಶ್ರೀ ಚಾಮುಂಡೇಶ್ವರಿ ಅಮ್ಮನವರ 19ನೇ ವರ್ಷದ ಜಾತ್ರಾ ಮಹೋತ್ಸವ

ಮೈಸೂರು, ಜು.10- ಮೈಸೂರಿನ ಕೆ.ಆರ್.ಮಿಲ್ ಕಾಲೋನಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿಯಿಂದ ಜು.11, 12ರಂದು ಶ್ರೀ ಚಾಮುಂಡೇಶ್ವರಿ ಅಮ್ಮನವರ 19ನೇ ವರ್ಷದ ಜಾತ್ರಾ ಮಹೋತ್ಸವ ಆಯೋಜಿಸಲಾಗಿದೆ.

ಜು.11ರಂದು ಸೋಮವಾರ ಮುಂಜಾನೆ ಪ್ರಾರ್ಥನೆ, ಗಣಪತಿ ಪುಣ್ಯಾಹ, ದೇವನಂದಿ, ನವಗ್ರಹ, ಪರಸ್ಪರ ತಿಲಕ ಸಂಪನ್ನ, ಗಣಪತಿ ಹೋಮ, ನವಗ್ರಹ ಹೋಮ, ಮೃತ್ಯುಂಜಯ ಹೋಮ, ಶ್ರೀದುರ್ಗಾ ಹೋಮ, ಬ್ರಹ್ಮ, ವಿಷ್ಣು, ಮಹೇಶ್ವರ ಹೋಮ, ಪೂರ್ಣಾಹುತಿ, ಪಂಚಾಮೃತ ಅಭಿಷೇಕ, ಕುಂಭಾಭಿಷೇಕ, ಅಲಂಕಾರ, ಮಹಾಮಂಗಳಾರತಿ ನೆರವೇರಲಿದ್ದು, ಮಧ್ಯಾಹ್ನ 12 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಸಂಜೆ 5 ಗಂಟೆಗೆ ಚಾಮುಂಡೇಶ್ವರಿ ಅಮ್ಮನವರ ಉತ್ಸವ ಮೂರ್ತಿಯನ್ನು ಕೆ.ಆರ್.ಮಿಲ್ ಮುಂಭಾಗದಿಂದ ಅಮ್ಮನವರ ದೇವಸ್ಥಾನಕ್ಕೆ ತರಲಾಗುವುದು. ಬಳಿಕ ಸಂಜೆ 6.30ಕ್ಕೆ ಅಮ್ಮನವರ ಉತ್ಸವ ಮೂರ್ತಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ಅಲ್ಲದೇ 7 ಗಂಟೆಗೆ ದೇವಾಲಯದ ಮುಂಭಾಗದಲ್ಲಿ ಬಾಣ ಬಿರುಸುಗಳ ಪ್ರದರ್ಶನ ಏರ್ಪಡಿಸಲಾಗಿದೆ.

ಜು.12ರಂದು ಮಂಗಳವಾರ ಬೆಳಗ್ಗೆ 6 ಗಂಟೆಗೆ ಅಮ್ಮನವರಿಗೆ ತಂಬಿಟ್ಟಿನ ಆರತಿ, ವಿಶೇಷ ಪೂಜೆ ನೆರವೇರಿಸಲಾಗುವುದು. ರಾತ್ರಿ 7 ಗಂಟೆಗೆ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ.ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಕರ್ನಾಟಕ ವಸ್ತು ಪ್ರದರ್ಶನದ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್‌ಗೌಡ, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಸಿದ್ದಲಿಂಗಪುರ ಗ್ರಾಪಂ ಅಧ್ಯಕ್ಷೆ ಶಕುಂತಲ ಸೋಮಣ್ಣ, ಜಿಪಂ, ತಾಪಂ, ಗ್ರಾಪಂ ಸದಸ್ಯರು ಹಾಗೂ ಊರಿನ ಯಜಮಾನರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


ಹತ್ತಾರು ಸಮಸ್ಯೆಗಳಿಂದ ಸೊರಗುತ್ತಿದೆ ಮೈಸೂರಿನ ಮಿನಿ ವಿಧಾನಸೌಧ

ಗಬ್ಬುನಾರುತ್ತಿದೆ ಶೌಚಾಲಯ, ಲಿಫ್ಟ್ ಕೆಟ್ಟು ವರ್ಷವಾಯ್ತು, ಕೆಟ್ಟುನಿಂತ ಕಿಯೋಸ್ಕ್, ತಾರಸಿ ಮೇಲೆ ಗಿಡ-ಗಂಟಿಗಳು, ಗೋಡೆಗಳಲ್ಲಿ ವಸ್ತಿ, ಕಸದ ರಾಶಿ



ಗಣೇಶ್ ಎ

ಮೈಸೂರು, ಜು.10-ಮೈಸೂರಿನ ಮಿನಿ ವಿಧಾನಸೌಧ, ಸರಿ ಯಾದ ನಿರ್ವಹಣೆ ಇಲ್ಲದೆ ಸೊರಗುತ್ತಿದೆ. ಮೈಸೂರಿನ ನಜರ್ ಬಾದ್‌ನಲ್ಲಿ ಎರಡು ಎಕರೆ ಪ್ರದೇಶದಲ್ಲಿ 8.2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಗೊಂಡಿರುವ ಈ ಬೃಹತ್ ಕಟ್ಟಡವು 2013ರಲ್ಲಿ ಉದ್ಘಾಟನೆ ಗೊಂಡು ಇನ್ನೂ ಒಂದು ದಶಕವನ್ನು ಪೂರೈಸಿಲ್ಲ. ಆಗಲೇ ಹಲವಾರು ಸಮಸ್ಯೆಗಳಿಂದ ಕಳೆಗುಂದುತ್ತಿದೆ.



ಟೆರೇಸ್ ಮೇಲೆ ಬೆಳೆದು ನಿಂತಿರುವ ಗಿಡಗಂಟಿಗಳು

ತಾಲೂಕು ಕಚೇರಿ, ಉಪ ನೋಂದಣಾಧಿಕಾರಿ, ತಾಲೂಕು ಪಂಚಾಯಿತಿ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಸಹಾಯಕ ಕೃಷಿ ನಿರ್ದೇಶಕರು, ಕೆನರಾ ಬ್ಯಾಂಕ್ ಸೇರಿದಂತೆ ಹಲವು ಇಲಾಖೆಗಳ ಕಚೇರಿಗಳು ಈ ಸಂಕೀರ್ಣದಲ್ಲಿದ್ದು, ದಿನನಿತ್ಯ ಸಾವಿರಾರು ಮಂದಿ ತಮ್ಮ ನಾನಾ ಕೆಲಸ-ಕಾರ್ಯಗಳಿಗೆ ಭೇಟಿ ನೀಡುತ್ತಾರೆ. ಎಲ್ಲಾ ಕಚೇರಿಗಳು ಒಂದೇ ಸೂರಿನಡಿ ಇರಬೇಕು. ಸಾರ್ವಜನಿಕರು ತಮ್ಮ ಕೆಲಸಗಳಿಗೆ ಕಚೇರಿಯಿಂದ ಕಚೇರಿಗೆ ಅಲೆಯುವುದನ್ನು ತಪ್ಪಿಸುವ ಉದ್ದೇಶದಿಂದ ಈ ಮಿನಿ ವಿಧಾನಸೌಧ ನಿರ್ಮಿಸಲಾಗಿದೆ.

ಲಿಫ್ಟ್ ಕೆಟ್ಟು ವರ್ಷವಾಯ್ತು: ಈ ಮಿನಿ ವಿಧಾನಸೌಧವು ನೆಲಮಾಳಿಗೆ, ಮೊದಲ ಅಂತಸ್ತು ಸೇರಿದಂತೆ ಎರಡು ಅಂತಸ್ತು ಹೊಂದಿದ್ದು, ಇಲ್ಲಿಗೆ ಬರುವ ಅಂಗವಿಕಲರು, ವೃದ್ಧರು, ಗರ್ಭಿಣಿ ಮಹಿಳೆಯರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಲಿಫ್ಟ್ ಸೌಲಭ್ಯ ಕಲ್ಪಿಸಲಾಗಿದೆ. ಆದರೆ ಈ ಲಿಫ್ಟ್ ಕೆಟ್ಟು ನಿಂತು ವರ್ಷವಾಯ್ತು. ಯಾರೂ ಇದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇದರಿಂದ ಇಲ್ಲಿಗೆ ಬರುವ ಅಂಗವಿಕಲರು, ವೃದ್ಧರು, ಗರ್ಭಿಣಿ ಮಹಿಳೆಯರು ಬಹಳ ಕಷ್ಟಪಟ್ಟು ಮೆಟ್ಟಿಲುಗಳ ಮೂಲಕವೇ ಮೇಲೆ ಸಾಗಬೇಕಾಗಿದೆ. ಎಂತಹ ಹೀನಾಯ ಸ್ಥಿತಿ ಎಂದು ವಯಸ್ಸಾದ ರೈತರೊಬ್ಬರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶೌಚಾಲಯಕ್ಕೆ ಬೀಗ ಹಾಕುವ ಸಿಬ್ಬಂದಿ: ಶೌಚಾಲಯಗಳು ಸೂಕ್ತ ನಿರ್ವಹಣೆ ಇಲ್ಲದೆ ಗಬ್ಬು ನಾರುತ್ತಿದ್ದು, ಇದನ್ನು ಬಳಸುವ ಸಾರ್ವಜನಿಕರಿಗೆ ರೋಗ-ರುಜಿನ ಬರುವ ಸಾಧ್ಯತೆಗಳಿವೆ. ಎಲ್ಲಾ ಮಹಡಿಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಇದೆಯಾದರೂ, ಕೆಲ ಶೌಚಾಲಯಗಳಿಗೆ ಬೀಗ ಹಾಕಲಾಗಿದೆ. ಕೇಳಿದರೆ, ಕೆಲ ಶೌಚಾಲಯಗಳನ್ನು ಇಲ್ಲಿನ ಸಿಬ್ಬಂದಿಗಳೇ ಬಳಸುತ್ತಿದ್ದು, ಅದಕ್ಕೆ ಅವರು ಬೀಗ ಹಾಕಿ ತಮ್ಮ ಜೇಬಿನಲ್ಲಿ ಇಟ್ಟುಕೊಂಡು ಹೋಗುತ್ತಿದ್ದಾರೆ. ಇದು ಯಾವ ನ್ಯಾಯ ಎಂಬುದು ಅರ್ಥವಾಗುತ್ತಿಲ್ಲ.

ಕೆಲಸಕ್ಕೆ ಬಾರದ ಸಕಾಲ ಕಿಯೋಸ್ಕ್ ಯಂತ್ರ : ಸಾರ್ವಜನಿಕರು ತಾವು ಸಲ್ಲಿಸಿದ ಅರ್ಜಿಗಳ ಸ್ಥಿತಿಯನ್ನು ತಿಳಿಯಲು ಸಕಾಲ ಕಿಯೋಸ್ಕ್ ಯಂತ್ರವನ್ನು ಕಚೇರಿಯಲ್ಲಿ ಅಳವಡಿಸಿದ್ದು, ಅದು ಕೇವಲ ಪ್ರದರ್ಶನಕ್ಕೆ ಮೀಸಲಾಗಿರುವಂತಿದೆ. ಇದರಿಂದ ಸಾರ್ವಜನಿಕರಿಗೆ ಏನೂ ಅನುಕೂಲವಾಗುತ್ತಿಲ್ಲ. ಕಟ್ಟಡದ ಆವರಣದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಾಹಿತಿಗಳನ್ನು ಸಾರ್ವಜನಿಕರಿಗೆ ತಿಳಿಸಲು ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಳವಡಿಸಿರುವ ಯಂತ್ರವು ಕಾರ್ಯ ನಿರ್ವಹಿಸದೆ ನಿಷ್ಕ್ರಿಯವಾಗಿದೆ.

ಟೆರೇಸ್‌ನಲ್ಲಿ ಗಿಡಗಂಟಿ, ಗೋಡೆಗಳಲ್ಲಿ ವಸ್ತಿ: ಮಿನಿ ವಿಧಾನಸೌಧದ ಒಳಗಡೆ ಈ ಎಲ್ಲಾ ಅವ್ಯವಸ್ಥೆ ಇದ್ದರೆ, ಇನ್ನು ಟೆರೇಸ್‌ಗೆ ತೆರಳಿ ನೋಡಿದರೆ ಅಲ್ಲಿ ಯಾವ ಮೂಲೆ ನೋಡಿದರೂ ಅರಳಿ ಮರ, ಬೇವಿನಮರ, ಹುಲ್ಲು ಸೇರಿದಂತೆ ನಾನಾ ಗಿಡಗಂಟಿಗಳು ಸುತ್ತಲೂ ಬೆಳೆದು ನಿಂತಿವೆ. ಜೊತೆಗೆ ಟೆರೇಸ್‌ನ ಸಿಮೆಂಟ್ ಗಾರೆ ಕಿತ್ತು ಬಂದಿದೆ. ಇದರ ಪರಿಣಾಮ ಕಟ್ಟಡದ ಬಹುತೇಕ ಭಾಗಗಳಲ್ಲಿ ಗೋಡೆಗಳು ವಸ್ತಿ ಹಿಡಿದು ಅಲ್ಲಲ್ಲಿ ಬಿರುಕು ಕಾಣಿಸಿಕೊಂಡು, ಲೀಕ್ ಆಗುವ ಹಂತಕ್ಕೆ ತಲುಪಿದೆ.

ಗಾಜಿನ ಪೀಸ್, ಸೆಲ್ಲಾರ್‌ನಲ್ಲಿ ಧೂಳುಹಿಡಿದ ವಾಹನಗಳು: ಕಟ್ಟಡದ ಯಾವುದೇ ಮಹಡಿಗೆ ಹೋದರೂ ಸ್ವಚ್ಛತೆ ಎಂಬುದೇ ಇಲ್ಲ. ಎತ್ತ ನೋಡಿದರೂ ವಿಲೇವಾರಿಯಾಗದ ಕಸ, ಗಾಜಿನ ಪೀಸ್ ಮತ್ತು ಹಳೆ ಟ್ಯೂಬ್‌ಲೈಟ್‌ಗಳ ರಾಶಿಯೇ ಬಿದ್ದಿದೆ. ಸೆಲ್ಲಾರ್‌ನಲ್ಲಿ ವಾಹನಗಳ ಪಾರ್ಕಿಂಗ್‌ಗೆ ಸ್ಥಳಾವಕಾಶ ಕಲ್ಪಿಸಿದ್ದು, ಅಲ್ಲಿ ಸುತ್ತಲೂ ಕಸ ಮತ್ತು ಧೂಳಿನಿಂದ ಕೂಡಿದೆ. ವಿವಿಧ ಇಲಾಖೆ ಕಾರುಗಳು ಧೂಳು ಹಿಡಿದು ನಿಂತಿವೆ. ಅವುಗಳು ಯಾವು, ಅವುಗಳ ವಾರಸುದಾರರು ಯಾರು ಎಂಬುದು ಅಲ್ಲಿರುವವರಿಗೇ ತಿಳಿದಿಲ್ಲ.


ಸಾರ್ವಜನಿಕರ ತೆರಿಗೆ ಹಣವನ್ನು ಖರ್ಚು ಮಾಡಿ ಕಟ್ಟಿರುವ ಬೃಹತ್ ಕಟ್ಟಡ ನಿರ್ವಹಣೆ ಇಲ್ಲದೆ ಸೊರಗುತ್ತಿರುವುದನ್ನು ಕಂಡ ಸಾರ್ವಜನಿಕರು, ನಮ್ಮ ಹಣ ಇಂತಹ ಅನರ್ಥಗಳಿಗೆ ಬಳಕೆ ಆಗುತ್ತಿರುವುದಕ್ಕೆ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.



ಕೆಟ್ಟು ನಿಂತಿರುವ ನೀರಿನ ಘಟಕ



ಕಾರ್ಯ ನಿರ್ವಹಿಸದ ಸಕಾಲ ಕಿಯೋಸ್ಕ್



ಶೌಚಾಲಯಗಳಿಗೆ ಬೀಗ ಹಾಕಿಕೊಂಡಿರುವ ಸಿಬ್ಬಂದಿಗಳು

ಬೆಂಗಳೂರು ನಿರ್ಮಾಣದಲ್ಲಿ ಕೆಂಪೇಗೌಡರ ದೂರದೃಷ್ಟಿಗೆ ತಲೆಬಾಗಬೇಕು

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್



ತಿ.ನರಸೀಪುರ, ಜು.10(ಎಸ್‌ಕೆ)– ಬೆಂಗಳೂರು ನಿರ್ಮಾಣದಲ್ಲಿ ಕೆಂಪೇಗೌಡ ದೂರದೃಷ್ಟಿಗೆ ನಾವೆಲ್ಲ ತಲೆಬಾಗಬೇಕು. ಬೆಂಗಳೂರು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಲು ನಾಡಪ್ರಭು ಕೆಂಪೇಗೌಡರ ಕೊಡುಗೆ ಅನನ್ಯ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.

ತಿರುಮಕೂಡಲು ಗ್ರಾಮದ ಶ್ರೀನಿವಾಸ ಕನ್ವೆನ್ಷನ್ ಸಭಾಂಗಣದಲ್ಲಿ ಭಾನುವಾರ ಸಂಜೆ ಒಕ್ಕಲಿಗರ ಸಂಘ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ 513ನೇ ಜಯಂತಿಯಲ್ಲಿ ಮಾತನಾಡಿದ ಅವರು, ವಿಜಯನಗರ ಸಾಮ್ರಾಜ್ಯದಲ್ಲಿ ಬೆಂಗಳೂರು ಪ್ರಾಂತ್ಯದ ನಾಯಕರಾಗಿದ್ದ ಕೆಂಪೇಗೌಡರು ವ್ಯಾಪಾರ ವಹಿವಾಟಿಗೆ ಆದ್ಯತೆ ನೀಡಿ, ಸಾಮರಸ್ಯದ ಆಡಳಿತ ನೀಡಿದರು. ರೈತರಿಗಾಗಿ ಸಾವಿರಾರು ಕೆರೆಗಳನ್ನು ನಿರ್ಮಿಸಿ ಅನುಕೂಲ ಮಾಡಿಕೊಟ್ಟಿದ್ದರು. ವಿವಿಧ ಸಮುದಾಯಗಳ ಅಭಿವೃದ್ಧಿಗೆ ವೃತ್ತಿ ಆಧಾರಿತವಾಗಿ ಪೇಟೆಗಳನ್ನು ನಿರ್ಮಿಸಿ ಕೊಡುವ ಮೂಲಕ ಸರ್ವ ಜನರ ಪ್ರೀತಿಗೆ ಪಾತ್ರರಾಗಿದ್ದರು. ಅವರು ಕಟ್ಟಿದ ಬೆಂಗಳೂರು ಮಾಹಿತಿ ತಂತ್ರಜ್ಞಾನದಲ್ಲಿ ಇಂದು ಜಗತ್ತಿನಲ್ಲಿ ಹೆಸರು ಪಡೆದಿದೆ ಎಂದರು.

ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್, ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದರು. ಮಾಜಿ ಪ್ರಧಾನಿ ದೇವೇಗೌಡರು ಶಿಫಾರಸ್ಸು ಮಾಡಿದರು. ಮಾಜಿ ಸಿಎಂ ಸಿದ್ದರಾಮಯ್ಯನವರು ಕೆಂಪೇಗೌಡರ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವಾಗಿ ಆಚರಿಸಲು ಆದೇಶ ನೀಡಿದರು ಎಂದರು.

ಕೆಂಪೇಗೌಡರ ದೂರದೃಷ್ಟಿಯನ್ನು ಇಂದಿನ ಯುವಕರು, ಜನಪ್ರತಿನಿಧಿಗಳು ಹೊಂದುವ ಮೂಲಕ ತಿ.ನರಸೀಪುರವನ್ನು ಮಾದರಿ ಪಟ್ಟಣವಾಗಿ ಅಭಿವೃದ್ಧಿ ಮಾಡಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಮೈಸೂರು ಪ್ರಾಂತ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ಮೈಸೂರು ವಿವಿ, ಕೆಆರ್‌ಎಸ್ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಮೈಸೂರು ಅಭಿವೃದ್ಧಿಗೆ ಒಡೆಯರ್, ಬೆಂಗಳೂರು ಅಭಿವೃದ್ಧಿಯಲ್ಲಿ ಕೆಂಪೇಗೌಡರ ಕೊಡುಗೆ ಅಪಾರ ಎಂದರು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಮಾತನಾಡಿ, ಇತಿಹಾಸ ಕಂಡ ಶ್ರೇಷ್ಠ ಆಡಳಿತಗಾರರಲ್ಲಿ ಒಬ್ಬರಾದ ಕೆಂಪೇಗೌಡರು ಒಂದು ಸಮುದಾಯಕ್ಕೆ ಸೀಮಿತರಲ್ಲ. ಅವರು ಎಲ್ಲಾ ವರ್ಗಕ್ಕೂ ಸೇರಿದವರು. ಅವರು ಕಟ್ಟಿ ಬೆಳೆಸಿದ ಬೆಂಗಳೂರು ನಮ್ಮ ಹೆಮ್ಮೆಯಾಗಿದೆ. ಅವರ ಆದರ್ಶ, ಚಿಂತನೆಗಳನ್ನು ನಾವು ಮೈಗೂಡಿಸಿಕೊಂಡು ಸಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮೈಮುಲ್ ನಿರ್ದೇಶಕ ಕೆ.ಆರ್.ಚಲುವರಾಜು, ಮಾಜಿ ಶಾಸಕ ಎಸ್.ಕೃಷ್ಣಪ್ಪ, ಟಿಎಪಿಸಿಎಂಎಸ್ ಅಧ್ಯಕ್ಷ ಸುಬ್ರಹ್ಮಣ್ಯ, ಉಪಾಧ್ಯಕ್ಷ ಮಲ್ಲಣ್ಣ, ನಿರ್ದೇಶಕ ವಾಸುದೇವ, ಕಾಂಗ್ರೆಸ್ ಹಿರಿಯ ಮುಖಂಡ ಸ್ವಾಮಿನಾಥ್‌ಗೌಡ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಮಾಜಿ ಅಧ್ಯಕ್ಷ ಎನ್.ಸೋಮಣ್ಣ, ಪಾರ್ಥಸಾರಥಿ, ಬನ್ನೂರು ರಾಮಸ್ವಾಮಿ, ಎಂಡಿಸಿಸಿ ಬ್ಯಾಂಕ್ ರಾಜಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ವಕೀಲರ ಸಂಘದ ಅಧ್ಯಕ್ಷ ಗಂಗಾಧರ್, ಬೀಡಳ್ಳಿ ಸತೀಶ್, ಮರಿಸ್ವಾಮಿ, ಫಣೀಶ್ ಕುಮಾರ್, ಡಿ.ಕೆ.ಶಿವಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಆರ್.ಚೇತನ್, ಟಿ.ಎಂ.ನಾಗಣ್ಣ, ಟಿ.ಬಿ.ಸುರೇಶ, ಜಿಪಂ ಮಾಜಿ ಸದಸ್ಯ ಮಂಜುನಾಥ್, ಉಪಾಧ್ಯಕ್ಷ ಯೋಗೇಶ್, ಕೆ.ಪಿ.ನಾಗಣ್ಣ, ಅಪ್ಸದ್ ಖಾನ್ ಮತ್ತಿತರರಿದ್ದರು.

"ಬೆಂಗಳೂರಿನ ಅಭಿವೃದ್ಧಿಗೆ ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯೇ ಕಾರಣ. ಅವರು ಕೋಟೆಗಳು, ಹಲವು ದೇವಸ್ಥಾನ, ಪೇಟೆ, ಕೆರೆಗಳನ್ನು ನಿರ್ಮಾಣ ಮಾಡಿದ ಫಲವಾಗಿ ಇಂದು ಇಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ."
-ಡಾ.ಯತೀಂದ್ರ, ಶಾಸಕ.

ನಂ.ಗೂಡು ಹದಿನಾರು ಕಾಲು ಮಂಟಪ ಭಾಗಶಃ ಮುಳುಗಡೆ




ನಂಜನಗೂಡು, ಜು.10(ಸುದರ್ಶನ್)– ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿದ್ದು, ಕಬಿನಿ ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ 25 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದ್ದು, ಕಪಿಲಾ ನದಿ ಮೈದುಂಬಿ ಹರಿಯುತ್ತಿದೆ. ಇದರಿಂದಾಗಿ ನಗರದ ಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟದ ಬಳಿ ಯಲ್ಲಿರುವ ಐತಿಹಾಸಿಕ ಹದಿನಾರು ಕಾಲು ಮಂಟಪ ಭಾಗಶಃ ಮುಳುಗಡೆಯಾಗಿದೆ.

ಜಲಾಶಯದಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಬಿಡುವ ಸಾಧ್ಯತೆ ಇರುವುದರಿಂದ ಕಪಿಲಾ ನದಿ ಆಸುಪಾಸಿನಲ್ಲಿರುವ ನಗರದ ತೋಪಿನ ಬೀದಿ, ಕುರುಬಗೇರಿ, ಗೌರಿ ಘಟ್ಟ, ಹಳ್ಳದ ಕೇರಿ, ಸರಸ್ವತಿ ಕಾಲೋನಿ ಬಡಾವಣೆ ಮುಳುಗಡೆಯಾಗುವ ಸಂಭವವಿದ್ದು, ಇಲ್ಲಿನ ಜನರು ಆತಂಕದಲ್ಲಿದ್ದಾರೆ. ನದಿಯಲ್ಲಿ ಪ್ರವಾಹ ಹೆಚ್ಚಾದರೆ, ತಗ್ಗು ಪ್ರದೇಶದಲ್ಲಿ ವಾಸವಾಗಿರುವ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ತಾಲೂಕು ಆಡಳಿತ ಸಜ್ಜಾಗಿದೆ. ಈಗಾಗಲೇ ತಾಲೂಕು ಆಡಳಿತ ಧ್ವನಿವರ್ಧಕದ ಮೂಲಕ ನದಿಯಂಚಿನಲ್ಲಿರುವ ಬಡಾವಣೆಗಳ ನಿವಾಸಿಗಳು ಮುನ್ನೆಚ್ಚರಿಕೆ ಕ್ರಮ ಅನುಸರಿಸುವಂತೆ ತಹಶೀಲ್ದಾರ್ ಎಂ.ಶಿವಮೂರ್ತಿ ಮನವಿ ಮಾಡಿದ್ದಾರೆ.

ಏತ ನೀರಾವರಿ ಯೋಜನೆ, ಕೆರೆ ಹಾಗೂ ನಾಲಾ ದುರಸ್ತಿ ಕಾಮಗಾರಿಗೆ

ಅನುದಾನ ಬಿಡುಗಡೆಗೆ ಸಚಿವರಿಗೆ ಶಾಸಕರಿಂದ ಮನವಿ



ಹುಣಸೂರು, ಜು.10(ಕೆಕೆ)– ಲಕ್ಷ್ಮಣತೀರ್ಥ ನದಿಯಿಂದ ತಾಲೂಕಿನ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ, ಕೆರೆ ಹಾಗೂ ನಾಲಾ ದುರಸ್ತಿ ಕಾಮಗಾರಿಗೆ ಅನುದಾನ ಮಂಜೂರು ಮಾಡುವಂತೆ ಶಾಸಕ ಹೆಚ್.ಪಿ.ಮಂಜುನಾಥ್ ಸಣ್ಣ ನೀರಾವರಿ, ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಗೆ ಮನವಿ ಮಾಡಿದರು.

ತಾಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿ ಮಳೆಯಿಂದ ರದ್ದಾದ ಕಾರಣ ಸಚಿವರು ಹುಣಸೂರಿಗೆ ಆಗಮಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಮೈಸೂರಿಗೆ ತೆರಳಿದ ಶಾಸಕ ಮಂಜುನಾಥ್ ಜೆಎಸ್‌ಎಸ್ ಮಠದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಚಿವ ಮಾಧುಸ್ವಾಮಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ನಂತರ ಮಾತನಾಡಿದ ಶಾಸಕರು, ತಾಲೂಕಿನ ಹನಗೋಡು ಹೋಬಳಿ ನೇರಳಕುಪ್ಪೆ, ಕಡೆಮನುಗನಹಳ್ಳಿ ಗ್ರಾಪಂ ವ್ಯಾಪ್ತಿಯ ಕಾಡಂಚಿನ ಗ್ರಾಮಗಳು ಲಕ್ಷ್ಮಣತೀರ್ಥ ನದಿ ಸಮೀಪವಿದ್ದರೂ, ಮಳೆ ಅಭಾವದಿಂದ ಸದರಿ ಗ್ರಾಮಗಳ ಕೆರೆಗಳಲ್ಲಿ ಸಾಕಷ್ಟು ನೀರಿಲ್ಲದೇ ಜನ ಜಾನುವಾರುಗಳು ಪರಿತಪಿಸುವಂತಾಗಿದೆ. ಹೀಗಾಗಿ ಈ ಭಾಗದ ಕೆರೆಗಳಿಗೆ ನೀರು ತುಂಬಿಸಿ, ಅಂತರ್ಜಲ ಮಟ್ಟ ಹೆಚ್ಚಿಸಿ, ಜನ ಜಾನುವಾರುಗಳಿಗೆ ಕುಡಿಯಲು ನೀರು ಸಿಗುವಂತೆ ಮಾಡಲು ಬಿಲ್ಲೇನಹೊಸಹಳ್ಳಿ ಹತ್ತಿರ ಲಕ್ಷ್ಮಣತೀರ್ಥ ನದಿಯಿಂದ ನೇರಳಕುಪ್ಪೆ ಕೆರೆ ಸೇರಿದಂತೆ ಇತರೆ 10 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ 2800.00 ಲಕ್ಷ ರೂ.ಗಳಿಗೆ ಡಿಪಿಆರ್ ತಯಾರಿಸಲಾಗಿದೆ. ತಾಲೂಕಿನಲ್ಲಿ ಸುರಿದ ಭಾರೀ ಮಳೆಯಿಂದ ಶಿರಿಯೂರು ನಾಲೆ, ಹುಸೇನ್‌ಪುರ ನಾಲೆ ಏರಿ ಶಿಥಿಲಗೊಂಡಿದೆ. ಎಮ್ಮೆಕೊಪ್ಪಲು ಕೆರೆಯಿಂದ ಬಳ್ಳೆಕೆರೆಗೆ ಹೋಗುವ ನಾಲೆ ಅಭಿವೃದ್ಧಿ ಆಗಬೇಕಿದೆ. ಅಲ್ಲದೆ ಆಯರಹಳ್ಳಿ ಏತ ನೀರಾವರಿ ಯೋಜನೆ ನಾಲೆ ಅಭಿವೃದ್ಧಿ, ಕೊಳಗಟ್ಟ ಏತ ನೀರಾವರಿ ಯೋಜನೆ ರಾಯನಹಳ್ಳಿಕೆರೆ ನಾಲೆ ಮಳೆಹಾನಿ ದುರಸ್ತಿ ಕಾಮಗಾರಿ, ಹೆಮ್ಮಿಗೆ ಕೆರೆ ನಾಲೆ ಮಳೆಹಾನಿ ದುರಸ್ತಿ ಕಾಮಗಾರಿ ಹಾಗೂ ಮನುಗನಹಳ್ಳಿ ಭಾಗದ ಕೆರೆಗಳಿಗೆ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಯೋಜನೆ ಸೇರಿದಂತೆ ಇತರೆ ಕಾಮಗಾರಿ ಕೈಗೊಳ್ಳಲು ಇಲಾಖೆ ವತಿಯಿಂದ ಅನುದಾನ ಮಂಜೂರು ಮಾಡಿ ಕೊಡಬೇಕೆಂದು ಸಚಿವರಿಗೆ ಮನವಿ ಮಾಡಲಾಗಿದೆ ಎಂದರು. ಈ ವೇಳೆ ಇಲಾಖೆ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಡೈರಿಗಳಿಗೆ ಶಾಸಕರ ಅನುದಾನ ನೀಡಿದ ಮೊದಲ ಶಾಸಕ ನಾನು

ಡೈರಿ ಅಧ್ಯಕ್ಷರು, ಕಾರ್ಯದರ್ಶಿಗಳ ಸಭೆಯಲ್ಲಿ ಶಾಸಕ ಸಾ.ರಾ.ಮಹೇಶ್



ಕೆ.ಆರ್.ನಗರ, ಜು.10– ಡೈರಿಗಳಿಗೆ ಶಾಸಕರ ಅನುದಾನ ನೀಡಿದ ಮೊದಲ ಶಾಸಕ ನಾನು ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಕಟ್ಟಡ ನಿರ್ಮಿಸಿಕೊಳ್ಳಲು ನಿವೇಶನ ಮತ್ತು ಅನುದಾನದ ಜೊತೆಗೆ ಸ್ವಂತ ಹಣ ನೀಡಿದ್ದೇನೆ. ಡೈರಿ ತೆರೆಯುವಾಗ ನನ್ನಿಂದ ಎಲ್ಲಾ ರೀತಿಯ ಸಹಕಾರ ಪಡೆದು ನಂತರ ನನಗೆ ದ್ರೋಹ ಮಾಡುವವರೇ ಹೆಚ್ಚು. ಸಹಾಯ ಪಡೆದು ಕೃತಜ್ಞತೆ ತೋರದ ಜನರಿರುವುದರಿಂದಲೇ ಪ್ರಕೃತಿ ವಿಕೋಪಗಳು ನಡೆಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಸು ಕೊಳ್ಳಲು ಬ್ಯಾಂಕ್‌ನಿಂದ 60 ಸಾವಿರ ರೂ. ಸಾಲ ನೀಡಲಾಗುತ್ತಿದೆ. ಸಾಲ ಕೊಡಿಸುವಾಗ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಜಾತಿ, ಪಕ್ಷ ನೋಡದೇ ದುರ್ಬಲ ವರ್ಗದವರಿಗೆ ಆದ್ಯತೆ ನೀಡಿ. ನಂತರ 2ನೇ ಕಂತಿನಲ್ಲಿ ಉಳಿದವರಿಗೆ ಮತ್ತೆ ಸಾಲ ನೀಡಲಾಗುವುದು ಎಂದರು.

ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ 154 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಅವುಗಳಲ್ಲಿ 63 ಮಹಿಳಾ, 91 ಸಾಮಾನ್ಯ ಸಹಕಾರ ಸಂಘಗಳಿವೆ. ಈ ಎಲ್ಲಾ ಸಂಘಗಳ ಫಲಾನುಭವಿಗಳ ಯಶಸ್ವಿನಿ ಯೋಜನೆಗೆ, ಮಕ್ಕಳಿಗೆ ನೋಟ್ ಬುಕ್ ವಿತರಣೆ, ಆಂಬುಲೆನ್ಸ್, ಮಹಿಳಾ ಸಂಘಗಳಿಗೆ ಸಹಾಯಧನ ಮತ್ತು ಅಂಗವಿಕಲರಿಗೆ ವಿಮಾ ಬಾಂಡ್ ಹೀಗೆ ಹತ್ತು ಹಲವು ಕಾರ್ಯಕ್ರಮಗಳಿಗೆ ಸ್ವಂತ ಹಣದಿಂದ ಸಹಾಯ ಮಾಡುತ್ತಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕ ವಿಜಯ್‌ಕುಮಾರ್, ಎಸ್‌ಬಿಐ ಹಿರಿಯ ವ್ಯವಸ್ಥಾಪಕ ಕುಲಕರ್ಣಿ, ಜೆಡಿಎಸ್‌ನ ಮುಖಂಡರಾದ ರಾಜಲಕ್ಷ್ಮೀ, ಸಣ್ಣತಮ್ಮೇಗೌಡ, ಡೈರಿ ಪ್ರಕಾಶ್, ಚಿಕ್ಕವೀರ್, ಎಂ.ಟಿ.ಕುಮಾರ್, ಕುಮಾರ್, ಮಹೇಶ್, ಮಹದೇವ್, ಪೂರ್ಣಿಮಾ, ಗೋಪಾಲ್, ಕಾಂತ್ ರಾಜ್ ಸೇರಿದಂತೆ ಇನ್ನಿತರರಿದ್ದರು.

ಪ್ರಾರ್ಥನೆಯೊಂದಿಗೆ ಬಕ್ರೀದ್ ಆಚರಣೆ



ಸರಗೂರು, ಜು.10(ನಾಗೇಶ್)– ಪಟ್ಟಣದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮಾಡುವ ಮೂಲಕ ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಜಾಮೀಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್, ನೂರ್ ಮಸೀದಿ ಗುರುಗಳಾದ ಅಬ್ದುಲ್ ಜಲೀಲ್ ಮಾತನಾಡಿ, ಹಬ್ಬಗಳ ಆಚರಣೆಯಿಂದ ಉತ್ತಮ ಬಾಂಧವ್ಯ ಬೆಳೆಯುತ್ತದೆ. ಎಲ್ಲರೂ ಸಹಬಾಳ್ವೆಯಿಂದ ಬದುಕಬೇಕು. ಎಲ್ಲರಿಗೂ ಬಕ್ರೀದ್ ಹಬ್ಬದ ಶುಭಾಶಯಗಳು. ಎಲ್ಲರಿಗೂ ಅಲ್ಲಾ ಒಳಿತು ಮಾಡಲಿ ಎಂದರು.

ಹಬ್ಬದ ಅಂಗವಾಗಿ ಪುಟ್ಟ ಮಕ್ಕಳು ಹೊಸ ಬಟ್ಟೆ ತೊಟ್ಟು ಹಬ್ಬಕ್ಕೆ ಮೆರಗು ತಂದರು. ಈ ವೇಳೆ ಮುಖಂಡರಾದ ಅಬ್ದುಲ್ ಮಜೀದ್, ಹಾಜಿ ಅಬ್ದುಲ್ ಅಜೀಜ್, ಪಪಂ ಮಾಜಿ ಸದಸ್ಯ ಮಹಮದ್ ಉಸ್ಮಾನ್, ಮುಖಂಡರಾದ ಮುಜೀಬ್, ಜಲೀಲ್, ಇಸ್ಮಾಯಿಲ್, ಸುಭಾನ್, ನಾಸೀರ್, ಜಾವೀದ್, ಇಬ್ರಾಹಿಂ, ಮೈದೀನ್, ಸಲಾಮ್, ಇದಾಯತ್, ಮುಸ್ತಾಫ, ಅಕ್ಬರ್, ರಫಿ, ಮಫಿ, ಎಂ.ಹಾದಿ, ಮುಸ್ಲಿಂ ಬಾಂಧವರು ಇದ್ದರು.

ಚಿಕ್ಕನಂದಿ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ

ಹಂಪಾಪುರ, ಜು.10(ರಾಜೇಶ್)– ಹೆಚ್.ಡಿ.ಕೋಟೆ ತಾಲೂಕಿನ ಗಡಿಗ್ರಾಮ



ಚಿಕ್ಕನಂದಿ ಗ್ರಾಮದಲ್ಲಿ ಭಾನುವಾರ ಮುಂಜಾನೆ ಹುಲಿ ಪ್ರತ್ಯಕ್ಷವಾಗಿದ್ದು, ಗ್ರಾಮದ ಜನತೆ ಆತಂಕಕ್ಕೆ ಒಳಗಾಗಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿಸಿಎಫ್ ಕೆ.ಕಮಲ ಕರಿಕಾಳನ್, ಆರ್‌ಎಫ್‌ಓ ಮಧು ಪರಿಶೀಲನೆ ನಡೆಸಿ ಹುಲಿ ಸೆರೆಗೆ ಬೋನು ಇರಿಸಿದ್ದಾರೆ.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ಕಳೆದ ಮೂರ್‍ನಾಲ್ಕು ದಿನಗಳಿಂದ ಗ್ರಾಮದ ಸುತ್ತಮುತ್ತ ಹುಲಿ ಪ್ರತ್ಯಕ್ಷವಾಗಿದೆ. ಇದರಿಂದ ಗ್ರಾಮಸ್ಥರು ತಮ್ಮ ಜಮೀನುಗಳಿಗೆ ತೆರಳಲು ಭಯಗೊಂಡಿದ್ದಾರೆ. ಹೀಗಾಗಿ ಕೂಡಲೇ ಹುಲಿ ಸೆರೆ ಹಿಡಿಯಬೇಕು ಎಂದು ಗ್ರಾಮದ ನಿವಾಸಿ ಕೆಂಪೇಗೌಡ ಸೇರಿದಂತೆ ಇನ್ನಿತರರು ಒತ್ತಾಯಿಸಿದ್ದಾರೆ.

ಬೈಲುಕುಪ್ಪೆಯಲ್ಲಿ ಸಂಭ್ರಮದ ಬಕ್ರೀದ್

ಬೈಲುಕುಪ್ಪೆ, ಜು.10(ರಾಜೇಶ್)– ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯಲ್ಲಿ ಬಕ್ರೀದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಮಳೆ ಹಿನ್ನೆಲೆಯಲ್ಲಿ ಮುಸ್ಲಿಂ ಬಾಂಧವರು ಈದ್ಗಾ ಮೈದಾನಕ್ಕೆ ತೆರಳದೆ ಜಾಮಿಯಾ ಮಸೀದಿಯಲ್ಲೇ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಬಳಿಕ ವಿಶೇಷ ನವಾಜ್‌ನಲ್ಲಿ ಭಾಗವಹಿಸಿದ ಮುಸ್ಲಿಂ ಬಾಂಧವರು ಮನೆಗೆ ಹಿಂತಿರುಗಿ ಪರಸ್ಪರ ಈದ್ ಮುಬಾರಕ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.



ನಿರಂತರ ಮಳೆ: ಮನೆ ಗೋಡೆ ಕುಸಿತ

ನಂಜನಗೂಡು, ಜು.10(ಸುದರ್ಶನ್)– ನಿರಂತರ ಮಳೆಗೆ ಮನೆ



ಗೋಡೆ ಕುಸಿದಿರುವ ಘಟನೆ ತಾಲೂಕಿನ ಬ್ಯಾಳರಾಹುಂಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಶಿವಮಣಿ ಅವರಿಗೆ ಸೇರಿದ ಮನೆ ಗೋಡೆ ಕುಸಿದಿರುವುದು. ಕಳೆದ ಮೂರ್‍ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಶಿಥಿಲಗೊಂಡಿದ್ದ ಗೋಡೆ ಶನಿವಾರ ರಾತ್ರಿ ಕುಸಿದಿದ್ದು, ಅದೃಷ್ಟವಶಾತ್ ಮನೆಯ ಸದಸ್ಯರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ಮನೆಯಲ್ಲಿದ್ದ ದವಸ ಧಾನ್ಯ, ಎಲೆಕ್ಟ್ರಾನಿಕ್ ಉಪಕರಣ ಸೇರಿದಂತೆ ದಿನಬಳಕೆಯ ವಸ್ತುಗಳು ನಾಶವಾಗಿ ಅಪಾರ ನಷ್ಟ ಸಂಭವಿಸಿದೆ ಎನ್ನಲಾಗಿದೆ. ಕೂಡಲೇ ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಪರಿಹಾರ ಒದಗಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿ ಸಮಸ್ಯೆ ಪರಿಹರಿಸಲು ಪ್ರಯತ್ನ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಸ್ ವಿಜಯವರ್ಗಿ



ಹೆಚ್.ಡಿ.ಕೋಟೆ, ಜು.10(ಮಂಜು)– ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತಾಲೂಕಿನ ಗಡಿಭಾಗ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಸ್ ವಿಜಯವರ್ಗಿ ತಿಳಿಸಿದರು.

ತಾಲೂಕಿನ ಗಡಿಭಾಗವಾದ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಮಚ್ಚೂರು ಗ್ರಾಮದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳ ಫಲಾನುಭವಿಗಳೊಡನೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡಜನರ ಸಮಸ್ಯೆ ತಿಳಿದಿರುವ ಪ್ರಧಾನಿ ಮೋದಿ ಅವರು ಅವರಿಗಾಗಿಯೇ ಹಲವು ಯೋಜನೆ ಜಾರಿಗೆ ತಂದರು. ಅದರಲ್ಲಿ ಪ್ರಮುಖವಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆ, ಉಜ್ವಲ ಯೋಜನೆ ಮೂಲಕ ದೇಶದ 10 ಕೋಟಿ ಮಹಿಳೆಯರಿಗೆ ಉಚಿತವಾಗಿ ಗ್ಯಾಸ್ ವಿತರಣೆ ಮಾಡಿದ್ದಾರೆ. ಈ ಯೋಜನೆಗಳು ನಿಮಗೆ ತಲುಪದಿದ್ದಲ್ಲಿ ಮಾಹಿತಿ ನೀಡಿ ನಾನು ಸರ್ಕಾರದೊಂದಿಗೆ ಚರ್ಚಿಸುತ್ತೇನೆ ಎಂದರು.

ಈ ವೇಳೆ ಸ್ಥಳದಲ್ಲಿದ್ದ ಗ್ರಾಮಸ್ಥರು ನಮ್ಮ ಭಾಗದಲ್ಲಿ ಕಾಡಾನೆ ಹಾವಳಿ ಹೆಚ್ಚಾಗಿ ಬೆಳೆದ ಅರ್ಧದಷ್ಟು ಬೆಳೆ ಕೈ ಸೇರುತ್ತಿಲ್ಲ. ಮನೆ ಮೇಲೆ ದಾಳಿ ಮಾಡುತ್ತಿವೆ. ನಾವು ಈ ಭಾಗದಲ್ಲಿ 75 ವರ್ಷಗಳಿಂದ ವಾಸ ಮಾಡು ತ್ತಿದ್ದು, ಈವರೆಗೂ ಹಕ್ಕು ಪತ್ರ ನೀಡಿಲ್ಲ. ನಮ್ಮಲ್ಲಿ ಸಾಕಷ್ಟು ಕುಟುಂಬಗಳಿಗೆ ಮನೆ ಇಲ್ಲ. ಕನಿಷ್ಠ ಮೂಲ ಸೌಕರ್ಯ ಒದಗಿಸಿಲ್ಲ. ಯಾವುದೇ ಕಚೇರಿಗೆ ಅಥವಾ ತುರ್ತು ಪರಿಸ್ಥಿತಿಯಲ್ಲಿ ಆಸ್ಪತ್ರೆಗೆ ತೆರಳಲು ಸಾರಿಗೆ ವ್ಯವಸ್ಥೆ ಇಲ್ಲ. ಈ ಸಮಸ್ಯೆಗಳನ್ನು ಪರಿಹರಿಸುವುದಾಗಿ ಚುನಾಯಿತ ಪ್ರತಿನಿಧಿಗಳು ಭರವಸೆ ನೀಡುತ್ತಾರೆಯೇ ವಿನಹಃ ಪರಿಹಾರ ಒದಗಿಸಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು.

ಸಮಸ್ಯೆ ಆಲಿಸಿ ಮಾತನಾಡಿದ ಕೈಲಾಸ್ ವಿಜಯವರ್ಗಿ, ಪ್ರಧಾನಿ ಮೋದಿಯವರು ಬಡವರ ಕಲ್ಯಾಣಕ್ಕಾಗಿ ಜಾರಿಗೊಳಿಸಿದ ಯೋಜನೆಗಳು ಜನರಿಗೆ ತಲುಪಿವೆಯೇ ಎಂಬುದನ್ನು ಪರಿಶೀಲಿಸಲು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನು ಕೂಡಲೇ ನಿಮ್ಮ ಸಮಸ್ಯೆಗಳನ್ನು ಒಂದು ಟಿಪ್ಪಣಿ ಮಾಡಿ ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿಗಳಿಗೆ ತಲುಪಿಸಿ ಸಮಸ್ಯೆ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಕಾಡು ಪ್ರಾಣಿಗಳನ್ನು ಕೊಲ್ಲಲು ಸಾಧ್ಯವಿಲ್ಲ. ಅವುಗಳ ಜೀವದ ರಕ್ಷಣೆ ನಮ್ಮ ಆದ್ಯ ಕರ್ತವ್ಯ. ಕಾಡುಪ್ರಾಣಿಗಳ ಹಾವಳಿ ದೇಶದಲ್ಲಿ ಸಾಕಷ್ಟು ಕಡೆ ಇದೆ. ಈ ಬಗ್ಗೆ ಚರ್ಚಿಸಿ ಸೂಕ್ತ ಪರಿಹಾರ ಸಿಗುವಂತೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಹಾಗೂ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮುನಿರಾಜ್‌ಗೌಡ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಯೋಗಾನಂದ, ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ಗುರುಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಗಿರೀಶ್, ಯೋಗೇಶ್, ಮಹಿಳಾ ಮೋರ್ಚಾ ಅಧ್ಯಕ್ಷೆ ನಂದಿನಿ, ಜಿಪಂ ಮಾಜಿ ಸದಸ್ಯ ಹೆಚ್.ಸಿ.ಲಕ್ಷ್ಮಣ್, ಮುಖಂಡರಾದ ಪರೀಕ್ಷಿತರಾಜ್ ಅರಸ್, ಸತೀಶ್ ಬಹದ್ದೂರ್, ಮಹೇಶ್, ನಂದೀಶ್, ಮಂಜು, ನವೀನ್, ಮಾದೇಶ್, ಲೋಕೇಶ್, ದೀಪು ಗ್ರಾಪಂ ಉಪಾಧ್ಯಕ್ಷ ವೆಂಕಟೇಗೌಡ, ಗ್ರಾಪಂ ಸದಸ್ಯರು ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಹರಿಕಥೆ ಅಲ್ಲ ಗಿರಿಕಥೆ (ಕ): ಬೆ.10.30ಕ್ಕೆ, ಖಿದಾಫೀಸ್ (ಹಿಂ): ಮ.1.10ಕ್ಕೆ, ರಾ.10.10ಕ್ಕೆ, 777 ಚಾರ್ಲಿ (ಕ): ಸಂ.4ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 2	ಶುಗರ್‌ಲೆಸ್ (ಕ): ಬೆ.10.50ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.1.25ಕ್ಕೆ, ತೂತು ಮಡಿಕೆ (ಕ): ಸಂ.4.15ಕ್ಕೆ, ಹೋಪ್ (ಕ): ರಾ.7ಕ್ಕೆ, 777 ಚಾರ್ಲಿ (ಕ): ರಾ.9.55ಕ್ಕೆ.
ಸ್ಕ್ರೀನ್ 3	ನಮ್ ಹುಡುಗರು (ಕ): ಬೆ.10.05ಕ್ಕೆ, ಗಿರ್ಕಿ (ಕ): ಮ.1.10ಕ್ಕೆ, ಬೈರಾಗಿ (ಕ): ಸಂ.4.10ಕ್ಕೆ, ರಾಕೆಟ್ರಿ (ಹಿಂ): ಸಂ.6.55ಕ್ಕೆ, ಕಡುವ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.9.55ಕ್ಕೆ, ಮ.12.15ಕ್ಕೆ, ಮ.2.40ಕ್ಕೆ, ಸಂ.5.05ಕ್ಕೆ, ರಾ.7.35ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.9.25, ಮ.12ಕ್ಕೆ, ಮ.2.35ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಥಾರ್: ಲವ್ ಅಂಡ್ ಥಂಡರ್ (ಇಂ): ಬೆ.10.25, ಸಂ.6.50ಕ್ಕೆ, ರಾ.9.30ಕ್ಕೆ, ಶುಗರ್‌ಲೆಸ್ (ಕ): ಮ.1ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.3.50ಕ್ಕೆ.
ಸ್ಕ್ರೀನ್ 3	ಖಿದಾಫೀಸ್ (ಹಿಂ): ಬೆ.10.05ಕ್ಕೆ, ರಾ.7.20ಕ್ಕೆ, ಬೈರಾಗಿ (ಕ): ಮ.1.05ಕ್ಕೆ, 777 ಚಾರ್ಲಿ (ಕ): ಸಂ.4ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ಗಿರ್ಕಿ (ಕ): ಬೆ.10.15ಕ್ಕೆ, ಭೋಟಾ ಬಾಂಬೆ (ಕ): ಮ.1.10ಕ್ಕೆ, ತೂತು ಮಡಿಕೆ (ಕ): ಸಂ.4.15ಕ್ಕೆ, ಹೋಪ್ (ಕ): ರಾ.7ಕ್ಕೆ, ನಮ್ಮ ಹುಡುಗರು (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಶುಗರ್‌ಲೆಸ್ (ಕ): ಬೆ.10.30ಕ್ಕೆ, ಗಿರ್ಕಿ (ಕ): ಮ.1ಕ್ಕೆ, ವೆಡ್ಡಿಂಗ್ ಗಿಫ್ಟ್ (ಕ): ಮ.3.50ಕ್ಕೆ, ಹೋಪ್ (ಕ): ಸಂ.6.30ಕ್ಕೆ, ಖಿದಾಫೀಸ್ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಅಂಗೈಲಿ ಅಕ್ಷರ (ಕ): ಬೆ.10.45ಕ್ಕೆ, ತೂತ್ ಮಡಿಕೆ (ಕ): ಮ.1.15ಕ್ಕೆ, ಖಿದಾಫೀಸ್ (ಹಿಂ): ಸಂ.4ಕ್ಕೆ, ಬೈರಾಗಿ (ಕ): ಸಂ.6.45ಕ್ಕೆ, ರಾಕೆಟ್ರಿ (ಹಿಂ): ರಾ.9.20ಕ್ಕೆ
ಸ್ಕ್ರೀನ್ 3	ಥಾರ್: ಲವ್ ಅಂಡ್ ಥಂಡರ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಖಿದಾಫೀಸ್ (ಹಿಂ): ಬೆ.10.15ಕ್ಕೆ, 777 ಚಾರ್ಲಿ (ಕ): ಮ.1ಕ್ಕೆ, ರಾ.9.15ಕ್ಕೆ, ಬೈರಾಗಿ (ಕ): ಸಂ.4.05ಕ್ಕೆ, ತೂತ್ ಮಡಿಕೆ (ಕ): ಸಂ.6.45ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS


ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಬೈರಾಗಿ (ಕ): ಬೆ.10ಕ್ಕೆ, ಮ.12.15ಕ್ಕೆ, ಮ.1ಕ್ಕೆ, ರಾ.7.20ಕ್ಕೆ, ರಾ.10.15ಕ್ಕೆ, 777 ಚಾರ್ಲಿ (ಕ): ಮ.3.55ಕ್ಕೆ, ಸಂ.6.50ಕ್ಕೆ, ರಾ.10.15ಕ್ಕೆ, ಹರಿಕಥೆ ಅಲ್ಲ ಗಿರಿಕಥೆ (ಕ): ಸಂ.4.05ಕ್ಕೆ, ತ್ರಿವಿಕ್ರಮ (ಕ): ಮ.12.50ಕ್ಕೆ, ಮಿನಿಯನ್ಸ್ (3ಡಿ)(ಇಂ): ಬೆ.10.05ಕ್ಕೆ, ಮ.3.30ಕ್ಕೆ, ಸಂ.5.40ಕ್ಕೆ, ರಾ.7.50ಕ್ಕೆ, ರಾ.10ಕ್ಕೆ, ರಾಷ್ಟ್ರ ಕವಚ ಓಂ(ಹಿಂ): ಬೆ.9.40ಕ್ಕೆ, ಮ.12.40ಕ್ಕೆ, ರಾ.7ಕ್ಕೆ, ರಾ.10.10ಕ್ಕೆ, ಜಗ್‌ಜಗ್ ಜೀಯೊ (ಹಿಂ): ಮ.12.15ಕ್ಕೆ, ಪಕ್ಕ ಕಮರ್ಷಿಯಲ್ (ತೆ): ಬೆ.9ಕ್ಕೆ, ಸಂ.4.40ಕ್ಕೆ, ಸಂ.6.55ಕ್ಕೆ, ರಾ.10ಕ್ಕೆ, ರಾಕೆಟ್ರಿ (ತ): ಮ.3.10ಕ್ಕೆ, ವಿಕ್ರಂ (ತ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪಕ್ಕ ಕಮರ್ಷಿಯಲ್ (ತೆ) ಶುಗರ್‌ಲೆಸ್(ಕ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಚಾರ್ಲಿ–777 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಖಿದಾಫಿಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಗಿರಕಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಮ್ಮ ಹುಡುಗರು (ಕ)	4 ಪ್ರದರ್ಶನಗಳು
ಸಂಗಂ	
ಭೈರಾಗಿ (ಕ)	4 ಪ್ರದರ್ಶನಗಳು
ಲಿಡೋ	
ಗಿಲ್ಕೀ (ಕ) ಖಿದಾಫೀಸ್(ಹಿ)	2 ಪ್ರದರ್ಶನಗಳು
ತಿಬ್ಬಾದೇವಿ	
ಯಾನೈ (ತ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಥೋರ್ ಲವ್ ಅಂಡ್ ಥಂಡರ್ (ಇ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಶುಗರ್‌ಲೆಸ್, ತೂತುಮಡಿಕೆ (ಕ)	2 ಪ್ರದರ್ಶನಗಳು



ಜಯಪುರ ಗ್ರಾಪಂ ಉಪಾಧ್ಯಕ್ಷರಾಗಿ ಆಯ್ಕೆಯಾದ ಭೈರೇಶ್ ಅವರು ಶಾಸಕ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು. ಈ ವೇಳೆ ಗ್ರಾಪಂ ಸದಸ್ಯರು, ಮುಖಂಡರು ಹಾಜರಿದ್ದರು.



ತಿ.ನರಸೀಪುರ ತಾಲೂಕಿನ ಮೆಲ್ಲಹಳ್ಳಿ ಡೈರಿಗೆ ಭೇಟಿ ನೀಡಿದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು. ಈ ವೇಳೆ ಡೈರಿ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಚಿಕ್ಕಣ್ಣಗೌಡ, ಜಿಪಂ ಮಾಜಿ ಸದಸ್ಯರಾದ ಸಿದ್ದೇಗೌಡ, ಹಾರೋಹಳ್ಳಿ ಮೆಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದೇವ್, ನಿರ್ದೇಶಕರಾದ ಸೌಮ್ಯ, ಚಿನ್ನಸ್ವಾಮಿ, ಮಾದಪ್ಪ, ಸೋಮಶೇಖರ್, ಸಿಇಓ ನಾಗಣ್ಣ ಇನ್ನಿತರರಿದ್ದರು.



ಸಾರಿಗೆ ಬಸ್ ಚಾಲಕ ಮಹೇಶ್, ನಿರ್ವಾಹಕ ಸೋಮೇಶ್ ಅವರನ್ನು ಸರಗೂರು ಪಟ್ಟಣದ ವರ್ತಕರ ಸಂಘದ ಮಾಜಿ ಅಧ್ಯಕ್ಷ ಸುರೇಶ್ ಜೈನ್, ಜೆಎಸ್‌ಎಸ್ ಮುಖ್ಯ ಶಿಕ್ಷಕ ಮಹಮದ್ ಅಂಜುಂಪಾಷ, ಕೆಎಸ್‌ಆರ್‌ಟಿಸಿ ಕಾರ್ಯ ನಿರ್ವಹಣಾಧಿಕಾರಿ ಬಸವಣ್ಣ, ವೈದ್ಯಾಧಿಕಾರಿ ಡಾ.ಅಶೋಕ್, ವರ್ತಕರ ಸಂಘದ ಉಪಾಧ್ಯಕ್ಷ ಎಸ್.ಪಿ.ಪ್ರಸಾದ್, ಲಯನ್ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಎಸ್.ಎಸ್. ಸೋಮಪ್ರಭ, ಶಾಲಾ ಶಿಕ್ಷಕರಾದ ಮಲ್ಲಿಕಾರ್ಜುನ, ಲೋಕೇಶ್, ರಾಮೇಗೌಡ, ಜೆ.ಡಿ.ಎಸ್. ಮುಖಂಡರಾದ ಎಂ.ನಾಗರಾಜು, ಅನಿಲ್‌ಆಚಾರ್ ಹಾಗೂ ಪ್ರಯಾಣಿಕರು ಸನ್ಮಾನಿಸಿದರು.

ದೇಶದ ಸಾರ್ವಭೌಮತೆ, ಸಂವಿಧಾನ ರಕ್ಷಣೆ ಬಿಜೆಪಿಯಿಂದ ಸಾಧ್ಯ

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯ್ ವರ್ಗಿಯಾ

ಮೈಸೂರು, ಜು.10(ಎಸ್‌ಬಿಡಿ)– ದೇಶದ ಸಾರ್ವಭೌಮತೆ ಹಾಗೂ ಸಂವಿಧಾನ ರಕ್ಷಣೆ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯ್ ವರ್ಗಿಯ ಹೇಳಿದರು.

ಮೈಸೂರಿನ ರಿಂಗ್‌ರಸ್ತೆಯ ಕಲ್ಯಾಣ ಮಂಟಪದಲ್ಲಿ ನಡೆದ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರ ನಗರ ಮಂಡಲದ ಬೂತ್ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಆರ್ಥಿಕವಾಗಿ ಸದೃಢವಾಗಿ ಬೆಳೆಯುತ್ತಿದೆ. ವಿಶ್ವದಾದ್ಯಂತ ನಮ್ಮ ದೇಶ ಹಾಗೂ ಪ್ರಧಾನಿಯವರ ಪ್ರತಿಷ್ಠೆ ಪಸರಿಸಿದೆ. ಬಿಜೆಪಿ ಯಾವುದೇ ಜಾತಿ ಧರ್ಮದ ಭೇದವಿಲ್ಲದೆ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್' ಏಕಮಾತ್ರ ನೀತಿಯಡಿ ಆಡಳಿತ ನಡೆಸಿದೆ. ಅನ್ಯ ಪಕ್ಷಗಳು ತುಷ್ಟೀಕರಣ ನೀತಿಯಲ್ಲಿ ತೊಡಗಿರುವ ಈ ಪರಿಸ್ಥಿತಿಯಲ್ಲಿ ದೇಶದ ಸಾರ್ವಭೌಮತೆ ಹಾಗೂ ಸಂವಿಧಾನ ರಕ್ಷಣೆ ಬಿಜೆಪಿಯಿಂದ ಮಾತ್ರ ಸಾಧ್ಯವಾಗಲಿದೆ ಎಂದರು.



ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲ ಬೂತ್ ಸಮಿತಿ ಸಭೆಯಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯ್ ವರ್ಗೀಯ ಅವರನ್ನು ಅಭಿನಂದಿಸಲಾಯಿತು.

'ಗರೀಬಿ ಹಟಾವೋ' ಕಾಂಗ್ರೆಸ್‌ನ ಘೋಷಣೆ ಮಾತ್ರವಾಗಿದ್ದು, ಅದರಂತೆ ನಡೆದುಕೊಳ್ಳಲು ಆ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಆದರೆ ಪ್ರಧಾನಿ ಮೋದಿಯವರು ಪ್ರಧಾನ್ ಮಂತ್ರಿ ಆವಾಸ್ ಯೋಜನೆಯಡಿ ಬಡವರಿಗೆ 3 ಕೋಟಿ ಮನೆಗಳನ್ನು ನೀಡಿದ್ದಾರೆ. ಕಿಸಾನ್ ಸಮ್ಮಾನ್ ಯೋಜನೆ ಮೂಲಕ ಅನ್ನದಾತ ರೈತರ ಅಭಿವೃದ್ಧಿಗೆ ಕಟಿಬದ್ಧರಾಗಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಆರ್ಥಿಕ ಸಂಕಷ್ಟದ ನಡುವೆಯೂ ಬಡವರ ಬಗ್ಗೆ ಹಿತ ಚಿಂತನೆ ಮಾಡಿ ವ್ಯಕ್ತಿಯೊಬ್ಬರಿಗೆ 5 ಕೆಜಿ ಅಕ್ಕಿ ವಿತರಿಸಲಾಗಿದೆ. ಇಂತಹ ಸಾಕಷ್ಟು ಕ್ರಮ ಹಾಗೂ ಕಾರ್ಯಕ್ರಮಗಳ ಮೂಲಕ ಸಮರ್ಥ ಆಡಳಿತ ನೀಡಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ನಗರಾಧ್ಯಕ್ಷರಾದ ಟಿ.ಎಸ್.ಶ್ರೀವತ್ಸ ಪಕ್ಷದ ಮೈಸೂರು ಉಸ್ತುವಾರಿಯಾದ ಶಾಸಕ ತುಳಸಿ ಮುನಿರಾಜುಗೌಡ, ವಿಭಾಗ ಪ್ರಭಾರಿ ಮೈ.ವಿ.ರವಿಶಂಕರ್, ನಗರ ಪ್ರಭಾರಿ ಹೀರೇಂದ್ರ ಶಾ, ಜಿ.ಎಂ.ಮಹೇಶ್, ಗೋಪಾಲರಾವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಅರುಣ್ ಕುಮಾರ್ ಗೌಡ, ಪಾಲಿಕೆ ಸದಸ್ಯರಾದ ಆರ್.ಕೆ.ಶರತ್, ಲಕ್ಷ್ಮಿ ಕಿರಣ್, ನಗರ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್, ಗಿರಿಧರ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಹೆಚ್.ಜಿ.ರಾಜಮಣಿ, ಈರೇಗೌಡ, ಉಪಾಧ್ಯಕ್ಷರಾದ ರಾಕೇಶ್ ಭಟ್, ಶಿವಕುಮಾರ ಸೇರಿದಂತೆ 59 ಬೂತ್‌ಗಳ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು.

4 ದೇಶಗಳ ರಾಯಭಾರಿಗಳನ್ನು ವಜಾಗೊಳಿಸಿದ ಝೆಲೆನ್ಸ್ಕಿ

ಕೀವ್, ಜು.10– ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಭಾರತ ಸೇರಿದಂತೆ 4 ದೇಶಗಳ ರಾಯಭಾರಿಗಳನ್ನು ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ.

ಭಾರತ, ಜರ್ಮನಿ, ಜೆಕ್‌ಗಣರಾಜ್ಯ, ನಾರ್ವೆ ಮತ್ತು ಹಂಗೇರಿ ದೇಶಗಳ ರಾಯಭಾರಿಗಳನ್ನು ಝೆಲೆನ್ಸ್ಕಿ ವಜಾಗೊಳಿಸಿರುವ ಬಗ್ಗೆ ಅಧಿಕೃತವಾಗಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಆದರೆ ಯಾವ ಕಾರಣಕ್ಕೆ ವಜಾಗೊಳಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಈ ಹಿಂದೆ ರಷ್ಯಾ, ಉಕ್ರೇನ್ ವಿರುದ್ಧ ಯುದ್ಧ ಸಾರಿದಾಗ ಉಕ್ರೇನ್‌ಗೆ ಅಂತಾರಾಷ್ಟ್ರೀಯ ಬೆಂಬಲ ಮತ್ತು ಮಿಲಿಟರಿ ಸಹಾಯವನ್ನು ಹೆಚ್ಚಿಸಲು ಝೆಲೆನ್ಸ್ಕಿ ತನ್ನ ರಾಜತಾಂತ್ರಿಕರ ಬಳಿ ಮನವಿ ಮಾಡಿಕೊಂಡಿದ್ದರು. ಆದರೆ ಈ ವೇಳೆ ಯಾವುದೇ ನೆರವು ಸಿಕ್ಕಿರಲಿಲ್ಲ. ಆದರೂ ರಷ್ಯಾದೊಂದಿಗೆ ನಿರಂತವಾಗಿ ಯುದ್ಧ ಮಾಡಿ ದೇಶವನ್ನು ಉಳಿಸಿಕೊಳ್ಳಲು ಉಕ್ರೇನ್ ಹೋರಾಡುತ್ತಿದೆ. ಯುದ್ಧ ನಡೆಯುತ್ತಿರುವಂತೆ ಶಕ್ತಿಶಾಲಿ ರಾಕೆಟ್ ಲಾಂಚರ್‌ಗಳನ್ನು ಒಳಗೊಂಡಂತೆ ಕೈವ್‌ಗೆ ಹೊಸ ಮಿಲಿಟರಿ ನೆರವು ನೀಡುವುದಾಗಿ ಯುನೈಟೆಡ್ ಸ್ಟೇಟ್ಸ್ ಭರವಸೆ ನೀಡಿದೆ.


ಇತ್ತ ರಷ್ಯಾದ ಪಡೆಗಳು ಯುದ್ಧ ಮುಂದುವರಿಸಿದ್ದು ಉಕ್ರೇನ್‌ನ ಪೂರ್ವ ಡೊನೆಟ್ಸ್ಕ್ ಪ್ರದೇಶದ ಮೇಲೆ ನಿರಂತರ ಶೆಲ್ ದಾಳಿಯನ್ನು ಮುಂದುವರಿಸಿದೆ. ನೆರೆಯ ಲುಗಾನ್ಸ್ಕ್ ಪ್ರದೇಶದ ನಗರಗಳನ್ನು ವಶಪಡಿಸಿಕೊಳ್ಳಲು ರಷ್ಯಾ ಮುಂದಾಗಿದ್ದ ವೇಳೆ ಉಕ್ರೇನ್ ಸಮರ್ಥವಾಗಿ ಎದುರಿಸಿ ರಷ್ಯಾ ಪಡೆಯನ್ನು ಹಿಮ್ಮೆಟ್ಟಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.10 – ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ವತಿಯಿಂದ ಸಂಘದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಗುತ್ತಿದೆ.

ಈ ಸಂಬಂಧ 2021–22ನೇ ಸಾಲಿನ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.30 ಅಂತಿಮ ದಿನಾಂಕ. ಹೆಚ್ಚಿನ ವಿವರಗಳಿಗೆ ಮೊ. 9008071456 ಸಂಪರ್ಕಿಸಬಹುದು.

ಪ್ರಥಮ ವರ್ಷದ ಸವಿನೆನಪು



ಲೇ॥ ಚಾಮಣ್ಣನ ಮಗ
ಪೈ॥ ನಿಂಗಯ್ಯ / ಕರಗಪ್ಪ

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ದುಃಖತಪ್ತರು: ಶ್ರೀಮತಿ ಚಿಕ್ಕೋಳಮ್ಮ, ಗಂಡು ಮಕ್ಕಳು, ಹೆಣ್ಣು ಮಕ್ಕಳು ಹಾಗೂ ಮೊಮ್ಮಕ್ಕಳು


ಮೊದಲನೇ ವರ್ಷದ ಸವಿನೆನಪು



ಜಯರಾಮೇಗೌಡರು
2098 1ನೇ ಹಂತ ರಾಜೀವ್‌ನಗರ , ಮೈಸೂರು.

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಧರ್ಮಪತ್ನಿ ಶ್ರೀಮತಿ ಜಯಮ್ಮ ಹಾಗೂ ಮಕ್ಕಳಾದ ಆರ್. ನಾಗೇಶ್‌ಗೌಡ, ಆರ್. ಬಸವರಾಜು, ಸರೋಜ, ಲತಾ, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಸ್ನೇಹಿತರು ಬಂಧುಮಿತ್ರರು

ಹುಟ್ಟುಹಬ್ಬದ ಶುಭಾಶಯಗಳು



ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಪ್ರವರ್ಧಮಾನಕ್ಕೆ ಬರುತ್ತಿರುವ ನಮ್ಮ ನೆಚ್ಚಿನ
ಡಾ॥ ಎಸ್. ಮುರಳಿಯವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಶುಭಕೋರುವವರು
ಅಶ್ವತ್ ಭಾವಸಾರ್

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಕಾರ್ತಿಕ್ ಕುಮಾರ್ ಎಂ.ಬಿ

ಇವರು ದಿ. 02.07.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ.12.07.2022 ಮಂಗಳವಾರ ಬೆಳಿಗ್ಗೆ 11.30ಕ್ಕೆ ಸ್ವಗೃಹ #460, ಮಂಚೇಗೌಡನಕೊಪ್ಪಲ್ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ಭೋಜನ: ಮಧ್ಯಾಹ್ನ 12.30ಕ್ಕೆ, ಸ್ಥಳ: ಮಂಚೇಗೌಡನ ಕೊಪ್ಪಲು ಸಮುದಾಯ ಭವನ.
ದುಃಖತಪ್ತರು:
ತಾಯಿ ಶ್ರೀಮತಿ ಮೀನಾಕ್ಷಿ, ತಂದೆ ಶ್ರೀ ಬೆಟ್ಟೇಗೌಡ ನಿಂಗಮ್ಮನವರು ಮತ್ತು ಕುಟುಂಬವರ್ಗದವರು, ಬಂಧು-ಮಿತ್ರರು ಹಾಗೂ ಮಂಚೇಗೌಡನಕೊಪ್ಪಲಿನ ಸಕಲ ಗ್ರಾಮಸ್ಥರು

ಸಾರ್ವಜನಿಕ ಎಚ್ಚರಿಕೆ ನೋಟೀಸ್

ನನ್ನ ಕಕ್ಷಿದಾರರಾದ ಮೆ. ಮಂಗಳೂರು ಗಣೇಶ ಬೀಡಿ ವರ್ಕ್ಸ್, ಪ್ರಧಾನ ಕಛೇರಿ, ವಿನೋಬಾ ರಸ್ತೆ, ಮೈಸೂರು ಇವರ ಉತ್ಪನ್ನವಾದ ಮಂಗಳೂರು ಗಣೇಶ ಬೀಡಿಯನ್ನು ಮೈಸೂರು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಕೆಲವು ಸ್ಥಳೀಯರು ಕಳಪೆ ಗುಣಮಟ್ಟದ ಪದಾರ್ಥಗಳನ್ನು ಉಪಯೋಗಿಸಿಕೊಂಡು ಹಾಗೂ ಕಾನೂನಿನಡಿಯಲ್ಲಿ ನೋಂದಾಯಿತ ಲೇಬಲ್ ಮತ್ತು ರ್‍ಯಾಪರ್‌ನ್ನು ನಕಲಿಯಾಗಿ ಮುದ್ರಿಸಿ ಅವುಗಳನ್ನು ಉಪಯೋಗಿಸಿಕೊಂಡು ಬೀಡಿಯನ್ನು ತಯಾರಿಸಿ, ಕೆಲವೊಂದು ಅಂಗಡಿಯವರ / ವ್ಯಾಪಾರಿಗಳ ಜೊತೆ ಒಳಸಂಚು ಮಾಡಿಕೊಂಡು ಮಾರಾಟ ಮಾಡಿ, ನನ್ನ ಕಕ್ಷಿದಾರರ ಗ್ರಾಹಕರನ್ನು ಮೋಸಗೊಳಿಸುತ್ತಿರುವುದು ಹಾಗೂ ಅವರ ಹೆಸರಿಗೆ ಧಕ್ಕೆ ಉಂಟು ಮಾಡುತ್ತಿರುವುದು ವಿಶ್ವಾಸಾರ್ಹ ಮೂಲಗಳಿಂದ ಗಮನಕ್ಕೆ ಬಂದಿರುತ್ತದೆ. ಇದು ಕಾನೂನಿನ ವಿರುದ್ಧವಾಗಿದ್ದು, ದಂಡಾರ್ಹ ಮತ್ತು ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಕಕ್ಷಿದಾರರು ಈ ದಂಧೆಯಲ್ಲಿ ಶಾಮೀಲಾಗಿರುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಈ ದಂಧೆಯಲ್ಲಿ ತೊಡಗಿರುವವರ ಬಗ್ಗೆ ಸಾಕ್ಷಿ ಸಮೇತ ಸುಳಿವು ನೀಡಿ ಕಾನೂನು ಕ್ರಮ ಕೈಗೊಳ್ಳಲು ಸಹಕರಿಸುವ ವ್ಯಕ್ತಿಗಳಿಗೆ ಸೂಕ್ತ ಬಹುಮಾನ ನೀಡಲಾಗುವುದು ಹಾಗೂ ಅವರ ಹೆಸರನ್ನು ಗೌಪ್ಯವಾಗಿಡಲಾಗುವುದು.

ಸಂಪರ್ಕಿಸಬೇಕಾದ ವಿಳಾಸ:
ಮಂಗಳೂರು ಗಣೇಶ ಬೀಡಿ ವರ್ಕ್ಸ್, ವಿನೋಬಾ ರಸ್ತೆ,
ಮೈಸೂರು–570 005. ಫೋನ್: 0821–2420241.

Sd/- Dinesh Solanki, B.Com., LL.M.
Advocate, KAR E.No. 1822/2007
#1197, 12/2, Side Entrance, K.R.B. Road,
Chamarajapuram, Mysuru-570 005
Mob: +91 934 34 30 011

